ಸಂಪುಟ : 13 Volume | ಸಂಚಿಕೆ : 196 Issue | ಪುಟಗಳು : 08 Pages | ಬುಧುವಾರ 17 ಸೆಪ್ಟೆಂಬರ್ 2025 | ₹2 | RNINO:KARKAN/2011/48371 | BDR/054/2026-20274 | www.mallammanudi.in | mallammanudi@gmail.com | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

MN ಸತ್ಯಮೇವ ಜಯತೆ ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

" ಮನುಷ್ಯ ಉರಿಯುವ ದೀಪದಂತೆ ಆಸಕ್ತಿ ಅದಕ್ಕೆ ಹಾಕುವ ಎಣ್ಣೆಯಂತೆ "

- ಎ.ಪಿ.ಜೆ.ಅಬ್ದುಲ್ ಕಲಾಮ .

ಬ್ಯಾಂಕಿನ ಶಾಖೆ ಆರಂಭಿಸಲು ಚಿಂತನೆ 2

ಹಿಂದಿ ದಿವಸ ಆಚರಣೆ 4

ಮುದ್ನಾಳ ಪುಣ್ಯಸ್ಮರಣೆ 8

# ವಿಪಕ್ಷಗಳಿಗೆ ಕ್ಷೇತ್ರ ಅಭಿವೃದ್ಧಿಗೆ 25 ಕೋಟಿ ಬಿಡುಗಡೆ ಮಾಡಿದ ಸಿಎಂ

ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು:ಸೆ.16: ವಿಪಕ್ಷಗಳಿಗೆ ಕ್ಷೇತ್ರದಅಭಿವೃದ್ಧಿಗೆಅನುದಾನಬಿಡುಗಡೆಮಾಡದೇಆಕ್ರೋಶಕ್ಕೆ ಕಾರಣವಾಗಿದ್ದ ಸಿಎಂ ಸಿದ್ದರಾಮಯ್ಯ ಕೊನೆಗೂ ವಿಪಕ್ಷಗಳಿಗೆ ಅನುದಾನ ರಿಲೀಸ್ ಮಾಡಿದ್ದಾರೆ. ಪ್ರತಿ ವಿಧಾನಸಭೆ ಕ್ಷೇತ್ರಕ್ಕೆ ತಲಾ 25 ಕೋಟಿಯಂತೆ ಅನುದಾನ ರಿಲೀಸ್ ಮಾಡಲು ಸಿಎಂ ಗ್ರೀನ್ ಸಿಗ್ನಲ್ ಕೊಟ್ಟಿದ್ದಾರೆ.ಸಿಎಂಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ ಹಣ ಬಿಡುಗಡೆ ಮಾಡಲಾಗುತ್ತಿದೆ. ಹಿಂದೆ ಕಾಂಗ್ರೆಸ್ ಶಾಸಕರಿಗೆ ಮಾತ್ರ 50 ಕೋಟಿ ರೂ. ಅನುದಾನ ಸಿಎಂ ರಿಲೀಸ್ ಮಾಡಿದ್ದರು. ಇದು ವಿಪಕ್ಷಗಳ ಕೆಂಗಣ್ಣಿಗೆ ಗುರಿಯಾಗಿತ್ತು.



ಅಧಿವೇಶನದಲ್ಲಿ ಈ ಬಗ್ಗೆ ವಿಪಕ್ಷಗಳು ವಿರೋಧ ಮಾಡಿದ್ದವು. ಇದೀಗ ವಿಪಕ್ಷಗಳ ಶಾಸಕರಿಗೂ ಸಿಎಂ ಅನುದಾನ ಬಿಡುಗಡೆ ಮಾಡಿದ್ದಾರೆ. ಲೋಕೋಪಯೋಗಿ, ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಅಡಿ ಬರುವ ರಸ್ತೆ, ಸೇತುವೆ ಹಾಗೂ ನಗರಾಭಿವೃದ್ಧಿ ಇಲಾಖೆ ಅಡಿ ಬರೋ ನಗರ ಪ್ರದೇಶ ಕಾಮಗಾರಿಗಳಿಗೆ 18.75 ಕೋಟಿ ರೂ. ಬಿಡುಗಡೆ ಹಾಗೂ ವಿವೇಚನಾಧಿಕಾರದಡಿ ವಿಧಾನಸಭೆ ಸದಸ್ಯರು ಆಯ್ಕೆ ಮಾಡಬಹುದಾದ ಇತರ ಇಲಾಖೆ ಕಾಮಗಾರಿಗಳಿಗೆ 6.25 ಕೋಟಿ ರೂ. ಬಿಡುಗಡೆ ಸೇರಿ ಒಟ್ಟು 25 ಕೋಟಿ ರೂ. ಅನುದಾನ ಬಿಡುಗಡೆಗೆ ಸಿಎಂ ಗ್ರೀನ್ ಸಿಗ್ನಲ್ ಕೊಟ್ಟಿದ್ದಾರೆ.

## ಪ್ರತ್ಯೇಕ ಸಚಿವಾಲಯ ಸ್ಥಾಪನೆ



ಕಲಬುರಗಿ:ಸೆ.16:ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿಗಾಗಿ ಕೆಲಸಗಳನ್ನು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಮತ್ತು ಅಭಿವೃದ್ಧಿ ಕಾಮಗಾರಿಗಳ ಮೇಲುಸ್ತುವಾರಿ ಮಾಡಲು ಕಲ್ಯಾಣ ಕರ್ನಾಟಕ ಪ್ರದೇಶ ಸಚಿವಾಲಯ ಸ್ಥಾಪನೆಗೆ ಇಂದು ಸಚಿವ ಸಂಪುಟ ಸಭೆಯು ಅನುಮೋದನೆ ನೀಡಿದೆ ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.ಈ ಕುರಿತು ತಮ್ಮ ಎಕ್ಸ್ ಖಾತೆಯಲ್ಲಿ ಬರೆದುಕೊಂಡಿರುವ ಅವರು,ಸಚಿವಾಲಯ ಸ್ಥಾಪನೆಯಾಗಿರುವುದರಿಂದ ಕಲ್ಯಾಣ ಕರ್ನಾಟಕ ಪ್ರದೇಶದ ಮತ್ತಷ್ಟು ಅಭಿವೃದ್ಧಿ ಸಾಧ್ಯವಾಗಲಿದೆ. ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಕಾಮಗಾರಿಗಳನ್ನು ಸಕಾಲದಲ್ಲಿ ಪೂರೈಸುವ ಸಲುವಾಗಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಹಾಗೂ ಕಲ್ಯಾಣ ಕರ್ನಾಟಕ ಪ್ರದೇಶ ವ್ಯಾಪ್ತಿಯ 7 ಜಿಲ್ಲೆಗಳ ಜಿಲ್ಲಾಧಿಕಾರಿಗಳ ಕಚೇರಿಗೆ ಹೆಚ್ಚುವರಿ ಹುದ್ದೆಗಳನ್ನು ಸೃಷ್ಟಿಸುವ ಮೂಲಕ ಈ ಕಚೇರಿಗಳನ್ನು ಮತ್ತಷ್ಟು ಬಲಪಡಿಸಲೂ ಸಚಿವ ಸಂಪುಟ ನಿರ್ಧಾರ ತೆಗೆದುಕೊಂಡಿದೆ.ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಯ ನಿಟ್ಟನಲ್ಲಿ ಹೊಸ ಸಚಿವಾಲಯವನ್ನು ಸೃಷ್ಟಿಸಲು ಕಾರಣರಾದ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಹಾಗೂ ಸಚಿವ ಸಂಪಟದ ನನ್ನೆಲ್ಲ ಸಹೋದ್ಯೋಗಿಗಳಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ ಎಂದು ಸಚಿವರು ಹೇಳಿದ್ದಾರೆ.

## ಉಳ್ಳವರು ಮೀಸಲಾತಿ ಬಿಟ್ಟು ಕೊಡಬೇಕು

ಮಲ್ಲಮ್ಮ ನುಡಿ ವಾರ್ತೆ ಮೈಸೂರು:ಸೆ.16: ಉಳ್ಳವರು ಮೀಸಲಾತಿ ಬಿಟ್ಟು ಕೊಡಬೇಕು. ಉಳ್ಳವರಿಗೆ ಮೀಸಲಾತಿ ತೆಗೆದು ಹಾಕುವಕಾರ್ಯ ಸರ್ಕಾರಮಾಡಲಿ ಎಂದು ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಆಗ್ರಹಿಸಿದರು. ಮೈಸೂರಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಮೀಸಲಾತಿ ಮೂಲಕ ಮೇಲೆ ಬಂದವರು ಆ ಮೀಸಲಾತಿ ಬಿಟ್ಟು ಕೊಡಲಿ. ಖರ್ಗೆ ಮಗನಿಗೂ ಮೀಸಲಾತಿ, ಊರಲ್ಲಿ ತಮಟೆ ಹೊಡೆಯುವ ದಲಿತನಿಗೂ ಮೀಸಲಾತಿ. ವಿಶ್ವನಾಥ್ ಮಗನಿಗೂ ಮೀಸಲಾತಿ, ಕುರಿ ಕಾಯುವವನ ಮಗನಿಗೂ ಮೀಸಲಾತಿ. ಸಿದ್ದರಾಮಯ್ಯ ಮಗನಿಗೂ ಮೀಸಲಾತಿ, ಬಡ ಕುರುಬರಿಗೂ ಮೀಸಲಾತಿ. ಇದು ಸರಿನಾ ಹೇಳಿ ಎಂದು ಪ್ರಶ್ನಿಸಿದರು.

## ಯುಕೆಪಿ 3ನೇ ಹಂತ: ನೀರಾವರಿ ಭೂಮಿಗೆ 40 ಲಕ್ಷ ರೂ. ಪರಿಹಾರ ನೀಡಲು ಸಂಪುಟ ನಿರ್ಧಾರ

ಮಲ್ಲಮ್ಮ ನುಡಿವಾರ್ತೆ ಬೆಂಗಳೂರು:ಸೆ.16:ಕೃಷ್ಣಾ ಮೇಲ್ದಂಡೆಯೋಜನೆಯ(ಯುಕೆಪಿ) ಮೂರನೇಹಂತದ ಭೂಸ್ವಾಧೀನಕ್ಕೆ ರಾಜ್ಯ ಸರ್ಕಾರ ಮಂಗಳವಾರ ಪರಿಹಾರ ನಿಗದಿ ಮಾಡಿದ್ದು, ನೀರಾವರಿ ಭೂಮಿಗೆ ಎಕರೆಗೆ 40 ಲಕ್ಷ ರೂ. ಮತ್ತು ಒಣ ಭೂಮಿಗೆ ಎಕರೆಗೆ 30 ಲಕ್ಷ ರೂ. ಪರಿಹಾರವನ್ನು ನೀಡಲು ನಿರ್ಧರಿಸಿದೆ.ಈ ಸಂಬಂಧ ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ನಡೆದ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಯುಕೆಪಿ ಮೂರನೇ ಹಂತವು ಆಲಮಟ್ಟಿ ಅಣೆಕಟ್ಟಿನ ಎತ್ತರವನ್ನು 519 ರಿಂದ 524 ಮೀಟರ್‌ಗೆ ಹೆಚ್ಚಿಸುವುದನ್ನು ಒಳಗೊಂಡಿರುತ್ತದೆ. ಇದು ಶೇಖರಣಾ ಸಾಮರ್ಥ್ಯವನ್ನು 100 ಟಿಎಂಸಿ ಅಡಿ ಹೆಚ್ಚಿಸುತ್ತದೆ. ಇದಕ್ಕೆ 1.33 ಲಕ್ಷ ಎಕರೆ ಭೂಮಿ ಸ್ವಾಧೀನಪಡಿಸಿಕೊಳ್ಳುವ ಅಗತ್ಯವಿದೆ ಇದರಲ್ಲಿ ಮುಳುಗಡೆಯಾಗುವ 75,563 ಎಕರೆ ಭೂಮಿ ಸಹ ಸೇರಿದೆ. ಈ ಪ್ರದೇಶದ ರೈತರು, ಸಚಿವರು ಮತ್ತು ಶಾಸಕರು ನೀರಾವರಿ ಭೂಮಿಗೆ ಎಕರೆಗೆ ಕನಿಷ್ಠ 40 ಲಕ್ಷ ರೂ. ಮತ್ತು ಒಣಭೂಮಿಗೆ ಎಕರೆಗೆ 30 ಲಕ್ಷ ರೂ. ಪಾವತಿಸಬೇಕೆಂದು ಬೇಡಿಕೆ ಇಟ್ಟಿದ್ದರು. ಅದಕ್ಕೆ ಅನುಗುಣವಾಗಿ ನಾವು ಸಂಪುಟದಲ್ಲಿ ಅದೇ ಮೊತ್ತವನ್ನು ಪಾವತಿಸಲು ನಿರ್ಧರಿಸಿದ್ದೇವೆ ಎಂದು ಸಿದ್ದರಾಮಯ್ಯ ಹೇಳಿದರು.

## ಬಾಲಕಿಯನ್ನು ಕೊಂದ ಮಲತಾಯಿ



ಮಲ್ಲಮ್ಮ ನುಡಿವಾರ್ತೆ ಬೀದರ್:ಸೆ.16:ಬಾಲಕಿಗೆ ಆಟ ಆಡಿಸುವ ನೆಪದಲ್ಲಿ ಟೆರಸ್‌ಗೆ ಕರೆದೊಯ್ದು ಮೂರನೇ ಮಹಡಿಯಿಂದ ಮಲತಾಯಿ ತಳ್ಳಿ ಕೊಲೆ ಮಾಡಿದ ಅಮಾನವೀಯ ಘಟನೆ ಬೀದರ್ ನಗರದ ಆದರ್ಶ ಕಾಲೋನಿಯಲ್ಲಿ ನಡೆದಿದೆ.7 ವರ್ಷದ ಸಾನ್ವಿ ಮೃತ ಬಾಲಕಿ ಹಾಗೂ ಆರೋಪಿಯನ್ನು ರಾಧಾ ಎಂದು ಗುರುತಿಸಲಾಗಿದೆ. ಆ.27ರಂದು ಮಲತಾಯಿ ರಾಧಾ ಬಾಲಕಿಗೆ ಆಟ ಆಡಿಸುವ ನೆಪದಲ್ಲಿ 3ನೇ ಮಹಡಿಗೆ ಕರೆದೊಯ್ದಿದ್ದಳು. ಈ ವೇಳೆ ಯಾರಿಗೂ ಕಾಣದಂತೆ ತಳ್ಳಿ ಕೊಲೆ ಮಾಡಿದ್ದಳು. ಆ ದಿನ ಎಲ್ಲರೂ ಸಾನ್ವಿ ಆಯತಪ್ಪಿ ಬಿದ್ದಳು ಎಂದು ನಂಬಿದ್ದರು. ಆ.28ರಂದು ಮೃತ ಬಾಲಕಿ ತಂದೆ ಸಿದ್ಧಾಂತ ಗಾಂಧಿಗಂಜ್ ಠಾಣೆಯಲ್ಲಿ ಆಕಸ್ಮಿಕ ಸಾವು ದೂರು ನೀಡಿದ್ದರು.ಸೆ.12ರಂದು ಮೃತ ಬಾಲಕಿ ತಂದೆ ಸಿದ್ಧಾಂತಗೆ ಪಕ್ಕದ ಮನೆಯವರು ವಿಡಿಯೋವೊಂದನ್ನು ಕಳುಹಿಸಿದ್ದರು. ವಿಡಿಯೋದಲ್ಲಿ ಬಾಲಕಿ ಸಾವನ್ನಪ್ಪಿದ ದಿನ ಆಕೆಯ ಜೊತೆ ಮಲತಾಯಿ ರಾಧಾ ಅನುಮಾನಾಸ್ಪದವಾಗಿ ಓಡಾಡಿರುವುದು ಕಂಡುಬಂದಿದೆ.




ಏಷ್ಯಾ ಕಪ್:ಶ್ರೀಲಂಕಾ ಹಾಂಕಾಂಗ್ ತಂಡದ ವಿರುದ್ಧ 4 ವಿಕೇಟ್‌ಗಳ ಜಯ ಸಾಧಿಸಿದೆ.

# ಬೀದರ ಮತ್ತು ಚಿಟಗುಪ್ಪಾ ತಾಲ್ಲೂಕಾ ಕೇಂದ್ರದಲ್ಲಿ ದಿ ಗಾಂಧಿ ಗಂಜ್ ಕೋ-ಆಪರೇಟಿವ್ ಬ್ಯಾಂಕಿನ ಶಾಖೆ ಆರಂಭಿಸಲು ಚಿಂತನೆ: ವಿಜಯಕುಮಾರ ಪಾಟೀಲ ಗಾದಗಿ




ಮಲ್ಲಮ್ಮ ನುಡಿ ವಾರ್ತೆ ಬೀದರ ಸೆ.14 : ದಿ ಗಾಂಧಿ ಗಂಜ ಕೋ–ಆಪರೇಟಿವ್ ಬ್ಯಾಂಕಿನಸೇವೆಯು ನಿರಂತರವಾಗಿ ಸಾಗುತ್ತಿದ್ದು ಬ್ಯಾಂಕ್ ಪ್ರಗತಿ ಪಥದಲ್ಲಿ ಅಡಿಟ್‌ನಲ್ಲಿ "ಎ" ಗ್ರೇಡ್ ಹೊಂದಿರುವ ಬ್ಯಾಂಕಾಗಿದ್ದು ಈಗಾಗಲೇ ಬೀದರ, ಭಾಲ್ಕಿ, ಬಸವಕಲ್ಯಾಣ, ಹುಮನಾಬಾದ ಮತ್ತು ಔರಾದ (ಬಿ)ನಲ್ಲಿ ಶಾಖೆಗಳನ್ನು ಹೊಂದಿದ್ದು, ಮುಂಬರುವ ದಿನಗಳಲ್ಲಿ ಬೀದರ ನಗರ ಮತ್ತು ಚಿಟಗುಪ್ಪಾ ತಾಲ್ಲೂಕಾ ಕೇಂದ್ರದಲ್ಲಿ ಶಾಖೆಗಳನ್ನು ಆರಂಭ ಮಾಡಲು ಚಿಂತನೆ ಮಾಡಲಾಗುತ್ತಿದೆ. ಬ್ಯಾಂಕು ಪ್ರಸಕ್ತ ಸಾಲಿನಲ್ಲಿ 1,31,34,649.49 ರೂಪಾಯಿ ನಿವ್ವಳ ಲಾಭಗಳಿಸಿದೆ ಎಂದು ಬ್ಯಾಂಕಿನ ಅಧ್ಯಕ್ಷರಾದ ವಿಜಯಕುಮಾರ ಅಣ್ಣೆಪ್ಪಾ ಪಾಟೀಲ ಗಾದಗಿರವರು ಹೇಳಿದರು.

ಅವರು ಇಂದು 14–09–2025 ರಂದು ಬೆಳಿಗ್ಗೆ 11.00 ಗಂಟೆಗೆ ಬ್ಯಾಂಕಿನ 51ನೇ ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ವಾರ್ಷಿಕ ವರದಿ ಮಂಡಿಸಿ ಬ್ಯಾಂಕಿನ ಪ್ರಗತಿ ವಿವರಿಸುತ್ತಿದ್ದರು. ಈಗಾಗಲೇ ಪ್ಲಾಟಿನಮ್ ಡೆಬಿಟ್ ಕಾರ್ಡ್, ಯು.ಪಿ.ಐ., ಐ.ಎಂ.ಪಿ.ಎಸ್, ನ್ಯಾಚ್, ಆರ್.ಟಿ.ಜಿ.ಎಸ್, ಎನ್.ಇ.ಎಫ್.ಟಿ., ಲಾಕಾರ್ ಸೇವೆ ಸೇರಿದಂತೆ ಹಲವು ಸೌಲಭ್ಯಗಳನ್ನು ನೀಡಲಾಗುತ್ತಿದೆ ಎಂದು ತಿಳಿಸಿದರು. ಹಿರಿಯ ಸದಸ್ಯ ಶಿವಶರಣಪ್ಪಾ ವಾಲಿಯವರು ಮಾತನಾಡಿ ಬ್ಯಾಂಕಿನ ಸೇವೆಗೆ ಶ್ಲಾಘಿಸಿಹರ್ಷ ವ್ಯಕ್ತಪಡಿಸಿದರು. ಬಸವಣಪ್ಪಾ ನೇಳಗಿ ಅವರು ಮಾತಾಡಿ ಬ್ಯಾಂಕು ಪ್ರಗತಿ ಪಥದತ್ತ ಸಾಗುತ್ತಿರುವುದು ಹೆಮ್ಮೆಯ ಸಂಗತಿ ಎಂದರು. ಚಂದ್ರಶೇಖರ ಗಾದಾ, ಓಂಕಾರ ಮುದ್ದಾ, ರಾಜಕುಮಾರ ಕರಂಜಿ ಗಾದಗಿ, ವೀರಭದ್ರಪ್ಪಾ ಉಪ್ಪಿನ, ಎಸ್.ವಿ. ಕಲ್ಮಠ, ರವಿಕಾಂತ ಹೆಚ್, ಪಂಡಿತ ಪಾಟೀಲ, ಕುಶಾಲ ಯಾಬಾ, ನಾಗಭೂಷಣ ಕಮಠಾಣೆ, ಕಲ್ಲಯ್ಯಾ ಸ್ವಾಮಿರವರು ಮಾತಾಡಿ ಸಾಲದ ಮೇಲಿನ ಬಡ್ಡಿ ಕಡಿಮೆ ಮಾಡಿ ಎಂದರು, ನಾಗಶೆಟ್ಟಿ ಧರಮಪೂರ, ಜೈರಾಜ ಖಂಡ್ರೆ, ರಾಜಶೇಖರ ಮಿಟಕಾರಿ, ರಾಚಪ್ಪಾ ಪೋಲಕಪಳ್ಳಿ, ಶ್ರೀಮತಿ ಸುನಿತಾ ಹಂಗರಗಿ, ರಾಜಶೇಖರ ಗುನ್ನಳ್ಳಿ, ರವೀಂದ್ರಜಾಂತೆ, ಹಾವಶೆಟ್ಟಿಪಾಟೀಲ, ರವಿ ಹಾಲಹಳ್ಳಿ, ಸೋಮನಾಥ ಗಂಗಶೆಟ್ಟಿ, ಸೂರ್ಯಕಾಂತ ಚಿದ್ರೆ, ರತೀನ್ ಕಮಾಲ್, ರಾಜಕುಮಾರ ಮಂಗಲಗಿ ಕಾಡವಾದ, ಮಾತನಾಡಿ ಸದಸ್ಯರಿಗೆ ಸುವರ್ಣ ಮಹೋತ್ಸವಕ್ಕೆ ಕೃತಜ್ಞತೆ ಸಲ್ಲಿಸಿದರು. ಬಿ.ಎಸ್.ಪಾಟೀಲ ವಕೀಲರು ಹಾರೂರಗೇರಿ ಮಾತಾಡಿ ಸದಸ್ಯರ ಸುಸ್ತಿ ಸಾಲಗಾರರಿಗೆ ಮನವಲಿಸಿ ಸ್ನೇಹದಿಂದ ಸಾಲ ವಸೂಲಾತಿ ಮಾಡಲಾಗುತ್ತಿದೆ ಎಂದರು.

ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀಕಾಂತ ಶೆಟಕಾರರವರು ವಾರ್ಷಿಕ ವರದಿ ಓದಿ, ಬ್ಯಾಂಕಿನ ಮುಂಬರುವ 2025–26 ಸಾಲಿನ ಕಾರ್ಯ ಚಟುವಟಿಕೆಗಳ ಬಗ್ಗೆ ತಿಳಿಸುತ್ತಾ ಬ್ಯಾಂಕು 300.00 ಕೋಟಿ ರೂ. ಠೇವಣಿ ಸಂಗ್ರಹಿಸಲು, 200 ಕೋಟಿ ಸಾಲ ನೀಡಲು ಗುರಿ ಹೊಂದಿದ್ದು ದುಡಿಯುವ ಬಂಡುವಾಳ 340 ಕೋಟಿ ರೂ. ಗುರಿ ಇಟ್ಟುಕೊಳ್ಳಲಾಗಿದೆ. ಗ್ರಾಹಕರ ಸೇವೆಗಾಗಿ ಡಿಜಿಟಲ್ ಸೇವೆಗಳು ನೀಡಲಾಗುತ್ತಿದೆ. ಬೀದರ ನಗರದ ಹೊರ ವಲಯದಲ್ಲಿ ಸಹಕಾರಿ ಶಿಕ್ಷಣ ತರಬೇತಿ ಕೇಂದ್ರ ಆರಂಭಿಸಲಾಗುವುದು.

ಬ್ಯಾಂಕು 8,768 ಸದಸ್ಯತ್ವ ಹೊಂದಿದ್ದು, 5.54 ಕೋಟಿ ರೂ. ಷೇರು ಬಂಡವಾಳ, 260.27 ಕೋಟಿ ರೂ. ಠೇವಣಿ, ದುಡಿಯುವ ಬಂಡವಾಳ 300.00 ಕೋಟಿ ರೂ., ದುರ್ಬಲ ವರ್ಗದ ಸಾಲ 26.55 ಕೋಟಿ ರೂ. ಇದೆ ಎಂದು ಬ್ಯಾಂಕಿನ ಅಧ್ಯಕ್ಷರಾದ ವಿಜಯಕುಮಾರ ಅಣ್ಣೆಪ್ಪಾ ಪಾಟೀಲ ಗಾದಗಿರವರು ಹೇಳಿ ಸರ್ವಸದಸ್ಯರಿಗೆ ಕೃತಜ್ಞತೆ ಸಲ್ಲಿಸಿದರು.

ಸಭೆಯ ವೇದಿಕೆಯ ಮೇಲೆ ಬ್ಯಾಂಕಿನ ಉಪಾಧ್ಯಕ್ಷರಾದ ಸುನೀಲಕುಮಾರ ಬಿರಾದಾರ ಗುನ್ನಳ್ಳಿ, ನಿರ್ದೇಶಕರಾದ ಅಶೋಕಕುಮಾರ ಲಾಚುರಿಯೆ, ಕಾಶಿನಾಥ ಶೆಟಕಾರ, ಸೂರ್ಯಕಾಂತ ಶೆಟಕಾರ, ಡಿ.ವಿ. ಸಿಂದೋಲ್, ಜಯಕುಮಾರ ಕಾಂಗೆ, ಮಡಿವಾಳಪ್ಪಾ ಗಂಗಶೆಟ್ಟಿ, ಭರತ ಶೆಟಕಾರ, ಶಿವನಾಥ ಪಾಟೀಲ, ಅಮರನಾಥ ಫುಲೇಕರ, ವಿಶ್ವನಾಥ ಕಾಜಿ, ಉಮೇಶ ಮೂಲಿಮನಿ, ಶ್ರೀಮತಿ ಜ್ಯೋತಿ ಗೌರಶೆಟ್ಟಿ, ಶ್ರೀಮತಿ ಪ್ರವೀಣಾ ರಡ್ಡಿ, ವೃತ್ತಿಪರ ನಿರ್ದೇಶಕ ಮಲ್ಲಿಕಾರ್ಜುನ ಕಾರಬಾರಿ, ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀಕಾಂತ ಶೆಟಕಾರ, ಸಹಾಯಕ ಮುಖ್ಯನಿರ್ವಹಣಾಧಿಕಾರಿ ಶ್ರೀಮತಿ ಮಹಾನಂದಾ ಪಾಟೀಲ ಮತ್ತು ಸಲಹೆಗಾರ ವಿಶ್ವನಾಥ ಕೋಡಗಿ ಉಪಸ್ಥಿತರಿದ್ದರು.

ದೀಪಕ ವಾಲಿ, ಬಸವರಾಜ ಜಿ. ಶೆಟಕಾರ, ನೂತನ ವ್ಯವಸ್ಥಾಪನಾ ಮಂಡಳಿ ನಿರ್ದೇಶಕ ಕೆ. ರವೀಂದ್ರ ಖಾನಾಪೂರಕರ್, ಬಸವರಾಜ ಭಂಡೆ, ಗಂಗಶೆಟ್ಟಿ ಗೌರಶೆಟ್ಟಿ, ಸೋಮನಾಥ ಗಂಗಶೆಟ್ಟಿ, ಸಿ.ಎ. ಕಮಲ್ ಕಿಶೋರ ಅಟ್ಟಲ್, ರಾಜೇಂದ್ರರಡ್ಡಿ ಶೇರಿಕಾರ, ಸುನೀಲ ಮೊಟ್ಟೆ, ಪಂಡಿತ ಪಾಟೀಲ, ಶ್ರೀಮತಿ ವೀಣಾ ಜಲಾದಿ, ಶ್ರೀಮತಿ ವೀರೇಖಾ ಪಾಟೀಲ, ಶ್ರೀಮತಿ ಮಹಾದೇವ ಗೌಳಿ, ರಾಜಕುಮಾರ ಧುಮ್ಮನಸೂರೆ, ಸೋಮನಾಥ ಅಷ್ಟೂರೆ, ಶಿವಲಿಂಗಪ್ಪಾ ಜಲಾದೆ, ವಿಜಯಕುಮಾರ ಬೋರಾಳ, ಅಶೋಕ ಕೊಡ್ಲಿ, ಅಶೋಕ ಕೋಡಗಿ, ವೈಜಿನಾಥ ಕೋಡಗೆ, ವೀರಯ್ಯಾ ಸ್ವಾಮಿ, ನಾಗರಾಜ ಭಂಡೆ, ಸಂಜಯಕುಮಾರ ಪಾಟೀಲ ವಕೀಲರು, ಬಸವರಾಜ ಉದಗೀರೆ ವಕೀಲರು, ವೀರಶೆಟ್ಟಿ ಮಣಗೆ, ನೀತೀರಾಜ ಹಿಂದಾ, ಅರ್ಚನಾ ಸುಭಾಷ, ಪ್ರಭುರಾಜ ಚಂದಾ, ದೇಶಪ್ಪಾ ಬಿರಾದಾರ, ಶ್ರೀಮತಿ ಜಗದೀಶ್ವರಿ ಬಿ. ಬಿರಾದಾರ, ಸತೀಶ ಪಾಟೀಲ, ಕಾಶೀನಾಥ ಬಾಳೂರೆ, ಪ್ರಶಾಂತ ದೊಡ್ಡಿ, ಬಸವರಾಜ ಶೀಲವಂತ, ಬಾಬುರಾವ ಮಾಳಗೆ, ಪ್ರಭು ಬಿರಾದಾರ ಹಿಂದಿನ ಸಭೆಯ ಗೊತ್ತುವಳಿಗಳಿಗೆ ಅನುಮೋದಿಸಿದರು.

ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ ಅಗ್ರ ಶ್ರೇಣಿಯಲ್ಲಿ ಪಾಸಾಗಿರುವ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಿ ಚೆಕ್‌ಗಳನ್ನು ವಿತರಿಸಲಾಯಿತು. ಎಸ್.ಎಸ್.ಎಲ್.ಸಿ. ತರಗತಿಯ ಕು. ನಂದಿನಿ ಗೌಳಿ, ಬಸವ ಪಾಟೀಲ, ಕೇದರ ಬಿರಾದಾರ, ಅನಿರುದ್ದ ಬಿರಾದಾರ, ಮಯಾಂಕ ಬಿರಾದಾರ, ಅಭಿನವ ಬಿರಾದಾರ, ದರ್ಶನ ಬುಕ್ಕಾ, ಪಾವನಿ ಮೀಸೆ, ಜಗದೀಶ್ವರಿ ನಾಗಶೆಟ್ಟಿ ಧರಮಪೂರ, ನಮೀತಾ ಲಾಚುರಿಯೆ, ಪಿ.ಯು.ಸಿ.ಯ ಬಸವ ಪ್ರಸಾದ, ನಿಶ್ಚಿಂತ್ ಹಂಗರಗಿ, ಪ್ರೀಯಾಂಕಾ ಗೌಳಿ, ನಿಕಿತಾ ಸಂಗುಳಗೆ, ಅಂಕಿತಾ ಕೋಡಗೆ, ವಿನಾಯಕ ಮಡ್ಡೆ, ರಾಹುಲ್ ಬಿರಾದಾರ, ವಿನಯ ಮಾಶೆಟ್ಟಿ, ಲಿಂಗಾಕ್ಷಿ ಖೇಣಿರವರಿಗೆ ಬ್ಯಾಂಕಿನ ಅಧ್ಯಕ್ಷರು ಮತ್ತು ನಿರ್ದೇಶಕರಿಂದ ಪುರಸ್ಕರಿಸಲಾಯಿತು.

ಬ್ಯಾಂಕಿನ ಸದಸ್ಯರುಗಳು, ಮತ್ತು ಬ್ಯಾಂಕಿನ ಎಲ್ಲಾ ಶಾಖೆಗಳ ವ್ಯವಸ್ಥಾಪಕರುಗಳು, ಸಿಬ್ಬಂದಿಯವರು ಈ ಸಭೆಯಲ್ಲಿ ಭಾಗವಹಿಸಿದರು. ಪ್ರಾರಂಭದಲ್ಲಿ ದೇಶದ ಗಣ್ಯರಾದ ಮಾಜಿ ದಿ. ಪ್ರಧಾನಿ ಡಾ. ಮನಮಹೋನ ಸಿಂಗ್, ದಿ. ಮಾಜಿ ಸಿ.ಎಂ. ಎಸ್.ಎಂ. ಕೃಷ್ಣ ಬ್ಯಾಂಕಿನ ತಾಂತ್ರಿಕ ಸಲಹೆಗಾರ ದಿ. ಪ್ರಹ್ಲಾದಕುಮಾರ ಲಾಚುರಿಯೆ, ಸೇರಿದಂತೆ 40 ಸದಸ್ಯರ ನಿಧನಕ್ಕೆ 2 ನಿಮಿಷಗಳ ಕಾಲ ಮೌನ ಆಚರಿಸಿ ಶ್ರದ್ಧಾಂಜಲಿ ಅರ್ಪಿಸಲಾಯಿತು. ಶ್ರೀಮತಿ ಅಶ್ವಿನಿ ರಾಜಕುಮಾರ ಬಂಪಳ್ಳಿ ಸ್ವಾಗತ ಗೀತೆ ಹಾಡಿದರು, ಸಿ.ಇ.ಓ. ಶ್ರೀಕಾಂತ ಶೆಟಕಾರ ಸ್ವಾಗತಿಸಿ ಪ್ರಾಸ್ತವಿಕವಾಗಿ ಮಾತಾಡಿ ಬ್ಯಾಂಕಿನ ವಾರ್ಷಿಕ ವರದಿಯನ್ನು ಓದಿದರು, ಸಹಾಯಕ ಸಿ.ಇ.ಓ. ಶ್ರೀಮತಿ ಮಹಾನಂದಾ ಪಾಟೀಲ ನಿರೂಪಿಸಿದರು. ಕೊನೆಯಲ್ಲಿ ನಿರ್ದೇಶಕ ಜಯಕುಮಾರ ಕಾಂಗೆ ವಂದಿಸಿದರು.

# ಬೀದರ ತಾಲ್ಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ವತಿಯಿಂದ ಜಾಗೃತಿ ಅಭಿಯಾನ




ಮಲ್ಲಮ್ಮ ನುಡಿ ವಾರ್ತೆ ಬೀದರ. ಸೆ. 16 : ರಾಜ್ಯ ಸರ್ಕಾರದ ಜನಪರ ಕಾರ್ಯಕ್ರಮಗಳಾದ ಗ್ಯಾರಂಟಿ ಯೋಜನೆಗಳನ್ನು ಪ್ರತಿ ಮನೆಗೂ ತಲುಪಿಸುವ ನಿಟ್ಟಿನಲ್ಲಿ ಮಾನ್ಯ *ಮಾಜಿ ಶಾಸಕರಾದ ಸನ್ಮಾನ್ಯ ಶ್ರೀ ಅಶೋಕ ಖೇಣಿ* ಸರ್ ರವರ ಮಾರ್ಗದರ್ಶನದಲ್ಲಿ ಬೀದರ ದಕ್ಷಿಣ ಕ್ಷೇತ್ರದ ತಾಲ್ಲೂಕ ಪಂಚ ಗ್ಯಾರಂಟಿ ಉಪಾಧ್ಯಕ್ಷರಾದ ಶ್ರೀ ರಾಜಕುಮಾರ ಮಡಕಿ ಹಾಗೂ ಸದಸ್ಯರ ನೇತೃತ್ವದಲ್ಲಿ ನಮ್ಮ ನಡೆ ಹಳ್ಳಿ ಕಡೆ ಕಾರ್ಯಕ್ರಮವನ್ನು ಬೀದರ ದಕ್ಷಿಣ ಕ್ಷೇತ್ರದ ಚಿಟ್ಟಾ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಬರುವ ಗೂನಳ್ಳಿ ಗ್ರಾಮದಲ್ಲಿ ಕರ್ನಾಟಕ ಸರ್ಕಾರದ ಪಂಚ್ ಗ್ಯಾರಂಟಿ ಯೋಜನೆಗಳಾದ,

ಅನ್ನಭಾಗ್ಯಯೋಜನೆ: ಪಡಿತರಚೀಟಿ ತಿದ್ದುಪಡಿಗೆ ಸಂಬಂಧಿಸಿದಂತೆ ಗ್ರಾಮ ಒನ್ ಕೇಂದ್ರಗಳಲ್ಲಿ ಎದುರಾಗುತ್ತಿದ್ದ ತೊಂದರೆಗಳನ್ನು ನಿವಾರಿಸುವಲ್ಲಿ ತಂಡವು ಸಕ್ರಿಯವಾಗಿ ಕೆಲಸ ಮಾಡಿದೆ. ಅಲ್ಲದೆ, ಕಳ್ಳ ಸಾಗಣಿಕೆಯಂತಹ ಪ್ರಕರಣಗಳ ಬಗ್ಗೆಯೂ ನಿಗಾ ವಹಿಸಿ, ಅಧಿಕಾರಿಗಳ ಗಮನಕ್ಕೆ ತರುತ್ತಿದೆ. ಮತ್ತು

ಗೃಹಲಕ್ಷ್ಮಿ, ಶಕ್ತಿ ಯೋಜನೆ, ಗೃಹ ಜ್ಯೋತಿ, ಯುವನಿಧಿ, ಯೋಜನಗಳ ಮಹತ್ವದ ಬಗ್ಗೆ ಮನೆ ಮನೆಗೆ ತೆರಳಿ ಜನರಲ್ಲಿ ತಿಳಿಸಲಾಯಿತು..

ಈ ಸಂದರ್ಭದಲ್ಲಿ ಕಮಿಟಿಯ ಸದಸ್ಯರಾದ ಉದಯಕುಮಾರ ಚಟನಳ್ಳಿ, ಶಿವಕುಮಾರ ಕುತ್ತಾಬಬಾದ್, ಮಾಜಿ ಎ.ಪಿ.ಎಂ.ಸಿ ಅಧ್ಯಕ್ಷರಾದ ವೀರೇಂದ್ರ ಪಾಟೀಲ್, ಗ್ರಾಮದ ಹಿರಿಯ ಮುಖಂಡರಾದ ಕಂಟೆಪ್ಪಾ ಮನ್ನಳ್ಳಿ, ರೇವಣಪ್ಪಾ ಬಿರಾದಾರ್, ವಿಜಯಕುಮಾರ ಸಾಮ್ರಾಟ್, ಸೇರಿ ಅನೇಕ ಗ್ರಾಮಸ್ಥರು ಪಾಲ್ಗೊಂಡಿದರು.

# ಹಿಂದಿ ಅಖಂಡ ಭಾರತ ಜೋಡಿಸುವ ಭಾಷೆ



ಮಲ್ಲಮ್ಮ ನುಡಿ ವಾರ್ತೆ ಬೀದರ. ಸೆ. 16 : ಹಿಂದಿ ಭಾಷೆಯು ದೇಸಿ ಸಂಸ್ಕೃತಿಯನ್ನು ಬಿಂಬಿಸುವ ಹಾಗೂ ಅಖಂಡ ಭಾರತವನ್ನು ಜೋಡಿಸುವ ಭಾಷೆಯಾಗಿದೆ ಎಂದು ಬಿ.ವಿ. ಭೂಮರಡ್ಡಿ ಪದವಿಪೂರ್ವ ಕಾಲೇಜು ಪ್ರಾಚಾರ್ಯೆ ಡಾ. ದೀಪಾ ರಾಗಾ ಹೇಳಿದರು.

ನಗರದ ಸದ್ಗುರು ಸಿದ್ಧಾರೂಢ ಮಹಿಳಾ ಪದವಿ ಕಾಲೇಜಿನಲ್ಲಿ ಮಂಗಳವಾರ ನಡೆದ ಹಿಂದಿ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹಿಂದಿ ದೇಶದ ಅನೇಕ ರಾಜ್ಯ, ದೇಶ, ವಿದೇಶದಲ್ಲಿ ಪ್ರಸಿದ್ಧಿ ಪಡೆದ ಭಾಷೆಯಾಗಿದೆ. ಹಿಂದಿ ಕಲಿತವರಿಗೆ ಸಾಕಷ್ಟು ಉದ್ಯೋಗ ಅವಕಾಶಗಳು ಇವೆ ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಪ್ರಾದೇಶಿಕ ಕೇಂದ್ರದ ನಿರ್ದೇಶಕ ಪ್ರೊ. ಆರ್.ವಿ. ಗಂಗಶೆಟ್ಟಿ ಮಾತನಾಡಿ, ಯಾರೂ ಯಾವ ಭಾಷೆಯನ್ನೂ ದ್ವೇಷಿಸಬಾರದು. ಎಲ್ಲ ಭಾಷೆಗಳನ್ನು ಪ್ರೀತಿಸಬೇಕು ಎಂದು ಹೇಳಿದರು.

ಹಿಂದಿ ಸಾಹಿತ್ತಿಕ, ಸಾಂಸ್ಕೃತಿಕವಾಗಿ ಸಮೃದ್ಧ ಭಾಷೆಯಾಗಿದೆ. ದೇಶಕ್ಕೆ ಹಿಂದಿ ಕೊಡುಗೆ ಅಪಾರವಾಗಿದೆ ಎಂದು ಅಧ್ಯಕ್ಷತೆ ವಹಿಸಿದ್ದ ಕಾಲೇಜು ಪ್ರಾಚಾರ್ಯ ನಾಗಪ್ಪ ಜಾನಕನೋರ ತಿಳಿಸಿದರು.

ಹಿಂದಿ ಭಾಷೆಯನ್ನು ಉಳಿಸಿ ಬೆಳೆಸುವುದು ಅವಶ್ಯಕವಾಗಿದೆ ಎಂದು ಹಿಂದಿ ವಿಭಾಗದ ಮುಖ್ಯಸ್ಥ ನೆಹರೂ ಪವಾರ್ ಹೇಳಿದರು.

ಉಪನ್ಯಾಸಕರಾದ ಈಶ್ವರ ರೆಡ್ಡಿ, ಸಂಗಪ್ಪ ತೌಡಿ, ರಾಜಮ್ಮ ನೇಳಗೆ, ರಾಖಿ ಕಾಡಗೆ, ಶ್ವೇತಾ, ಮಂಗಲಾ, ಶ್ರೀಲತಾ, ಸಪ್ನಾ, ವಿಜಯಲಕ್ಷ್ಮಿ, ಅರ್ಚನಾ, ಆಕಾಶ್ ಇದ್ದರು.

ವಿದ್ಯಾರ್ಥಿನಿ ಗೀತಾ ಸ್ವಾಗತಿಸಿದರು. ರಾಧಿಕಾ ನಿರೂಪಿಸಿದರು. ಆರತಿ ವಂದಿಸಿದರು.

# ರಾಷ್ಟ್ರೀಯ ಲೋಕ ಆದಾಲತ್: ಜಿಲ್ಲೆಯಲ್ಲಿ 38,038 ಪ್ರಕರಣಗಳು ಇತ್ಯರ್ಥ:ನ್ಯಾ.ಪ್ರಕಾಶ ಅರ್ಜುನ ಬನಸೋಡೆ



ಬೀದರ, ಸೆ.16: ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ, ನವದೆಹಲಿ ಇವರು ರಾಷ್ಟ್ರೀಯ ಅದಾಲತನ್ನು ಹಮ್ಮಿಕೊಳ್ಳಲು ನಿರ್ದೇಶನ ನೀಡಿದ ಮೇರೆಗೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಬೀದರ ಜಿಲ್ಲೆಯ ಎಲ್ಲಾ ನ್ಯಾಯಲಯಗಳಲ್ಲಿ ಸೆಪ್ಟೆಂಬರ್.13 ರಂದು ನಡೆದ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಜಿಲ್ಲೆಯಾದ್ಯಾಂತ ಒಟ್ಟು 38,038 ಪ್ರಕರಣಗಳನ್ನು ಇತ್ಯರ್ಥಗೊಳಿಸಿ ಒಟ್ಟು ಮೊತ್ತ 20,96,16,492 ರೂಪಾಯಿಗಳ ಪರಿಹಾರವನ್ನು ಕಕ್ಷಿದಾರರಿಗೆ ಒದಗಿಸಲಾಗಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಪ್ರಕಾಶ ಅರ್ಜುನ ಬನಸೋಡೆ ತಿಳಿಸಿದರು.

ಅವರು ಮಂಗಳವಾರ ಜಿಲ್ಲಾ ಕಾನೂನುಸೇವೆಗಳ ಪ್ರಾಧಿಕಾರದ ಸಭಾಂಗಣದಲ್ಲಿಕರೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಈ ಬಾರಿಯ ಲೋಕಅದಾಲತನಲ್ಲಿ ಒಟ್ಟು 9899 (ಪೆಂಡಿಂಗನಲ್ಲಿನ) ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದ್ದು 14,28,15,540 ರೂ. ಹಣವನ್ನು ಕಕ್ಷಿದಾರರಿಗೆ ವಸೂಲಾತಿ ಮತ್ತು ಪರಿಹಾರ ಒದಗಿಸಲಾಗಿದೆ. ಜಿಲ್ಲೆಯಾದ್ಯಾಂತ ಒಟ್ಟು 28139 ವ್ಯಾಜ್ಯಪೂರ್ವ ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದ್ದು ಹಾಗೂ ಕಕ್ಷಿದಾರರಿಗೆ 6,68,00,952 ರೂ. ಹಣವನ್ನು ವಸೂಲಾತಿ ಮತ್ತುಪರಿಹಾರ ಒದಗಿಸಲಾಗಿದೆ ಎಂದರು.

ಜಿಲ್ಲೆಯಾಧ್ಯಾಂತ ಈ ಲೋಕ ಆದಾಲತನಲ್ಲಿ ವೈವಾಹಿಕ ವ್ಯಾಜ್ಯವನ್ನು ಇತ್ಯರ್ಥಪಡಿಸಿ ಸಂದಾನದ ಮೂಲಕ 09 ಜೋಡಿ ದಂಪತಿಯನ್ನು ರಾಜಿ ಸಂಧಾನದ ಮೂಲಕ ಒಂದು ಮಾಡಲಾಗಿದೆ ಹಾಗೂ ನ್ಯಾಯಲಯಗಳಲ್ಲಿ ಬಾಕಿ ಇರುವ ಒಟ್ಟು 12 ಹಳೆಯ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ ಎಂದುಹೇಳಿದರು.

ಜಿಲ್ಲೆಯಾದ್ಯಾಂತ ಸೆ.30 ರವರೆಗೆ ಮೆಡಿಸೆನ್ ಫಾರ್ ನೇಷನ್ 90 ದಿನದ ಕ್ಯಾಂಪೆನ ಹಮ್ಮಿಕೊಳ್ಳಲಾಗಿದ್ದು, ಈ ಕ್ಯಾಂಪೆನ್‌ದಲ್ಲಿ ನ್ಯಾಯಾಲಯದಲ್ಲಿ ಬಾಕಿಯಿರುವ ಪ್ರಕರಣಗಳನ್ನು ರಾಜಿ ಸಂಧಾನ ಮೂಲಕ ಶೀಘ್ರಗತಿಯಲ್ಲಿ ಇತ್ಯರ್ಥಗೊಳಿಸಲಾಗುವುದು, ಇದರಲ್ಲಿ ಯಾವುದೇ ಖರ್ಚು ವೆಚ್ಚ ಇರುವುದಿಲ್ಲ. ಸಾರ್ವಜನಿಕರಿಗೆ ಇದೊಂದು ಉತ್ತಮ ಅವಕಾಶವಾಗಿರುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಭಾಗವಹಿಸಿ ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಿಬ್ಬಂದಿ ಜಗದೀಶ ದೊರೆ, ಆಕಾಶ ಸಜ್ಜನಶೆಟ್ಟಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಕೆ.ಕೆ.ಆರ್.ಡಿ.ಬಿ ವತಿಯಿಂದ ಕೂಡಲೇ ಈ ಭಾಗದ ರೈತರಿಗೆ ಪರಿಹಾರ ಒದಗಿಸಿ: ನಿಖಿಲ್ ಕುಮಾರಸ್ವಾಮಿ




ಮಲ್ಲಮ್ಮ ನುಡಿ ವಾರ್ತೆ

ಬೀದರ. ಸೆ. 16 : ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯಿಂದ ರೈತರಿಗೆ ಕೂಡಲೇ ಪರಿಹಾರ ನೀಡಿ ಅವರ ಸಂಕಷ್ಟಕ್ಕೆ ತಾತ್ಕಾಲಿಕವಾಗಿ ಬ್ರೇಕ್ ಬೀಳಬೇಕಿದೆ ಎಂದು ಜ್ಯಾತ್ಯಾತೀತ ಜನತಾದಳದ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ತಿಳಿಸಿದರು.

ಮಂಗಳವಾರ ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು, ರಾಜ್ಯ ಸರ್ಕಾರವೇ ಈಗಾಗಲೇ ಕೃಷಿ ಹಾಗೂ ಕಂದಾಯ ಇಲಾಖೆಗಳ ಜಂಟಿ ಸರ್ವೇ ನಡೆಸಿ ರಾಜ್ಯದ ಒಟ್ಟು 5 ಲಕ್ಷ 20 ಸಾವಿರ ಹೆಕ್ಟೆರ್ ಕೃಷಿ ಪ್ರದೇಶದ ಬೇಳೆ ನಾಶವಾಗಿದೆ ಎಂದು ತಿಳಿಸಿದೆ. ಕಲ್ಯಾಣ ಕರ್ನಾಟಕ ಭಾಗದ ಬೀದರ್, ಕಲಬುರಗಿ, ಯಾದಗಿರಿ, ಸ್ವಲ್ಪ ಪ್ರಮಾಣದ ರಾಯಚುರು ಜಿಲ್ಲೆ, ಕಿತ್ತೂರು ಕರ್ನಾಟಕದ ವಿಜಯಪುರ ಸೇರಿದಂತೆ ರಾಜ್ಯದ ಹಲವೆಡೆ ಬೆಳೆ ನಾಶವಾಗಿರುವುದು ವರದಿಯಾಗಿದೆ. ಬೀದರ್ ಹಾಗೂ ಕಲಬುರಗಿ ಜಿಲ್ಲೆಗಳು ಸಂಪೂರ್ಣ ಬೆಳೆ ನಾಶವಾಗಿರುವ ವರದಿಯಾಗಿದೆ. ಬೀದರ್ ಜಿಲ್ಲೆಯಲ್ಲಿಯೆ ಒಟ್ಟು 79ರಿಂದ 80 ಸಾವಿರ ಹೆಕ್ಟೆರ ಪ್ರದೇಶ ಬೆಳೆ ನಾಶವಾಗಿರುವ ಬಗ್ಗೆ ವರದಿಯಾಗಿದೆ. ಬೀದರ್, ಕಲಬುರಗಿ ಜಿಲ್ಲೆಯಲ್ಲಿ ತೊಗರಿ, ಸೋಯಾ, ಉದ್ದು, ಹೆಸರು, ಹತ್ತಿ ಕೂಡ ಬೆಳೆಯುತ್ತಾರೆ. ತೊಗರಿ ಬೆಳೆಗಾರರಿಗೆ ಅತಿವೃಷ್ಟಿಯಿಂದ ಸಾಕಷ್ಟು ಹಾನಿಯಾಗಿದೆ. ಬೀದರ್ ಉತ್ತರ ವಿಧಾನಸಭಾ ಕ್ಷೇತ್ರದ ಸಾಕಷ್ಟು ಹಳ್ಳಿಗಳಿಗೆ ಭೇಟಿ ನೀಡಿದ್ದೇನೆ. ಕೃಷಿ ಜಮೀನು ರೈತರಿಗೆ ಸಮಸ್ಯೆಯಾಗಿದೆ. ಈ ಬಾರಿ ತೊಗರಿ ಬೆಳೆ ಸಂಪೂರ್ಣ ನಾಶವಾಗಿದೆ. ಬೀದರ್, ಭಾಲ್ಕಿ, ಹುಮನಾಬಾದ್, ಬಸವಕಲ್ಯಾಣ ಸೇರಿದಂತೆ ಜಿಲ್ಲೆಯ ಬಹುತೇಕ ತಾಲೂಕುಗಳಲ್ಲಿ 300 ಪ್ರತಿಶತ ಹೆಚ್ಚುವರಿ ಮಳೆಯಾಗಿದೆ. ಆ ಮಳೆಯಿಂದ ಜಿಲ್ಲೆಯ ಎಲ್ಲೆಡೆ ಸಾಕಷ್ಟು ಹಾನಿ ಸಂಭವಿಸಿದೆ. ಆ ರೈತರ ಪರ ನಿಲ್ಲುವುದು ನಮ್ಮ ಪಕ್ಷದ ಜವಾಬ್ದಾರಿಯಾಗಿದೆ ಎಂದರು.

ಜೆಡಿಎಸ್ ಪಕ್ಷ ಅಧಿಕಾರದಲ್ಲಿ ಇದ್ದಾಗಲೆಲ್ಲಾ ನಾವು ಸಾಕಷ್ಟು ರೈತರ ಪರ ಕೆಲಸ ಮಾಡಿದ್ದೇವೆ. ಕುಮರಣ್ಣ ಮುಖ್ಯಮಂತ್ರಿಗಳಾಗಿದ್ದಾಗ ರೈತರಿಗೆ ವಿಶೇಷ ಅನುದಾನ ನೀಡಿ ಅವರ ಕೈಬಲಪಡಿಸುವಲ್ಲಿ ಮುಂದಾಗಿದ್ದರು. ಸಾಲದೆಂಬಂತೆ ಕೃಷಿ ಸಾಲ ಮಾನ್ನಾ ಮಡಿ ರೈತರಿಗೆ ಧೈರ್ಯ ತುಂಬುವ ಕಾರ್ಯ ಕುಮಾರಸ್ವಾಮಿ ಸರ್ಕಾರ ಮಾಡಿದೆ. ಬೀದರ್ ಜಿಲ್ಲೆಯಲ್ಲಿ ಹೆಚ್ಚಾಗಿ 2 ವರೆ ಹೆಕ್ಟೆರ್ ಜಮಿನು ಇರುವ ಸಣ್ಣ ಮತ್ತು ಮಧ್ಯಮ ವರ್ಗದ ರೈತರು ಇದ್ದಾರೆ. ರೈತರಿಗೆ ದೊಡ್ಡ ಮಟ್ಟದ ನಷ್ಟ ಸಂಭವಿಸಿದೆ.

ಕಳೆದ ವರ್ಷದ ಬೆಳೆ ವಿಮಾ ಪರಿಹಾರವೇ ಇನ್ನೂ ಸಂಪೂರ್ಣವಾಗಿ ಸಿಕ್ಕಿಲ್ಲ ಎಂದು ರೈತರು ಹೇಳಿದ್ದಾರೆ.

ರೈತರಿಗಾಗಿ ರಾಜ್ಯ ಸರ್ಕಾರ ವಿಶೇಷ ಪ್ಯಾಕೇಜ್ ಘೋಷಣೆ ಮಾಡಬೇಕು. ರಾಜ್ಯ ಸರ್ಕಾರಕ್ಕೆ ರೈತರ ಬಗ್ಗೆ ಕಾಳಜಿ ಇದೆಯಾ? ಎಂಬುದು ಯಕ್ಷ ಪ್ರಶ್ನೆಯಾಗಿದೆ. ರೈತ ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಇರುವುದರಿಂದ ಸರ್ಕಾರ ರೈತರ ಸಾಲಮನ್ನಾ ಮಾಡ್ಬೇಕು. ರಸಗೊಬ್ಬರದ ವಿಷಯದಲ್ಲಿ ರಾಜ್ಯ ಸರ್ಕಾರ ಸರಿಯಾಗಿ ಕೆಲಸ ನಿರ್ವಹಿಸಿಲ್ಲ. ರಸಗೊಬ್ಬರ ಚೀಲಕ್ಕೆ 260 ರೂಪಾಯಿ ಪಡೆಯುವ ಬದಲಿಗೆ ಕೆಲವು ಖಾಸಗಿ ಕಂಪನಿಗಳು ಯಾವುದೆ ಲ್ಯಾಬರಟರಿ ಪರಿಕ್ಷೆ ಇಲ್ಲದೆ 800 ರೂಪಾಯಿ ಪಡೆದು ರೈತರಿಗೆ ಮೋಸ ಮಾಡಿರುವುದು ನಮ್ಮ ಗಮನಕ್ಕೆ ಬಂದಿದೆ. 55 ಸಾವಿರ ಕೋಟಿ ಗ್ಯಾರಂಟಿ ಯೋಜನೆಗಳಿಗೆ ಖರ್ಚು ಮಾಡುತ್ತಿರುವ ರಾಜ್ಯ ಸರ್ಕಾರ ರೈತರಿಗೆ ಪ್ರತಿ ಎಕರೆಗೆ ಕನಿಷ್ಟ 20ರಿಂದ 25 ಸಾವಿರ ಆದರೂ ಕೊಡಬೇಕು ಎಂದು ಒತ್ತಾಯಿಸಿದರು.

ಜೆಡಿಎಸ್ ಪಕ್ಷ ರಾಜ್ಯಾದ್ಯಂತ ಪ್ರವಾಸ ಕೈಗೊಂಡು ರೈತರ ಸಮಸ್ಯೆಗಳ ಬಗ್ಗೆ ತಿಳಿದುಕೊಳ್ಳುತ್ತಿದೆ. ಚಿಕ್ಕಮಂಗಳೂರು, ಸಕಲೇಶಪುರ, ಶಿವಮೊಗ್ಗಗಳಲ್ಲಿ ಅಡಿಕೆ ಬೆಳೆ ನಾಶವಾಗಿದ್ದು, ಅಲ್ಲೂ ಸಹ ಭೇಟಿ ನೀಡಲಿದ್ದೇವೆ. ಆದರೇ ಕೃಷಿ ಸಚಿವರು ಈ ವಿಷಯದಲ್ಲಿ ಏನು ಮಾಡ್ತಿದ್ದಾರೆ ಎಂಬುದೇ ತಿಳಿಯದಂತಾಗಿದೆ. ಮಾತೆತ್ತಿದರೆ ರಾಜ್ಯ ಸರ್ಕಾರ ಗ್ಯಾರಂಟಿ ಹೆಸರು ಹೇಳುತ್ತೆ. ಆದರೆ ರೈತರ ಜೀವನಕ್ಕೆ ರಾಜ್ಯ ಸರ್ಕಾರ ಯಾವ ಗ್ಯಾರಂಟಿ ನೀಡಿದೆ? ಎಂದು ಪ್ರಶ್ನೆ ಮಾಡಿದರು.

ರೈತರಿಗೆ ಕೇಂದ್ರದಿಂದ ಯಾವ ರೀತಿಯ ಸಹಾಯ ಸಹಕಾರ ಬೇಕು ಆ ರೀತಿ ಸಹಾಯ ಸಹಕಾರ ಮಾಡಿಸಲು ನಾವು ಪ್ರಯತ್ನ ಮಾಡ್ತೇವೆ. ರಾಜ್ಯ ಸರ್ಕಾರ ರೈತರಿಗೆ ಸೂಕ್ತ ಪರಿಹಾರ ಕೊಡ್ಲಿಲ್ಲ ಅಂದ್ರೇ ಜೆಡಿಎಸ್ ಪಕ್ಷದಿಂದ ದೊಡ್ಡ ಮಟ್ಟದ ಬೃಹತ್ ಹೋರಾಟ್ಕೆಗೆತ್ತಿಕೊಳ್ತಿವಿ. ಒಂದು ವಾರದ ಒಳಗೆ ಸರ್ಕಾರ ಪರಿಹಾರ ಒದಗಿಸಿ ಕೊಡಬೇಕು. ಜೆಡಿಎಲ್ಪಿ ನಾಯಕರಿಗೆ ಇದರ ಕುರಿತು ವರದಿ ನೀಡ್ತಿವಿ. ಅದನ್ನು ಸರ್ಕಾರದ ಗಮನಕ್ಕೆ ತರ್ತೇವೆ. ಎಸ್.ಸಿ.ಪಿ, ಟಿ.ಎಸ್.ಪಿ ಹಣ ದುರ್ಬಳಕೆಯಾಗುತ್ತಿರುವುದು ಜಗಜಾಹಿರವಾಗಿದ್ದು, ಈ ಎಲ್ಲ ವಿಚಾರಗಳಲ್ಲಿ ರಾಜ್ಯ ಸರ್ಕಾರ ಕೂಡಲೇ ಶ್ವೇತಪತ್ರ ಹೊರಡಿಸಬೇಕೆಂದು ನಿಖಿಲ್ ಕುಮಾರಸ್ವಾಮಿ ಒತ್ತಾಯಿಸಿದರು.

ಮಾಜಿ ಸಚಿವ ಬಂಡೆಪ್ಪ ಖಾಶೆಂಪುರ್, ಪಕ್ಷದ ಜಿಲ್ಲಾಧ್ಯಕ್ಷ ರಮೇಶ ಪಾಟೀಲ ಸೋಲಪುರ, ಮುಖಂಡರಾದ ಸೂರ್ಯಕಾಂತ ನಾಗಮಾರಪಳ್ಳಿ, ಬಸವರಾಜ ಪಾಟೀಲ್ ಹಾರೂರಗೇರಿ, ದೇವೇಂದ್ರ ಸೋನಿ, ಅಶೋಕ್ ಕೊಡಗೆ, ಶಾಂತಲಿಂಗ ಸಾವಳಗಿ, ರಾಜಶೇಖರ ಜವಳೆ, ತರುಣ್ ನಾಗಮಾರಪಳ್ಳಿ, ಅಭಿ ಕಾಳೆ, ಸುದರ್ಶನ ಸುಂದರರಾಜ್, ಶಿವಪುತ್ರ ಮಾಳಗೆ ಸೇರಿದಂತೆ ಅನೇಕರು ಪತ್ರಿಕಾಗೋಷ್ಠಿಯಲ್ಲಿದ್ದರು.

**ರೈತರಿಗೆ ಯಾವ ಗ್ಯಾರಂಟಿ ಕೊಟ್ಟಿದ್ದರಿ? ಬಂಡೆಪ್ಪ ಖಾಶೆಂಪುರ್ ಪ್ರಶ್ನೆ:**

ಹೆಚ್ಚಿನ ಮಳೆಯಿಂದಾಗಿ ಬೀದರ್ ಜಿಲ್ಲೆಯಲ್ಲಿ ಸಾಕಷ್ಟು ಹಾನಿ ಸಂಭವಿಸಿದೆ. 79–80 ಸಾವಿರ ಹೆಕ್ಟೇರ್ ಹಾನಿ ಸಂಭವಿಸಿದೆ. ರೈತರು ದೇಶದ ಬೆನ್ನೆಲುಬು, ನಮ್ಮ ಜೀವನಾಡಿ, ಅವರು ಅನ್ನದಾತರು, ನೀವು (ರಾಜ್ಯ ಸರ್ಕಾರದವರು) ರೈತರಿಗೆ ಯಾವ ಗ್ಯಾರಂಟಿ ನೀಡಿದ್ದಿರಿ ಎಂಬುದನ್ನು ತಿಳಿಸಬೇಕು ಎಂದು ಮಾಜಿ ಸಚಿವ ಬಂಡೆಪ್ಪ ಖಾಶೆಂಪುರ ಪ್ರಶ್ನೆ ಮಾಡಿದರು.

ಸುದ್ದಿಗಾರರೊಂದಿಗೆ ಮಾತನಾಡಿರುವ ಅವರು, ನಾನು ಎರಡು ಬಾರಿ ಸಚಿವನಾಗಿದ್ದಾಗ ರೈತರ ಒಳಿತಿಗಾಗಿ ಉತ್ತಮ ನಿರ್ಧಾರ ತೆಗೆದುಕೊಂಡಿದ್ದೇವೆ. ರೈತರ ಪರಿಸ್ಥಿತಿ ನೋಡಿದ್ರೆ ನಮಗೆ ಕಣ್ಣಿರು ಬರುತ್ತೆ. ಉದ್ದು, ಹೆಸರು, ತೊಗರಿ, ಸೋಯಾ ಸಂಪೂರ್ಣ ನಾಶವಾಗಿವೆ. ಸರ್ಕಾರದ ಮಾಹಿತಿಯ ಪ್ರಕಾರ 1 ಲಕ್ಷ 90 ಸಾವಿರ ಎಕರೆ ಇದೆ. ಈಗಾಗಲೇ ಬಂದಿರುವ ಎನ್.ಡಿ.ಆರ್.ಎಫ್ ಹಣವನ್ನಾದರು ರೈತರಿಗೆ ಪರಿಹಾರವಾಗಿ ಕೊಡಬಹುದಾಗಿತ್ತು. ಅದನ್ನು ಕೂಡ ಮಾಡಿಲ್ಲ.

ನಾವು ರೈತರಿಗೆ ಪ್ರತಿ ಎಕರೆಗೆ ಕನಿಷ್ಠ 25 ಸಾವಿರ ರೂ. ಪರಿಹಾರ ಕೊಡಬೇಕು ಎಂದು ನಾನು ಮನವಿ ಮಾಡುತ್ತೇನೆ. ರೈತರ ಸಾಲ ಮನ್ನಾ ಮಾಡುವ ತಾಕತ್ತು ಈ ರಾಜ್ಯ ಸರ್ಕಾರಕ್ಕೆ ಇಲ್ಲ. ಪ್ರತಿ ಎಕರೆಗೆ ಕನಿಷ್ಠ ರೈತರಿಗೆ 25 ಸಾವಿರ ಪರಿಹಾರ ಕೊಡಬೇಕು. ಬ್ಯಾಂಕ್ ಸಾಲ ವಸೂಲಿಯನ್ನು ಮೂರು ವರ್ಷ ವರೆಗೂ ವಸೂಲಿ ಮಾಡಬಾರದು. ರೈತರ ಸಾಲದ ಬಡ್ಡಿಯನ್ನು ಸರ್ಕಾರವೇ ಬರಿಸಬೇಕು ಎಂದು ಒತ್ತಾಯಿಸಿದರು.

ಕಲಬುರಗಿಗೆ ಆಗಮಿಸುತ್ತಿರುವ ಮುಖ್ಯಮಂತ್ರಿಗಳು ರಾಜ್ಯದ ರೈತರ ಬಗ್ಗೆ ಕಾಳಜಿ ವಹಿಸಿ ಸರ್ಕಾರ ಜೀವಂತ ಇದೆ ಅಂತ ಬುಧುವಾರ ಸಂಜೆಯ ವರೆಗೂ ತೋರಿಸಬೇಕು. ನಾವು ಕೇಂದ್ರ ಸರ್ಕಾರದಿಂದ ಪರಿಹಾರ ತರಲು ಪ್ರಯತ್ನಿಸುತ್ತೇವೆ. ಕುಮಾರಸ್ವಾಮಿ, ಪ್ರಲ್ಹಾದ್ ಜೋಷಿ ಹಾಗೂ ಕೇಂದ್ರ ಕೃಷಿ ಸಚಿವರಲ್ಲಿಗೆ ಭೇಟಿ ನೀಡಿ ಪರಿಹಾರ ತರುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದೆಂದು ಭರವಸೆ ನೀಡಿದರು.

**ಬಾಯಿ ಮಾತಿನಿಂದ ಹೇಳಿದರೆ ಸಾಲದು, ಹಿಂದೆ ಮುಂದೆ ನೋಡದೇ ಪರಿಹಾರ ಕೊಡಿ: ಸೂರ್ಯಕಾಂತ್ ನಾಗಮಾರಪಳ್ಳಿ:**

ಸರ್ಕಾರ ಬೆಳೆ ಹಾನಿ ಪರಿಶೀಲನೆ ಮಾಡ್ತಿದ್ದಿವಿ ಅಂತಾನೇ ಹೇಳ್ತಿದೆ. ಇನ್ನೂವರೆಗೂ ಯಾವುದೇ ಪರಿಹಾರ ಸಿಕ್ಕಿಲ್ಲ. ಪರಿಹಾರ ಒದಗಿಸಿಕೊಡುವ ಕೆಲಸವನ್ನು ಸರ್ಕಾರ ಮಾಡಬೇಕು. ಎನ್.ಡಿ.ಆರ್.ಎಫ್ ಪಂಡ್ ನಲ್ಲಿ ಬಂದಿರುವ ಹಣವನ್ನು ಒದಗಿಸಿಕೊಡಬೇಕು.

ಪರಿಶೀಲನೆ ಹೆಸರಿನಲ್ಲಿ ಕಾಲಹರಣ ಮಾಡಬಾರದು. ಪರಿಹಾರ ಒದಗಿಸಿಕೊಡುವ ಕೆಲಸ ಸರ್ಕಾರ ಮಾಡಬೇಕು.

## ಹಿಂದುಳಿದ ವರ್ಗಗಳ ಆಯೋಗ ಸೂಚನೆಯಂತೆ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ -2025ರ ಗಣತಿ ಸಮೀಕ್ಷೆಯ ತರಬೇತಿ:



**ಮಲ್ಲಮ್ಮ ನುಡಿ ವಾರ್ತೆ**

ಬಸವಕಲ್ಯಾಣ:ಸೆ16 –ಹಿಂದುಳಿದ ವರ್ಗಗಳ ಇಲಾಖೆ ವತಿಯಿಂದ ರಾಜ್ಯಾದ್ಯಂತ ದಿನಾಂಕ 22.09.2025 ರಿಂದ 07.10.2025 ರ ವರೆಗೆ ಎಲ್ಲಾ ವರ್ಗದ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿ ತಿಳಿಯಲು ಕರ್ನಾಟಕ ಸರ್ಕಾರ ಸೂಚಿಸಿದಂತೆ ಇಲ್ಲಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಗಣತಿ ಸಮೀಕ್ಷೆದಾರರಿಗೆ ಮೊದಲನೇ ಹಂತದ ತರಬೇತಿಯನ್ನು ಆಯೋಜಿಸಲಾಯಿತು.

ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳಾದ ರವೀಂದ್ರ ಮೇತ್ರೆ ತರಬೇತಿಯನ್ನು ಉದ್ದೇಶಿಸಿ ಮಾತನಾಡಿ ಸರ್ಕಾರದ ನಿರ್ದೇಶನದಂತೆ ಹಾಗೂ ಜಿಲ್ಲಾಧಿಕಾರಿಗಳ ಆದೇಶದಂತೆ ತಾಲೂಕಿನ ಪ್ರತಿಯೊಂದು ಗ್ರಾಮದಲ್ಲಿ ಗಣತಿ ಸಮೀಕ್ಷೆ ನಡೆಸಬೇಕಾಗಿದೆ. ತಾವೆಲ್ಲರು ಈಗಾಗಲೇ ಪರಿಶಿಷ್ಟ ಜಾತಿ ಒಳ ಮೀಸಲಾತಿ ಗಣತಿ ಸಮೀಕ್ಷೆ ಮುಕ್ತಾಯಗೊಳಿಸಿದ್ದಿರಿ ಅದೇ ಮಾದರಿಯಲ್ಲಿ ಪ್ರತಿಯೊಂದು ಮನೆಯ ಕುಟುಂಬದ 60 ಪ್ರಶ್ನೆಗಳ ಎಲ್ಲಾ ಮಾಹಿತಿಗಳನ್ನು ತುಂಬಬೇಕಾಗಿದೆ ಎಂದರು.

ತರಬೇತಿಯ ಸಂಪನ್ಮೂಲ ವ್ಯಕ್ತಿಗಳಾದ ಗಿರಿಧರ ಧಾನೂರೆ ಅವರು ಮೋಬೈಲ್ ಯ್ಯಾಪ್ ಮುಖಾಂತರ ಗಣತಿ ಸಮೀಕ್ಷೆ ಮಾಡುವುದನ್ನು ಟಿ ವಿ ಸ್ಕ್ರೀನ್ ಮೇಲೆ ಸಂಪೂರ್ಣ ಮಾಹಿತಿ ತುಂಬುವುದನ್ನು ವಿವರಿಸಿದರು.

ಸಂಪನ್ಮೂಲ ವ್ಯಕ್ತಿಗಳಾದ ನಾಸೀರ್ ಪಟೇಲ್ ಮಾತನಾಡಿ ಗಣತಿ ಸಮೀಕ್ಷೆಯ ಗಣತಿದಾರರು ಕಡ್ಡಾಯವಾಗಿ ಗುರುತಿನ ಚೀಟಿ ತೆಗೆದುಕೊಂಡು ಹೋಗಬೇಕು ಪ್ರೀತಿ ನಮ್ರತೆಯಿಂದ ಪ್ರಶ್ನೆ ಕೇಳಬೇಕು ಎಂದರು.

ಸಂಜೀವಕುಮಾರ ನಡುಕರ ಪ್ರಾಸ್ತಾವಿಕ ಮಾತನಾಡಿದರು. ಈ ಸಂದರ್ಭದಲ್ಲಿ

ಉಪ ಪ್ರಾಂಶುಪಾಲರಾದ ಅನೀತಾ ಸಾವಳ್ಕರ , ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ದೇವೇಂದ್ರ ಪಟ್ಟೆ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ತಾಲೂಕು ನಿರ್ದೇಶಕರಾದ ಶಿವಕುಮಾರ ಜಡಗೆ, ಪ್ರವೀಣ ಸೂರ್ಯವಂಶಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು. ಉಪಸ್ಥಿತರಿದ್ದರು.

## ಕಲ್ಯಾಣ ಕರ್ನಾಟಕ ವಿಮೋಚನಾ ದಿನಾಚರಣೆಯಲ್ಲಿ ಭಾಗವಹಿಸಲು ಮುಖ್ಯಾಧಿಕಾರಿ ಮನವಿ

**ಮಲ್ಲಮ್ಮ ನುಡಿ ವಾರ್ತೆ**



ಚಿಟಗುಪ್ಪ:– ಪುರಸಭೆ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರು, ಮಾಜಿ ಅಧ್ಯಕ್ಷರು, ಸದಸ್ಯರು, ಪಟ್ಟಣದ ಗಣ್ಯ ವ್ಯಕ್ತಿಗಳು, ಸಾರ್ವಜನಿಕರು ಬುಧವಾರ ಸೆಪ್ಟೆಂಬರ್ 17 ರಂದು ಪಟ್ಟಣದ ಪುರಸಭೆಯಲ್ಲಿ ಕಲ್ಯಾಣ ಕರ್ನಾಟಕ ವಿಮೋಚನಾ ದಿನಾಚರಣೆಯ ಧ್ವಜಾರೋಹಣ ಮತ್ತು ವಿಶ್ವ ಕರ್ಮ ಜಯಂತಿ ಬೆಳಿಗ್ಗೆ 7:45 ಘಂಟೆಗೆ ಧ್ವಜಾರೋಹಣ ಮಾಡಲಾಗುತ್ತಿದ್ದು ತಾವೆಲ್ಲರೂ ಧ್ವಜಾರೋಹಣ ಮತ್ತು ಪೂಜೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಪುರಸಭೆ ಮುಖ್ಯಾಧಿಕಾರಿ ಹುಸಾಮುದ್ದಿನ ಬಾಬಾ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅಂಚೆ ಜೀವ ವಿಮೆ ಉತ್ಪನ್ನಗಳ ಮಾರಾಟ ಪ್ರತಿನಿಧಿಗಳ ಆಯ್ಕೆಗೆ ನೇರ ಸಂದರ್ಶನ

**ಮಲ್ಲಮ್ಮ ನುಡಿ ವಾರ್ತೆ**

ರಾಯಚೂರು ಸೆಪ್ಟೆಂಬರ್ 16– ಇಲ್ಲಿನ ಅಂಚೆ ಇಲಾಖೆಯಿಂದ ರಾಯಚೂರು ವಿಭಾಗದಲ್ಲಿ ಅಂಚೆ ಜೀವ ವಿಮೆ ಹಾಗೂ ಗ್ರಾಮೀಣ ಅಂಚೆ ಜೀವ ವಿಮೆ ಉತ್ಪನ್ನಗಳನ್ನು ಮಾರಾಟ ಮಾಡಲು ನೇರ ಪ್ರತಿನಿಧಿಗಳ ಆಯ್ಕೆಗಾಗಿ ನೇರ ಸಂದರ್ಶನಕ್ಕೆ ಆಸಕ್ತ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಸೆಪ್ಟೆಂಬರ್ 25ರ ಬೆಳಿಗ್ಗೆ 11 ಗಂಟೆಗೆ ರಾಯಚೂರಿನ ಗಂಜ್ ವೃತ್ತದ ಬಳಿರುವ ಅಂಚೆ ಅಧೀಕ್ಷಕರ ಕಚೇರಿಯಲ್ಲಿ ನೇರ ಸಂದರ್ಶನ ಹಮ್ಮಿಕೊಳ್ಳಲಾಗಿದೆ.

ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳು 10ನೇ ತರಗತಿ ಪಾಸಾಗಿದ್ದು, ಕನಿಷ್ಠ 18 ವರ್ಷ ಪೂರ್ಣವಾಗಿರಬೇಕು. ನಿರುದ್ಯೋಗಿ, ಸ್ವಯಂ ಉದ್ಯೋಗನಿರತ ಯುವಕರು, ವಿಮಾ ಕಂಪನಿಗಳ ಮಾಜಿ ಏಜೆಂಟರು, ಸಲಹೆಗಾರರು, ಮಾಜಿ ಸೈನಿಕರು, ಅಂಗನವಾಡಿ ಕಾರ್ಯಕರ್ತೆಯರು, ಮಹಿಳಾ ಮಂಡಳದ ಕಾರ್ಯಕರ್ತೆಯರು, ನಿವೃತ್ತ ಪ್ರಧಾನ ಮತ್ತು ಗ್ರಾಮ ಪಂಚಾಯತ್ ಸದಸ್ಯರು ಹಾಗೂ ಅಂಚೆ ವಿಭಾಗದ ಮುಖ್ಯಸ್ಥರಿಗೆ ಸಮಂಜಸವೆಂದು ಕಂಡುಬಂದ ಯಾವುದೇ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲಾಗುತ್ತದೆ. ನುರಿತ, ಸಂವಹನಾ ಕಲೆ ಹಾಗೂ ವಿಮಾ ಮಾರಾಟಕ್ಷೇತ್ರದಲ್ಲಿ ಪೂರ್ವಾನುಭವ ಹೊಂದಿರುವವರಿಗೆ ಆದ್ಯತೆ ನೀಡಲಾಗುತ್ತಿದೆ. ಆಯ್ಕೆಯಾದ ಅಭ್ಯರ್ಥಿಗಳು 5 ಸಾವಿರ ರೂ.ಗಳ ರಾಷ್ಟ್ರೀಯ ಉಳಿತಾಯ ಪತ್ರ ಅಥವಾ ಕಿಸಾನ್ ವಿಕಾಸ ಪತ್ರದ ರೂಪದಲ್ಲಿ ಭದ್ರತಾ ಠೇವಣಿ ಇಡಬೇಕು. ಆಯ್ಕೆಯಾದ ಪ್ರತಿನಿಧಿಗಳಿಗೆ ವ್ಯವಹಾರಕ್ಕೆ ತಕ್ಕಂತೆ ಸೂಕ್ತ ಕಮಿಷನ್ ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಅಂಚೆ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ ಎಂದು ರಾಯಚೂರು ವಿಭಾಗದ ಅಂಚೆ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬಾಲಮ್ಮದೇವಿ ಮಂದಿರದ ರಜತ ಮಹೋತ್ಸವ

## ಸೆಪ್ಟೆಂಬರ್ 30ರಂದು ಅಂಬಾರಿ ಮೇಲೆ ಬಾಲ್ಲಮ್ಮ ದೇವಿಯ ಭವ್ಯ ಮೆರವಣಿಗೆ

**ಮಲ್ಲಮ್ಮ ನುಡಿ ವಾರ್ತೆ**



ಚಿಟಗುಪ್ಪ:– ಬಾಲ್ಲಮ್ಮ ದೇವಿ ಮಂದಿರದ ರಜತ ಮಹೋತ್ಸವವನ್ನು ಬಹಳ ಅದ್ದೂರಿಯಾಗಿ ಆಚರಿಸಲು ಸಮಿತಿ ನಿರ್ಧರಿಸಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಹಿರೇಮಠದ ಡಾ. ರಾಜಶೇಖರ ಶಿವಾಚಾರ್ಯರು ಹೇಳಿದರು. ತಾಲೂಕಿನ ಮನ್ನಾಎಖ್ಖೇಳ್ಳಿ ಗ್ರಾಮದ ಪ್ರಸಿದ್ಧ ಬಾಲಮ್ಮದೇವಿ ಮಂದಿರದ ರಜತ ಮಹೋತ್ಸವ ಕಾರ್ಯಕ್ರಮದ ಪೂರ್ವಭಾವಿ ಸಭೆ ಹಾಗೂ ಭಿತ್ತಿಪತ್ರ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದರು.

ಈ ಬಾರಿ ವಿಶೇಷವಾಗಿ ಮೈಸೂರಿನ ನಡೆಯುವ ಅಂಬಾರಿ ಮೆರವಣಿಗೆಯಂತೆ ಇಲ್ಲಿಯೂ ಇದೆ ತಿಂಗಳ 30ರ ಮಂಗಳವಾರ ಬೆಳಗ್ಗೆ 11 ಗಂಟೆಗೆ ಬಾಲ್ಲಮ್ಮದೇವಿಯ ಮೂರ್ತಿ ಅಲಕಂರಿಸಿ ಆನೆಯ ಮೇಲೆ ಅಂಬಾರಿ ಮೆರವಣಿಗೆ ನಡೆಯಲಿದೆ. ಸೆಪ್ಟೆಂಬರ್ 22ರಿಂದ 29ರ ವರೆಗೆ ಪ್ರತಿದಿನ ಸಂಜೆ 8 ಗಂಟೆಯಿಂದ ಶಿವಶಕ್ತಿ ಮಹಾದರ್ಶನ ಪ್ರವಚನ ಕಾರ್ಯಕ್ರಮ, 21ರಂದು ಯಜ್ಞಬ್ರಹ್ಮ, 22ರ ಸಂಜೆ 8 ಗಂಟೆಗೆ ಉದ್ಘಾಟನಾ ಸಮಾರಂಭ, ದಿ 24ರ ಬುಧವಾರ ರಾತ್ರಿ 10 ಗಂಟೆಗೆ ಕೋಲಾಟ, 25ರ ಗುರುವಾರ ರಾತ್ರಿ 10 ಗಂಟೆಗೆ ಹಾಸ್ಯ ರಸಮಂಜರಿ ಕಾರ್ಯಕ್ರಮ ಜರುಗಲಿದೆ.

ದಿ 27ರ ಶನಿವಾರ ಬೆಳಗ್ಗೆ 10 ಗಂಟೆಗೆ ಕುಂಕುಮಾರ್ಚನೆ ಕಾರ್ಯಕ್ರಮ ಜರುಗಲಿದ್ದು, ಅಭಿನವ ಬಾಲಯೋಗಿ ಶರಣ ಶಂಕರಲಿಂಗ ಮಹಾರಾಜರ ದಿವ್ಯ ಸಾನಿಧ್ಯದಲ್ಲಿ ಜರುಗಲಿದೆ. ಬೆಳಗ್ಗೆ 10 ಉಚಿತ ಆರೋಗ್ಯ ತಪಾಸಣೆ ಶಿಬಿರ, ಮಧ್ಯಾಹ್ನ 4 ಗಂಟೆಗೆ ದಿವಂಗತ ವೀರಪ್ಪಾ ಧೂಳಪ್ಪಾ ಮರಕುಂದಾ ಅವರ ಪುತ್ಥಳಿ ಅನಾವರಣ, ದಿ28ರ ಭಾನುವಾರ ರಾತ್ರಿ 9 ಗಂಟೆಗೆ ಜನಪದ ಜೋಗತಿನೃತ್ಯ ಮತ್ತು ರಸಮಂಜರಿ ಕಾರ್ಯಕ್ರಮ 29ರ ಸೋಮವಾರ ಪ್ರವಚನ ಮಂಗಲೋತ್ಸವ, ಬಳಿಕ ಹಿರೇಮಠದ ಡಾ. ರಾಜಶೇಖರ ಶಿವಾಚಾರ್ಯರ ತುಲಾಭಾರ ಕಾರ್ಯಕ್ರಮ ಸೇರಿದಂತೆ ನಾನಾ ಕಾರ್ಯಕ್ರಮಗಳು ಜರುಗಲಿವೆ ಎಂದರು. ಪ್ರಮುಖರಾದ ಹಣಮಂತಪ್ಪ ಮರಕುಂದಾ, ಆನಂದ ಮರಕುಂದಾ, ಈಶ್ವರ ಬಸರೆಡ್ಡಿ, ಸಂತೋಷ ಕಮಲಪೂರ, ಶಂಕರರಾವ ಜೊತಗೊಂಡ, ಸಂಜೀವಕುಮಾರ ನಂದಗಾಂವ, ಪವನರೆಡ್ಡಿ, ಕಂಟೆಪ್ಪ, ನೀಲೇಶ ಘನಾತೆ, ರಮೇಶ ಕ್ಯಾತಾ, ಪ್ರದೀಪರೆಡ್ಡಿ ಜಾವಳಗಿ, ದಿಲೀಪ, ಅರುಣಕುಮಾರ, ರಾಜಕುಮಾರ ಗೌಡಪನೋರ, ಬಸವರಾಜ ಅಲರೆಡ್ಡಿ ಸೇರಿ ಪ್ರಮುಖರು ಇದ್ದರು. ಹಾಸ್ಯ ಕಲಾವಿದ ನವಲಿಂಗ ಪಾಟೀಲ ನಿರೂಪಿಸಿ ವಂದಿಸಿದರು.



ಬಸವಕಲ್ಯಾಣ:– ತಾಲ್ಲೂಕಿನ ಪ್ರೌಢ ಶಾಲಾ ವಿಭಾಗದ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕರ ಪ್ರಶಸ್ತಿಗೆ ಭಾಜನರಾದ ರೇಣುಕಾ ವ್ಹಿ. ಸಹ ಶಿಕ್ಷಕಿ ಸರ್ಕಾರಿ ಪ್ರೌಢ ಶಾಲೆ ಹುಲಸೂರ ರವರು 2025ನೇ ಸಾಲಿಗೆ . ಹಾಗೂ ನಾಗಪ್ಪ ನಿಣ್ಣೆ ಸಹ ಶಿಕ್ಷಕರು ಸರ್ಕಾರಿ ಪ್ರೌಢ ಶಾಲೆ ಅಲಗೂಡ ರವರಿಗೆ 2024ನೇ ಸಾಲಿನಲ್ಲಿ ಪ್ರಶಸ್ತಿ ಪ್ರಧಾನವಾದ ಕಾರಣ ಕ. ರಾ.ಪ್ರೌ.ಶಾ.ಸ. ಶಿಕ್ಷಕರ ಸಂಘ ತಾಲೂಕ ಘಟಕ ಅಧ್ಯಕ್ಷರಾದ ವಿಜಯಕುಮಾರ್ ಮಾನೆ. ಪ್ರದಾನ ಕಾರ್ಯದರ್ಶಿಗಳಾದ ಬಸವರಾಜ ಮಾನೂಳೆ. ನೀರ್ದೆಶಕರಾದ ಉದ್ಧವರಾವ ಉಪಾಸೆ. ಹುಲಸೂರ ತಾಲ್ಲೂಕಿನ ಅಧ್ಯಕ್ಷರಾದ ಸೂರ್ಯಕಾಂತ ಅಡಕೆ. ಪ್ರದಾನ ಕಾರ್ಯದರ್ಶಿಗಳಾದ ಮದನಕುಮಾರ ಪಾಟೀಲರು. ಹಾಗೂ ಪದಾಧಿಕಾರಿಗಳಾದ ಕೃಷ್ಣ ರೆಡ್ಡಿ. ವಿರೇಶ ಹೆಗ್ಗೆ. ರಾಮ ಪಾಟೀಲ್. ಸಂಜೀವಕುಮಾರ ಸೂರ್ಯವಂಶಿ. ಸಿಧ್ಧೋದನ ಸಾಕರೆ. ಸಿಧ್ಧಾರ್ಥ ಪೊಸ್ಥೆ. ಮತ್ತು ಮಾಧವ ಗಣೇಶ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ)

## ವಿಶ್ವಕರ್ಮರ ಕೊಡುಗೆ ಅಪಾರ



**ಮಲ್ಲಮ್ಮ ನುಡಿ ವಾರ್ತೆ**

ಚಿಟಗುಪ್ಪ:– ವಿಶ್ವಕರ್ಮ ಬ್ರಾಹ್ಮಣ ಸಮಾಜವೂ ವೈದೀಕ ಪರಂಪರೆಯೊಂದಿಗೆ ಐದು ಪಂಚ ಕಸುಬುಗಳನ್ನು ಉಳಿಸಿಕೊಂಡು ಬರುತ್ತಿರುವ ಕಾಯಕ ಸಮಾಜವಾಗಿದೆ ಎಂದು ಶ್ರೀಮದ್ ಆನೆಗುಂದಿ ಮಹಾಸಂಸ್ಥಾನ ಸರಸ್ವತಿ ಪೀಠ ವಿಶ್ವಕರ್ಮ ಏಕದಂಡಗಿ ಶ್ರೀಮಠ ಯಾದಗಿರಿ, ಹುಮನಾಬಾದ ಶ್ರೀನಿವಾಸ ಮಹಾಸ್ವಾಮಿಗಳು ಹೇಳಿದರು. ಚಿಟಗುಪ್ಪ ಪಟ್ಟಣದ ಜಗದ್ಗುರು ಶ್ರೀ ಮೌನೇಶ್ವರ ಮಂದಿರದಲ್ಲಿ ಗುರುವಾರ ಸಂಜೆ ವಿಶ್ವಬ್ರಾಹ್ಮಣ (ವಿಶ್ವಕರ್ಮ) ಯುವಕ ಮಂಡಳಿಯ ನೂತನ ಪದಾಕಾರಿಗಳ ಆಯ್ಕೆ ಹಾಗೂ ಧರ್ಮಸಭೆಯಲ್ಲಿ ದಿವ್ಯ ಸಾನಿಧ್ಯವಹಿಸಿ ಆರ್ಶೀವಚನ ನೀಡುತ್ತಾ ಮಾತನಾಡಿದರು.

ವಿಶ್ವಕರ್ಮ ಸಮಾಜ ಅಂದರೆ ಅದು ಕಲೆ, ಸಾಹಿತ್ಯ ಸಂಗೀತ ಸೇರಿದಂತೆ ಹತ್ತು ಹಲವು ಕಲೆಯ ಆಗರವಾಗಿದೆ. ಇಂದು ಇಡಿ ವಿಶ್ವವೇ ಭಾರತವನ್ನು ವಿಶ್ವಗುರುವೆಂದು ಕರೆಯಲು ಇಲ್ಲಿನ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ವಿಶ್ವಕರ್ಮರ ಕೊಡುಗೆ ಅಪಾರವಾಗಿದೆ. ಸಮಾಜ ಬಾಂಧವರು ಪ್ರತಿದಿನ ಬೆಳಗ್ಗೆ ತಪ್ಪದೇ ಸಂಧ್ಯಾ ವಂದನೆಯನ್ನು ತಪ್ಪದೇ ಮಾಡಬೇಕು. ತಮ್ಮ ಮಕ್ಕಳಿಗೆ ಸಮಯಕ್ಕೆ ಸರಿಯಾಗಿ ಉಪನಯನ ಸಂಸ್ಕಾರವನ್ನು ನೀಡುವ ಮೂಲಕ ನಮ್ಮ ಭವ್ಯ ಸನಾತನ ಸಂಸ್ಕೃತಿಯನ್ನು ಮಕ್ಕಳಿಗೆ ತಿಳಿಸಿಕೊಡುವ ಕೆಲಸವಾಗಬೇಕು. ಯಾದಗಿರಿ ಶ್ರೀಮಠದ ಪರಂಜ್ಯೋತಿಯಾಗಿರುವ ಗುರುನಾಥೇಂದ್ರ ಸರಸ್ವತಿಗಳು ಭಕ್ತರಿಗೆ ಪ್ರತಿ ಬಾರಿ ಇದ್ದನ್ನೆ ಹೇಳುತ್ತಿದ್ದರು. ನಾವು ಕೂಡಾ ಗುರುನಾಥೇಂದ್ರ ಸರಸ್ವತಿಗಳು ತೊರಿದ ದಾರಿಯಲ್ಲಿ ನಡೆಯುತ್ತಾ ಧರ್ಮದ ಏಳಿಗೆಗಾಗಿ ಶ್ರಮಿಸೋಣ.

ಯುವ ಜನತೆ ಈ ಸಂಘಟನೆ ಮೂಲಕ ಸಮಾಜದ ಅಭಿವೃದ್ಧಿಗೆ ಸಹಕಾರಿಯಾಗುವ ನಿಟ್ಟಿನಲ್ಲಿ ಗುರು ಮಾರ್ಗದರ್ಶನದಲ್ಲಿ ಮಠ ಮಂದಿರಗಳ ಅಭಿವೃದ್ಧಿ, ಸಾಮೂಹಿಕ ಉಪನಯನ ಕಾರ್ಯಕ್ರಮ ಸೇರಿ ಇತರೆ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಧರ್ಮದ ದಾರಿಯಲ್ಲಿ ನಡೆಯಬೇಕು ಎಂದರು. ಮಾರುತಿರಾವ ವಿಶ್ವಕರ್ಮ, ರಮೇಶ ಪಂಚಾಳ, ದತ್ತಾತ್ರಿ ವಿಶ್ವಕರ್ಮ, ಗುರುನಾಥ ವಿಶ್ವಕರ್ಮ, ಅಶ್ವಥ ವಿಶ್ವಕರ್ಮ, ರಾಜಕುಮಾರ ವಿಶ್ವಕರ್ಮ, ಓಂಕಾರ ವಿಶ್ವಕರ್ಮ, ನಾಗೇಂದ್ರ ವಿಶ್ವಕರ್ಮ, ಮಹೇಶ ವಿಶ್ವಕರ್ಮ, ಸಾಗರ, ವಿನೋದ, ಪ್ರವೀಣ, ಬಸವ, ಮಹೇಶ ಸೇರಿದಂತೆ ಸಮಾಜದ ಹಿರಿಯರು ಪ್ರಮುಖರು ಇದ್ದರು.

ಸೆ.18, 19 ರಂದು ತಂತ್ರಜ್ಞಾನ ಚಿಕಿತ್ಸಾಲಯ–ಬೆಲ್ಲ ಕ್ಲಸ್ಟರ್

## ಸೂಕ್ಷ್ಮ ಸಣ್ಣ ಮಾಧ್ಯಮ ಉದ್ಯಮಿಗಳಿಗೆ ಎರಡು ದಿನಗಳ ಕಾರ್ಯಾಗಾರ

**ಮಲ್ಲಮ್ಮ ನುಡಿ ವಾರ್ತೆ**

ಬೀದರ, ಸೆಪ್ಟೆಂಬರ್.16 –ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಜಿಲ್ಲಾ ಕೈಗಾರಿಕಾ ಕೇಂದ್ರ ಬೀದರ ಹಾಗೂ ಕರ್ನಾಟಕ ತಾಂತ್ರಿಕ ಉನ್ನತೀಕರಣ ಪರಿಷತ್ತು ಬೆಂಗಳೂರು ಇವರ ಸಂಯುಕ್ತಾಶ್ರಯದೊಂದಿಗೆ ಕೇಂದ್ರ ಸರ್ಕಾರದ ಎಂಎಸ್ಎಂಇ, ಆರ್ಎಎಂಪಿ ಯೋಜನೆಯಡಿ ಸೆಪ್ಟೆಂಬರ್.18 ಮತ್ತು 19 ರಂದು ಬೆಳಿಗ್ಗೆ 10 ರಿಂದ ಇನ್‌ಸ್ಪಿರಾ ರೆಸಾರ್ಟ್ ಮತ್ತು ಕನ್ವೆನ್ಷನ್ ಜನವಾಡ ರಸ್ತೆ ಹಳೆಯ ನೀರಿನ ಫಿಲ್ಟರ್ ಮನೆಯ ಹತ್ತಿರ, ಮರಖಲ ಗ್ರಾಮ ಬೀದರದಲ್ಲಿ ತಂತ್ರಜ್ಞಾನ ಚಿಕಿತ್ಸಾಲಯ–ಬೆಲ್ಲ ಕ್ಲಸ್ಟರ್ ಸೂಕ್ಷ್ಮ ಸಣ್ಣ ಮಾಧ್ಯಮ ಉದ್ಯಮಿಗಳಿಗೆ ಎರಡು ದಿನಗಳ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ.

ಕಾರ್ಯಾಗಾರದ ಉದ್ಘಾಟನೆಯನ್ನು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ.ಖಂಡ್ರೆ ಮಾಡಲಿದ್ದಾರೆ.

ಘನ ಉಪಸ್ಥಿತಿಯನ್ನು ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರಾದ ಶರಣಬಸಪ್ಪ ದರ್ಶನಾಪೂರ ವಹಿಸಲಿದ್ದಾರೆ. ಹಾಗೂ ಅಧ್ಯಕ್ಷತೆಯನ್ನು ಪೌರಾಡಳಿ ಮತ್ತು ಹಜ್ ಸಚಿವ ರಹೀಂ ಖಾನ್ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಲೋಕಸಭಾ ಸದಸ್ಯರಾದ ಸಾಗರ ಈಶ್ವರ ಖಂಡ್ರೆ, ಔರಾದ (ಬಿ) ಶಾಸಕ ಪ್ರಭು ಬಿ.ಚವ್ಹಾಣ್, ಬಸವಕಲ್ಯಾಣ ಶಾಸಕ ಶರಣು ಸಲಗರ, ಬೀದರ ದಕ್ಷಿಣ ಶಾಸಕ ಡಾ.ಶೈಲೇಂದ್ರ ಕೆ.ಬೆಲ್ದಾಳೆ, ಹುಮನಾಬಾದ ಶಾಸಕ ಡಾ.ಸಿದ್ಧಲಿಂಗಪ್ಪ ಎನ್. ಪಾಟೀಲ್ ಹಾಗೂ ವಿಧಾನ ಪರಿಷತ್ ಸದಸ್ಯರುಗಳಾದ ಡಾ.ಚಂದ್ರಶೇಖರ ಬಿ.ಪಾಟೀಲ, ಶಶೀಲ ಜಿ.ನಮೋಶಿ, ಭೀಮರಾವ ಬಿ.ಪಾಟೀಲ, ಡಾ.ಎಂ.ಜಿ.ಮೂಳೆ ಹಾಗೂ ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಮಾಲಾ ನಾರಾಯಣರಾವ್, ಬೀದರ ನಗರಸಭೆ ಅಧ್ಯಕ್ಷ ಮಹಮ್ಮದ ಗೌಸ್, ಬೀದರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಸವರಾಜ ಜಾಬಶೆಟ್ಟಿ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ನಿರ್ದೇಶಕ (ಎಂ.ಎಸ್.ಎಂ.ಇ), ನಿತೇಶ್ ಪಾಟೀಲ್ ಅವರುಗಳು ಆಗಮಿಸಲಿದ್ದಾರೆ.

ವಿಶೇಷ ಆಹ್ವಾನಿತರಾಗಿ ಕರ್ನಾಟಕ ತಾಂತ್ರಿಕ ಉನ್ನತೀಕರಣ ಪರಿಷತ್ತ ಬೆಂಗಳೂರು (ಕೆಸಿಟಿಯು) ವ್ಯವಸ್ಥಾಪಕ ನಿರ್ದೇಶಕರಾದ ಡಾ.ಅರುಣಕುಮಾರ ಹೆಚ್.ಆರ್., ಮಾಣಿಕ್ ವಿ.ರಾಘೋಜಿ, ಅಪರ ನಿರ್ದೇಶಕರು (ಎಂ.ಎಸ್.ಎಂ., ಇ&ಪಿಪಿ), ಕೇಂದ್ರ ಕಚೇರಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಬೆಂಗಳೂರಿನ ಮಾಣಿಕ್ ವಿ.ರಾಘೋಜಿ, ಬೀದರ ವಾಣಿಜ್ಯ ಮಂಡಳಿಯ ಅಧ್ಯಕ್ಷ ಬಿ.ಜಿ.ಶೆಟ್ಕರ್, ಬೀದರ ಸಣ್ಣ ಕೈಗಾರಿಕೆಗಳ ಸಂಘದ ಅಧ್ಯಕ್ಷ ಶಿವರಾಜ ಹಲಶೆಟ್ಟಿ, ಬೀದರ ಔಷಧ ಮತ್ತು ರಾಸಾಯನಿಕ ಸಂಘದ ಅಧ್ಯಕ್ಷ ದೇವೇಂದ್ರಪ್ಪ, ಬೀದರ ಗಾಂಧಿಗಂಜ್ ಇಂಡಸ್ಟ್ರೀಸ್ ಸಂಘದ ಅಧ್ಯಕ್ಷ ಡಿ.ವಿ.ಸಿಂದೋಲ್, ಬೀದರ ಎಸ್.ಸಿ./ಎಸ್.ಟಿ. ಇಂಡಸ್ಟ್ರೀಸ್ ಸಂಘದ ಅಧ್ಯಕ್ಷ ವಿಜಯಕುಮಾರ, ಬೀದರ ಫ್ಯಾಬ್ರಿಕೇಶನ್ ಸಂಘದ ಅಧ್ಯಕ್ಷ ಬಸವರಾಜ್ ನಿಟ್ಟೂರೇ, ಬೀದರ ಅಕ್ಕಿ ಗಿರಿಣಿಯ ಮಾಲೀಕರ ಸಂಘದ ಕಾರ್ಯದರ್ಶಿ ಬಸವರಾಜ್ ಧನ್ನೂರು ಅವರುಗಳು ಭಾಗವಹಿಸಿದ್ದಾರೆ.

## ಕೋಲಿ ಸಮಾಜದ ರಾಷ್ಟ್ರೀಯ ಜಿಲ್ಲಾಧ್ಯಕ್ಷ ಸಮಿತಿಗೆ ಅಶೋಕ ಕೋಲಿ ಆಯ್ಕೆ:ಗ್ರಾಮಸ್ಥರ ಹರ್ಷ



**ಮಲ್ಲಮ್ಮ ನುಡಿ ವಾರ್ತೆ**

ಹುಮನಾಬಾದ:ಅಖಿಲಭಾರತೀಯ ಕೋಲಿ ಸಮಾಜದ ರಾಷ್ಟ್ರೀಯ ಜಿಲ್ಲಾಧ್ಯಕ್ಷ ಸಮಿತಿಗೆ ಅಶೋಕ ಕೋಲಿ ಚಂದ್ರಪ್ಪ ಬಾಲಕುಂದಿ ರವರು ಆಯ್ಕೆಗೊಂಡಿದಕ್ಕೆ ಹುಮನಾಬಾದ ತಾಲ್ಲೂಕಿನ ಹಳ್ಳಿಖೇಡ (ಕೆ) ವಾಡಿಯ ಶ್ರೀ ರಾಮ ಮಂದಿರ ಆಶ್ರಮದಲ್ಲಿ ಮಾಣಿಕ ಪ್ರಭ ಸದಲಾಪೂರೆ ರವರು ಶಾಲು ಹೊದಿಸಿ ಸನ್ಮಾನಿಸಿ ಗೌರವಿಸಿದರು. ಈ ಸಂದರ್ಭದಲ್ಲಿ ವೀರಣ್ಣಾ ಹೆಚ್.ಉಪ್ಪಾರ, ಲಕ್ಷ್ಮಣ ಸದಲಾಪೂರೆ, ಬಾಬುರಾವ ಬಿ. ಸದಲಾಪೂರೆ, ಮಾಣಿಕ ಜೆ ಸದಲಾಪೂರೆ, ಮಹಾಂತೇಶ ಉಪ್ಪಾರ, ಚಂದ್ರಕಾಂತ ವಿ.ಉಪ್ಪಾರ, ಗೋಪಾಲ ಎನ್.ಸದಲಾಪೂರೆ, ಸೂರ್ಯಕಾಂತ ಎಸ್.ಉಪ್ಪಾರ, ಪವನ ಎನ್ ಸದಲಾಪೂರೆ, ರಂಗ ಆರ್ ಸದಲಾಪೂರೆ, ಅಂಜು ಟಿ. ಉಪ್ಪಾರ, ಸುನೀಲ ಎಸ್ ಉಪ್ಪಾರ, ಜೈಕೀಸಾ ಜೆ ಸದಲಾಪೂರೆ, ನರಸಪ್ಪ ಹೆಚ್. ಉಪ್ಪಾರ, ಸಂಜುಕುಮಾರ ಎ. ಹಲಬುರ್ಗಿ, ಜ್ಞಾನೇಶ್ವರ ಜಿ. ಗುಣತ್ತುರ, ಅಮೃತ ಎಲ್ ಹಲಬುರ್ಗಿ, ಯಲ್ಲಪ್ಪಾ ವಿ. ಹಿರನಗಾಂವ ಹಾಗೂ ಗ್ರಾಮಸ್ಥರು ಅಭಿನಂದನೆ ಸಲ್ಲಿಸಿದರು.

## 7, 8 ಮತ್ತು 9ನೇ ತರಗತಿ ದಾಖಲಾತಿಗೆ ಪ್ರವೇಶ ಪರೀಕ್ಷೆ ಸೆ.21ಕ್ಕೆ

**ಮಲ್ಲಮ್ಮ ನುಡಿ ವಾರ್ತೆ**

ಬೀದರ, ಸೆಪ್ಟೆಂಬರ್.16 – ಬೀದರ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕ್ರೈಸ್ ಅಧೀನದ ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ/ ಅಟಲ್ ಬಿಹಾರಿ ವಾಜಪೇಯಿ/ಡಾಬಿಆರ್ ಅಂಬೇಡ್ಕರ್/ ಶ್ರೀಮತಿ ಇಂದಿರಾಗಾಂಧಿ ವಸತಿ ಶಾಲೆಗಳಲ್ಲಿ 2025–26ನೇ ಸಾಲಿನಲ್ಲಿ ಖಾಲಿಯುಳಿದಿರುವ 7, 8 ಮತ್ತು 9ನೇ ತರಗತಿಗಳ ಖಾಲಿ ಉಳಿದಿರುವ ಸ್ಥಾನಗಳ ದಾಖಲಾತಿಗೆ ದಿನಾಂಕ 21–09–2025 ರಂದು ಬೆಳಿಗ್ಗೆ 11 ರಿಂದ ಜ್ಞಾನಸುಧಾ ವಿದ್ಯಾಲಯ, ಶಿವನಗರ, ಬೀದರದಲ್ಲಿ ಪ್ರವೇಶ ಪರೀಕ್ಷೆ ಆಯೋಜನೆ ಮಾಡಲಾಗಿದೆ.

ಹೀಗಾಗಿ ಈಗಾಗಲೇ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳ ಪಾಲಕರು/ ಪೋಷಕರು ತಮ್ಮ ಮಕ್ಕಳ ಇತ್ತಿಚಿನ 2 ಭಾವಚಿತ್ರ, ಆಧಾರ ಕಾರ್ಡ್ ಮತ್ತು ಜಾತಿ ಆದಾಯ ಪತ್ರದೊಂದಿಗೆ ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ನೌಬಾದ, ಬೀದರ ಇಲ್ಲಿ ದಿನಾಂಕ 18–09–2025 ರಿಂದ 19–09–2025 ರವರೆಗೆ ಪ್ರವೇಶ ಪತ್ರ ಸ್ವೀಕರಿಸಬೇಕೆಂದು ಬೀದರ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಜಿಲ್ಲಾ ಸಮನ್ವಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಹಿಟ್ನಾಳ ಮತ್ತು ಅಗಳಕೇರಿ ಗ್ರಾಮದಲ್ಲಿ ನೂತನ ಅಂಚೆ ಕಟ್ಟಡ ಕಾಮಗಾರಿ ಚಾಲನೆ: ಸಂಸದ ರಾಜಶೇಖರ್ ಹಿಟ್ನಾಳ್

**ಮಲ್ಲಮ್ಮ ನುಡಿ ವಾರ್ತೆ**

ಕೊಪ್ಪಳ:ನನ್ನ ಅವಧಿಯಲ್ಲಿ ಕೊಪ್ಪಳ ಜಿಲ್ಲೆಯ 185 ಅಂಚೆ ಕಚೇರಿಗಳಿಗೆ ಸ್ವಂತ ಕಟ್ಟಡಗಳನ್ನು ನಿರ್ಮಿಸುವ ಗುರಿ ಹೊಂದಿದ್ದೇನೆ. ಹೀಗಾಗಲೇ 4ಕಟ್ಟಡಗಳು ಉದ್ಘಾಟನೆಗೆ ಸಿದ್ದವಾಗಿವೆ. ಉಳಿದವುಗಳನ್ನು ಕಿರ್ಲೋಸ್ಕರ್, ಎಕ್ಸ್ ಇಂಡಿಯಾ, ಮುಕುಂದ ಸುಮಿಯಂತಹ ಕಾರ್ಖಾನೆಗಳಂತಹ ಸಾಮಾಜಿಕ ಹೊಣೆಗಾರಿಕೆ ನಿಧಿ ಅನುದಾನದ ಅಡಿಯಲ್ಲಿ ನಿರ್ಮಿಸಿ ಕೊಡುತ್ತೇವೆ ಎಂದು ಕೊಪ್ಪಳ ಸಂಸದ ಕೆ.ರಾಜಶೇಖರ್ ಹಿಟ್ನಾಳ್ ಹೇಳಿದರು

ಅವರು ತಮ್ಮ ಸ್ವ ಗ್ರಾಮ ಕೊಪ್ಪಳ ತಾಲೂಕು ಹಿಟ್ನಾಳ್ ಗ್ರಾಮದಲ್ಲಿ ಕಿರ್ಲೋಸ್ಕರ ಕಂಪನಿ ಸಾಮಾಜಿಕ ಹೊಣೆಗಾರಿಕೆ ನಿಧಿ ( ಸಿ ಎಸ್ ಆರ್ ಫಂಡ್) ಅನುದಾನದಡಿಯಲ್ಲಿ ಅಂಚೆ ಕಚೇರಿ ನೂತನ ಕಟ್ಟಡ ಅಡಿಗಲ್ಲು ಕಾರ್ಯಕ್ರಮ ಉದ್ಘಾಟನೆ ಮಾಡಿ ಮಾತನಾಡಿದರು. ನಮ್ಮ ಭಾಗದ ಕಿರ್ಲೋಸ್ಕರ ಕಾರ್ಖಾನೆಯು ತಮ್ಮ ಸಿ ಎಸ್ ಆರ್ ಫಂಡ್ ದಿಂದ ಒಟ್ಟು 15 ಕಟ್ಟಡಗಳನ್ನ ನಿರ್ಮಿಸಿಕೊಡಲು ಒಪ್ಪಿಕೊಂಡಿದ್ದು ಈ ವರ್ಷ 10 ಕಟ್ಟಡಗಳನ್ನ ನಿರ್ಮಿಸಿ ಕೊಡುತ್ತೇವೆ ಎಂದು ಹೇಳಿದ್ದಾರೆ, ಈಗಾಗಲೇ ಮುಕುಂದ ಸುಮಿ ಕಾರ್ಖಾನೆಯು ಕಟ್ಟಡ ಕಾಮಗಾರಿಗಳನ್ನು ಪ್ರಾರಂಭಿಸಿದ್ದಾರೆ,



ಎಕ್ಸ್–ಇಂಡಿಯಾ ಕಾರ್ಖಾನೆ ಕೂಡ ಸಹ ಈ ಸಾಮಾಜಿಕ ಕಾರ್ಯದಲ್ಲಿ ಭಾಗಿಯಾಗಿದೆ ಎಂದರು. ಅದರ ಜೊತೆಗೆ ನಾಲ್ಕು ಗ್ರಾಮ ಪಂಚಾಯಿತಿಗೆ ಒಂದರಂತೆ ಇರುವ 34 ಅಂಚೆ ಉಪ ಕಚೇರಿಗಳಲ್ಲಿ ಆರು ಕಚೇರಿಗಳು ಈಗಾಗಲೇ ಸ್ವಂತ ಕಟ್ಟಡ ಹೊಂದಿವೆ. ಇನ್ನುಳಿದವುಗಳನ್ನು ನನ್ನ ಅವಧಿಯಲ್ಲಿ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಕಟ್ಟಡ ಕಾಮಗಾರಿ ಭೂಮಿ ಪೂಜೆಯಲ್ಲಿ ಭಾಗಿಯಾದ ಕಿರ್ಲೋಸ್ಕರ್ ಕಾರ್ಖಾನೆ ವ್ಯವಸ್ಥಾಪಕ ನಿರ್ದೇಶಕ ಆರ್ ವಿ ಗುಮಾಸ್ತೇ ಮಾತನಾಡಿ ಈ ದಿನ ಅಗಳಕೇರಿ ಮತ್ತು ಹಿಟ್ನಾಳ್ ಗ್ರಾಮದಲ್ಲಿ ಅಂಚೆ ಕಚೇರಿ ಕಟ್ಟಡ ಕಾಮಗಾರಿಗೆ ಭೂಮಿ ಪೂಜೆ ಮಾಡಿದ್ದೇವೆ. ಶೀಘ್ರದಲ್ಲಿ ಹಂತ ಹಂತವಾಗಿ ಉಳಿದ ಕಟ್ಟಡ ಕಾಮಗಾರಿಗಳನ್ನು ಪ್ರಾರಂಭ ಮಾಡುತ್ತೇವೆ ಅಂದ ಅವರು ಈ ಭಾಗದ ಶೈಕ್ಷಣಿಕ ಸಾಮಾಜಿಕ ಆರ್ಥಿಕ ಅಭಿವೃದ್ಧಿಗೆ ನಮ್ಮ ಕಾರ್ಖಾನೆ ಸದಾ ಸಿದ್ಧವಾಗಿದೆ ಎಂದರು .

ಕಾರ್ಯಕ್ರಮದಲ್ಲಿ ಕಾರ್ಯನಿರ್ವಾಹಕ ಉಪಾಧ್ಯಕ್ಷ ಪಿ ನಾರಾಯಣ್, ಗ್ರಾಮ ಪಂಚಾಯತಿ ಅಧ್ಯಕ್ಷ ಸುಜಾತ ಮಾರುತಿ ಹೊಸಪೇಟೆ, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ವೆಂಕಟೇಶ್, ಶ್ರೀರಾಮ್ ಮೊರಾರ್ಕ್ ಪ್ರೌಢಶಾಲೆ ಆಡಳಿತ ಮಂಡಳಿ ಸದಸ್ಯ ವಿಜಯಕುಮಾರ್ ಪಾಟೀಲ್, ಸಹಕಾರಿ ದೂರಿಣ ರಮೇಶ್ ವೈದ್ಯ, ಕಾರ್ಖಾನೆ ಸಿ ಎಸ್ ಆರ್ ವಿಭಾಗದ ವ್ಯವಸ್ಥಾಪಕ ಉದ್ದವ್ ಕುಲಕರ್ಣಿ, ಸಿ ಪಿ ಸಿ ಗವಿಸಿದ್ದಪ್ಪ ಹಳ್ಳಿ, ಗ್ರಾಮ ಪಂಚಾಯತ್ ಉಪಾಧ್ಯಕ್ಷ ರಾಜಶೇಖರ್ ಬಂಡಿಹಾಳ ಗ್ರಾಮದ ಗಣ್ಯರು ಸೇರಿದಂತೆ ಹಲವರು ಭಾಗಿಯಾಗಿದ್ದರು.

Regd.No.: Doct. No. 90/22-23 Dt: 14.10.2022

॥ ಜೈ ಹಿಂದ ॥

**ಸರದಾರ ವಲ್ಲಭಾಯಿ ಪಟೇಲ ಸ್ಮೃತಿ ಸಮಿತಿ ಹುಮನಾಬಾದ– ಜಿ ಬೀದರ– 585330**

| ಅಧ್ಯಕ್ಷರು | ಕಾರ್ಯದರ್ಶಿ |
| --- | --- |
| ಶ್ರೀ ಶಿವಲಿಂಗ ಸ್ವಾಮಿ | ಶ್ರೀ ಶಿವಕುಮಾರ ಬೋರಿ |
| ಮೊ.9008585685 | ಮೊ.9008683855 |

**ಇವರಿಗೆ,**

.....................................................

.....................................................

.....................................................

**ವಿಷಯ** :–17ನೇ ಸೆಪ್ಟೆಂಬರ್ ಹೈದ್ರಾಬಾದ – ಕರ್ನಾಟಕ (ಕಲ್ಯಾಣ ಕರ್ನಾಟಕ) ವಿಮೋಚನಾ ದಿನಾಚರಣೆ ಅಂಗವಾಗಿ ಸರದಾರ ವಲ್ಲಭಾಯಿ ಪಟೇಲ್ ವೃತ್ತದಲ್ಲಿ ಧ್ವಜಾರೋಹಣ ಕಾರ್ಯಕ್ರಮಕ್ಕೆ ಆಮಂತ್ರಣ ಪತ್ರಿಕೆ.

*****

**ಮಾನ್ಯರೇ,**

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರದಾರ ವಲ್ಲಭಾಯಿ ಪಟೇಲ್ ಸ್ಮೃತಿ ಸಮಿತಿ ಹುಮನಾಬಾದ ವತಿಯಿಂದ ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಸೆಪ್ಟೆಂಬರ್ 17 ರಂದು ಹೈದ್ರಾಬಾದ–ಕರ್ನಾಟಕ (ಕಲ್ಯಾಣ ಕರ್ನಾಟಕ) ವಿಮೋಚನಾ ದಿನಾಚರಣೆಯನ್ನು ಅತಿ ವಿಜೃಂಭಣೆಯಿಂದ ಆಚರಿಸುತ್ತಿದ್ದು, ಅದರಂತೆ ಸದರಿ ದಿನಾಂಕದಂದು ಮುಂಜಾನೆ ಸರಿಯಾಗಿ 9 ಗಂಟೆಗೆ ಸರದಾರ ವಲ್ಲಭಾಯಿ ಪಟೇಲ್ ವೃತ್ತದಲ್ಲಿ ಧ್ವಜಾರೋಹಣ ಕಾರ್ಯಕ್ರಮ ನೆರವೇರಿಸುತ್ತಿದ್ದು, ದಯಾಳುಗಳಾದ ತಾವುಗಳು ಸದರಿ ಧ್ವಜಾರೋಹಣ ಕಾರ್ಯಕ್ರಮಕ್ಕೆ ಸಮಯಕ್ಕಿಂತ 10 ನಿಮಿಷ ಮುಂಚಿತವಾಗಿ ಬಂದು ಸದರಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿಕೊಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ.

**ಧನ್ಯವಾದಗಳೊಂದಿಗೆ,**

**ತಮ್ಮ ವಿಶ್ವಾಸಿ**
ಅಧ್ಯಕ್ಷರು
ಸರದಾರ ವಲ್ಲಭಾಯಿ ಪಟೇಲ್ ಸ್ಮೃತಿ ಸಮಿತಿ
ಹುಮನಾಬಾದ, ಜಿ:ಬೀದರ,

# ನಾಡ ಗೀತೆಗೆ ನೂರರ ಸಂಭ್ರಮ ಸಾವಿರ ಸ್ವರಗಳ ನಮನ



ಮಲ್ಲಮ್ಮನುಡಿವಾರ್ತೆಬೀದರ:ಸೆ.16:ನಗರದ ಬಿ.ವಿ.ಭೂಮರಡ್ಡಿ ಪದವಿ ಮಹಾವಿದ್ಯಾಲಯದಲ್ಲಿ ಕನ್ನಡ ವಿಭಾಗದಿಂದ ರಾಷ್ಟ್ರಕವಿ ಕುವೆಂಪು ವಿರಚಿತ ನಾಡಗೀತೆ "ಜಯ ಭಾರತ ಜನನೀಯ ತನುಜಾತೆ" ರಚಿಸಿ ನೂರು ವರ್ಷವಾದ ಪ್ರಯುಕ್ತ "ನಾಡಗೀತೆಗೆ ನೂರರ ಸಂಭ್ರಮ ಸಾವಿರ ಸ್ವರಗಳ ನಮನ" ಎನ್ನುವ ವಿನೂತನ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಪ್ರಾಂಶುಪಾಲರಾದ ಡಾ. ಪಿ.ವಿಠ್ಠಲ ರಡ್ಡಿಯವರು ರಾಷ್ಟ್ರಕವಿ ಕುವೆಂಪು ಹಾಗೂ ಕನ್ನಡಾಂಬೆ ಭುವನೇಶ್ವರಿಯ ಭಾವಚಿತ್ರಗಳಿಗೆ ಪೂಜೆ ಸಲ್ಲಿಸುವುದರ ಮುಖಾಂತರ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡುತ್ತ ನಾಡಗೀತೆ ಕನ್ನಡದ ಹೆಮ್ಮೆ ಸಾರುವ ಸಾಹಿತ್ಯ ಹೊಂದಿದೆ ಕರ್ನಾಟಕ ಹಿರಿಮೆ ಮಾತ್ರವಲ್ಲ ಭಾರತ ಮಾತೆಯ ಮಗಳು ಎಂಬ ಪರಿಕಲ್ಪನೆಯೊಂದಿಗೆ ಶಾಂತಿ ಸಹಬಾಳ್ವೆ ಸೌಹಾರ್ದತೆತೆಯನ್ನು ಸಾರುವ ಸಾಹಿತ್ಯ ಹೊಂದಿದ ಅಪ್ರತಿಮ ಸಾಹಿತಿ ಕುವೆಂಪುರವರಕೊಡುಗೆ ಎಂದು ನುಡಿದರು. ಅತಿಥಿಗಳಾಗಿ ಆಗಮಿಸಿದ ಸತ್ಯಂ ಕಾಲೇಜಿನ ಅಧ್ಯಕ್ಷರಾದ ಶ್ರೀಯುತ ಶಿವಾಜಿ ಭೋಸ್ಲೆಯವರು ನಾಡಿನ ಹಿರಿಮೆ ಗರಿಮೆ ಸಂಸ್ಕೃತಿ ಕುರಿತು ಮಾತನಾಡಿದರು. ಕನ್ನಡ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ರೇಣುಕಾದೇವಿ ಮಳ್ಳಿ ಸ್ವಾಮಿ ಪ್ರಾಸ್ತಾವಿಕವಾಗಿ ಮಾತನಾಡುತ್ತ ಕುವೆಂಪುಯವರು ತಮ್ಮ 20ನೇ ವಯಸ್ಸಿನಲ್ಲಿಯೇ ನಾಡಗೀತೆಯಂಥಹ ಅದ್ಭುತ ಸಾಹಿತ್ಯವನ್ನು ರಚಿಸಿದ ಕನ್ನಡದ ಶ್ರೇಷ್ಠ ಸಾಹಿತಿ ಎಂದು ಹೇಳುತ್ತಾ ನಾಡಗೀತೆ ಇತಿಹಾಸ ವಿಶೇಷತೆ ಕುರಿತ ಮಾತನಾಡಿದರು.

ಪದವಿ ಪೂರ್ವ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ದೀಪಾ ರಾಗರವರು ಗೌರವ ಉಪಸ್ಥಿತಿ ಸ್ಥಾನವನ್ನು ಅಲಂಕರಿಸಿದರು. ವಿಶೇಷವೆಂದರೆ ಮಹಾವಿದ್ಯಾಲಯದ ವಿದ್ಯಾರ್ಥಿಗಳೆಲ್ಲರು ನಾಡಗೀತೆ ಹಾಗೂ ಕನ್ನಡ ಗೀತೆಗಳನ್ನು ಹಾಡುವುದರ ಮುಖಾಂತರ ಸಂಭ್ರಮಿಸಿ ಗಮನ ಸೆಳೆದರು. ಕನ್ನಡ ವಿಭಾಗದ ಉಪನ್ಯಾಸಕಿ ಶ್ರೀಮತಿ ಕಾವೇರಿ ಖಂಡ್ರೆ ನಿರೂಪಿಸಿದರೆ, ಇತಿಹಾಸ ವಿಭಾಗದ ಉಪನ್ಯಾಸಕರಾದ ಶ್ರೀ ಬಸವರಾಜ ಬಿರಾದಾರ ಸ್ವಾಗತಿಸಿದರೆ ಶ್ರೀಮತಿ ರತಿದೇವಿ ವಂದಿಸಿದರು ಮಹಾವಿದ್ಯಾಲಯದ ಎಲ್ಲಾ ವಿಭಾಗದ ವಿದ್ಯಾರ್ಥಿಗಳು, ಪ್ರಾಧ್ಯಾಪಕರು ಹಾಗೂ ಬೋಧಕೇತರ ಸಿಬ್ಬಂದಿಯವರು ಹಾಜರಿದ್ದರು.

# ಬಿ.ವಿ.ಬಿ. ಮಹಾವಿದ್ಯಾಲಯದಲ್ಲಿ ಹಿಂದಿ ದಿವಸ ಆಚರಣೆ



ಮಲ್ಲಮ್ಮ ನುಡಿ ವಾರ್ತೆ ಬೀದರ :ಸೆ.16:ಬಿ.ವಿ.ಬಿ.ಮಹಾವಿದ್ಯಾಲಯದಲ್ಲಿ ಹಿಂದಿ ವಿಭಾಗದಿಂದ ಹಿಂದಿ ದಿವಸ ಕಾರ್ಯಕ್ರಮದ ಆಚರಣೆಯನ್ನು ಬಹಳ ಉತ್ಸಾಹದಿಂದ ಆಚರಿಸಲಾಯಿತು.

ಮಹಾವಿದ್ಯಾಲಯದ ಪ್ರಾಚಾರ್ಯರು ಹಾಗೂ ಮುಖ್ಯ ಅತಿಥಿ ಡಾ. ಪಿ. ವಿಠಲ ರೆಡ್ಡಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ ಹಿಂದಿಯನ್ನು ರಾಷ್ಟ್ರದ ಆತ್ಮ ಮತ್ತು ಸಂಸ್ಕೃತಿಯ ಆಧಾರವೆಂದು ಬಣ್ಣಿಸಿದರು ಮತ್ತು ಹಿಂದಿ ಭಾಷೆಯ ಪ್ರಚಾರ ಮತ್ತು ಪ್ರಚಾರದಲ್ಲಿ ಸಕ್ರಿಯವಾಗಿ ಕೊಡುಗೆ ನೀಡಬೇಕೆಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು. ವಿಭಾಗದ ಮುಖ್ಯಸ್ಥೆ ಡಾ. ದೀಪಾ ರಾಗಾ ಮಾತನಾಡಿ, ಹಿಂದಿ ಕೇವಲ ಒಂದು ಭಾಷೆಯಲ್ಲ, ಆದರೆ ಭಾರತೀಯ ಏಕತೆ ಮತ್ತು ವೈವಿಧ್ಯತೆಯ ಗುರುತು. ಅವರು ಮಾತೃಭಾಷೆ ಮತ್ತು ಅಧಿಕೃತ ಭಾಷೆ ಹಿಂದಿಯಲ್ಲಿ ಅಧ್ಯಯನ ಮಾಡಲು ಮತ್ತು ಬರೆಯಲು ವಿದ್ಯಾರ್ಥಿಗಳನ್ನು ಪ್ರೇರೇಪಿಸಿದರು.

ಶ್ರೀ ಮಾರುತಿ ಭೀಮಣ್ಣ ಸ್ವಾಗತ ಭಾಷಣ ಮತ್ತು ಸಂಪೂರ್ಣ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು. ಹಿಂದಿ ಭಾಷೆಯ ಮಹತ್ವ ಮತ್ತು ಇಂದಿನ ಕಾಲದಲ್ಲಿ ಅದರ ಪ್ರಸ್ತುತತೆಯನ್ನು ಎತ್ತಿತೋರಿಸುವ ಮೂಲಕ ಅವರು ಅತಿಥಿಗಳನ್ನು ಸ್ವಾಗತಿಸಿದರು. ನೂರ ಪಾಶಾ ಅವರು ಧನ್ಯವಾದ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ವಿವಿಧ ವಿಭಾಗಗಳ ಮುಖ್ಯಸ್ಥರು, ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳಿಗೆ ಉಪಸ್ಥಿತರಿದ್ದರು.

# 5.5 ಲಕ್ಷ ಮೆಟ್ರಿಕ್ ಟನ್ ಕಬ್ಬು ನುರಿಸುವ ಗುರಿ




ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಸೆ.16:ಕಳೆದ ಹಂಗಾಮಿನಲ್ಲಿ ಕಬ್ಬು ಪೂರೈಸಿದ ಕಬ್ಬು ಬೆಳೆಗಾರರ ಪ್ರತಿ ಟನ್ ಕಬ್ಬಿಗೆ 1ಕೆಜಿ ಉಚಿತ ಸಕ್ಕರೆ ವಿತರಿಸಲಾಗುವುದು ಎಂದು ಮಹಾತ್ಮ ಗಾಂಧಿ ಸಕ್ಕರೆ ಕಾರ್ಖಾನೆ ಅಧ್ಯಕ್ಷ ವೈಜಿನಾಥ ಪಾಟೀಲ್ ಭರವಸೆ ನೀಡಿದರು. ತಾಲೂಕಿನ ಹುಣಜಿ(ಎ) ಸಮೀಪದ ಮಹಾತ್ಮ ಗಾಂಧಿ ಸಕ್ಕರ ಕಾರ್ಖಾನೆ ಆವರಣದಲ್ಲಿ ಸೋಮವಾರ ಆಯೋಜಿಸಿದ್ದ 34ನೆಯ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.2024–25ನೆಯ ಸಾಲಿನ ಹಂಗಾಮಿನಲ್ಲಿ 397454 ಮೆಟ್ರಿಕ್ ಟನ್ ಕಬ್ಬು ನುರಿಸಿಸಿ 391400 ಕ್ವಿಂಟಲ್ ಸಕ್ಕರೆ ಉತ್ಪಾದಿಸಿ ಶೇ.9.85ರಷ್ಟು ಇಳುವರಿ ಸಾಧಿಸಲಾಗಿದೆ. ಪ್ರಸಕ್ತ 2025–26ನೆಯ ಸಾಲಿನ ಹಂಗಾಮಿನಲ್ಲಿ 5.5 ಲಕ್ಷ ಮೆಟ್ರಿಕ್ ಟನ್ ಕಬ್ಬು ನುರಿಸುವ ಗುರಿ ಹೊಂದಲಾಗಿದೆ. ಕಬ್ಬು ಬೆಳೆಗಾರರು, ಆಡಳಿತ ಮಂಡಳಿಯ ಸಹಕಾರದಿಂದ ಕಾರ್ಖಾನೆಯನ್ನು ಉತ್ತಮರೀತಿಯಲ್ಲಿ ಮುನ್ನಡಿಸಿಕೊಂಡು ಹೋಗಲಾಗುತ್ತಿದೆ. ಮುಂಬರುವ ದಿನಗಳಲ್ಲಿ ಖರ್ಚು ವೆಚ್ಚ ಕಡಿತಗೊಳಿಸಿ ಕಾರ್ಖಾನೆಗಿರುವ ಸಾಲದ ಹೊರೆ ಕಡಿಮೆ ಮಾಡಲಾಗುವುದು. ಕಳೆದ ಹಂಗಾಮಿನಲ್ಲಿ ಕಬ್ಬು ಸಾಗಿಸಿದ ರೈತರು ಪ್ರತಿ ಟನ್ ಕಬ್ಬಿಗೆ ಹೆಚ್ಚುವರಿಯಾಗಿ 50 ರೂ ನೀಡುವಂತೆ ಬೇಡಿಕೆಯಿದ್ದು ಆಡಳಿತ ಮಂಡಳಿ ಸಭೆಯಲ್ಲಿ ಚರ್ಚಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. ಕಾರ್ಖಾನೆ ಅಧೀಕ್ಷಕ ರಮೇಶ ಚಿದ್ರಿ ವಾರ್ಷಿಕ ವರದಿ ಮಂಡಿಸಿದರು.

ಈ ಸಂದರ್ಭದಲ್ಲಿ ನಿರ್ದೇಶಕರಾದ ಬಾಬುರಾವ ಪಾಟೀಲ್, ಶಿವಶಂಕರ ಪಾಟೀಲ್, ಲಿಯಾಖತ್ ಅಲಿ ಅಹ್ಮದ್ ಅಲಿ, ಸಂಗಾರೆಡ್ಡಿ ಸಿದ್ದಾರೆಡ್ಡಿ, ಶಂಕರ ಜಮಲೂ ಚವ್ಹಾಣ,

ಅಶೋಕಕುಮಾರ ಕೋಟಿ, ಬಾಬುರಾವ ಪೊಲೀಸ್ ಪಾಟೀಲ್, ಸಂಗ್ರಾಮ ಮುದ್ನಾಳೆ, ಸುರೇಖಾ ಶೆಟಕಾರ್, ನಳಿನಿ ಪಾಟೀಲ್, ಪ್ರಭಾರಿ ವ್ಯವಸ್ಥಾಪಕ ನಿರ್ದೇಶಕ ಬಿ.ಶಿವಣ್ಣ, ವಿನೋದ ಕೋಟೆ ಸೇರಿದಂತೆ ಹಲವರು ಇದ್ದರು.

**ಕಬ್ಬಿಗೆ ದರ ನಿಗದಿ ಪಡಿಸಿ**

ಪ್ರಸಕ್ತ ಸಾಲಿನ ಹಂಗಾಮು ಆರಂಭಕ್ಕೂ ಮುನ್ನ ಕಬ್ಬಿಗೆ ದರ ನಿಗದಿ ಪಡಿಸಿ ಕಬ್ಬು ಬೆಳೆಗಾರರಿಂದ ಕಬ್ಬು ಕೊಂಡೊಯ್ಯಬೇಕು ಎಂದು ಜಿಲ್ಲಾ ರೈತ ಸಂಘದ ಅಧ್ಯಕ್ಷ ಮಲ್ಲಿಕಾರ್ಜುನ ಸ್ವಾಮಿ, ಉಪಾಧ್ಯಕ್ಷ ಕಾಶಿನಾಥ ಭೂರೆ ಸೇರಿದಂತೆ ಮುಂತಾದ ರೈತರು ಮಾತನಾಡಿ, ಕಳೆದ ಹಂಗಾಮಿನಲ್ಲಿ ಕಬ್ಬು ಸಾಗಿಸಿದ ಬೆಳೆಗಾರರಿಗೆ ಪ್ರತಿ ಟನ್ ಕಬ್ಬಿಗೆ 2650 ರೂ ನೀಡಲಾಗಿದೆ. ಇನ್ನೂ ಹೆಚ್ಚುವರಿಯಾಗಿ ಪ್ರತಿ ಟನ್ ಕಬ್ಬಿಗೆ 50 ರೂ ನೀಡಬೇಕು. ಜತೆಗೆ ಪ್ರತಿ ಟನ್ ಕಬ್ಬಿಗೆ 5ಕೆ.ಜಿ ಸಕ್ಕರೆ ವಿತರಿಸಬೇಕು ಎಂದು ಒತ್ತಾಯ ಮಾಡಿದರು.

# ಮಾದಕ ಮುಕ್ತ ಕರ್ನಾಟಕ ಅಭಿಯಾನ ಜಾಗೃತಿ



ಮಲ್ಲಮ್ಮ ನುಡಿ ವಾರ್ತೆ

ಕಮಲನಗರ:ಸೆ.16: ತಾಲೂಕಿನ ಖತಗಾಂವ ಗ್ರಾಮದಲ್ಲಿ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಯೋಜನೆಯಡಿ ಪರಿವರ್ತನೆ ಮಾದಕ ಮುಕ್ತ ಕರ್ನಾಟಕ ಅಭಿಯಾನ ಜಾಗೃತಿ ಕಾರ್ಯಕ್ರಮ ಮಂಗಳವಾರ ಸರ್ಕಾರಿ ಪ್ರೌಢಶಾಲೆಯಲ್ಲಿ ನಡೆಯಿತು.

ತಾಲೂಕಾ ಕಾರ್ಯಕ್ರಮ ವ್ಯವಸ್ಥಾಪಕರು ಕು. ಕವಿತಾ ಬಿರಾದಾರ ರವರು ವಿದ್ಯಾರ್ಥಿಗಳಿಗೆ ಮಾದಕ ವಸ್ತುಗಳ ಸೇವನೆಯಿಂದ ಆರೋಗ್ಯ ಕೆಟ್ಟ ಹೋಗುವುದರ ಜೋತೆಗೆ ಹಣ ಆಸ್ಪತ್ರೆಗೆ ಸುರಿಯಬೇಕಾಗುತ್ತದೆ ಎಷ್ಟು ಜನರು ಮಾದಕ ವಸ್ತುಗಳ ಸೇವನೆಯಿಂದ ಆಸ್ತಿ ಅಂತಸ್ತು ಕಳೆದು ಕೊಂಡು ಎಷ್ಟು ಕುಟುಂಬಗಳು ಹಾಳಾಗಿ ಹೋಗಿವೆ ಎಂದು ತಿಳಿಸಿದರು.

ನಿಮ್ಮ ಭವಿಷ್ಯ ಉಜ್ವಲವಾಗಬೇಕು ದೊಡ್ಡವರಾದ ಮೇಲೆ ಮಾದಕ ವಸ್ತುಗಳದಿಂದ ದುರವಿರುತ್ತೆವೆ ಎಂದು ವಿದ್ಯಾರ್ಥಿಗಳಿಗೆ ಪ್ರತಿಜ್ಞೆ ಮಾಡಿದರು.

ನಂತರ ಸ್ವ ಸಹಾಯ

ಸಂಘದ ಮಹಿಳೆಯರು ಆಶಾ ಕಾರ್ಯಕರ್ತೆಯರ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಶಾಲೆಯ ಶಿಕ್ಷಕ

ಶಿಕ್ಷಕಿಯರು ಶಿಲ್ಪಾ ರಾಣಿ,ಜಗದೇವಿ, ನಂದಿನಿ,ತಬಸುಮ ಶೋಭಾ ಪವಿತ್ರಾ, ಸಂಗೀತಾ ಸೇರಿದಂತೆ ಇನ್ನಿತರ ಇದ್ದರು.

# ದಸರಾ ಮತ್ತು ದೀಪಾವಳಿ ಹಬ್ಬ-2025

## ಕಲಬುರಗಿ-ಕೊಲ್ಹಾಪುರ ನಡುವೆ ವಿಶೇಷ ರೈಲುಗಳ ಸಂಚಾರ

ಕಲಬುರಗಿ,ಸೆ.16–ಮುಂಬರುವ ದಸರಾ ಮತ್ತು ದೀಪಾವಳಿ ಹಬ್ಬದ ಸಂದರ್ಭದಲ್ಲಿ ಸಾರ್ವಜನಿಕರ ಪ್ರಯಾಣಿಕರ ಅನುಕೂಲಕ್ಕಾಗಿ ಕೇಂದ್ರ ರೈಲ್ವೆ ಇಲಾಖೆಯು ಸೊಲ್ಲಾಪುರ ವಿಭಾಗದ ಮೂಲಕ ಕೊಲ್ಹಾಪುರ ಮತ್ತು ಕಲಬುರಗಿ ನಡುವೆ ಕೆಳಕಂಡ ದಿನಾಂಕಗಳಂದು 116 ಟ್ರಿಪ್‌ಗಳಲ್ಲಿ ವಿಶೇಷ ರೈಲುಗಳನ್ನು ಓಡಿಸಲು ನಿರ್ಧರಿಸಿದೆ ಎಂದು ಕೇಂದ್ರ ರೈಲ್ವೆಯ ಸೋಲಾಪುರ ವಿಭಾಗದ ಸಾರ್ವಜನಿಕ ಸಂಪರ್ಕ ಇಲಾಖೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕೊಲ್ಹಾಪುರ–ಕಲಬುರಗಿ ವಿಶೇಷ ರೈಲು: ಕೊಲ್ಹಾಪುರ–ಕಲಬುರಗಿ ವಿಶೇಷ ರೈಲು (ರೈಲು ಸಂಖ್ಯೆ 01451) ಇದೇ ಸೆಪ್ಟೆಂಬರ್ 24 ರಿಂದ ನವೆಂಬರ್ 30 ರವರೆಗೆ ಪ್ರತಿದಿನ ಬೆಳಿಗ್ಗೆ 06.10 ಕ್ಕೆ ಕೊಲ್ಹಾಪುರದಿಂದ ಹೊರಟು ಅದೇ ದಿನ ಸಂಜೆ 4.10 ಕ್ಕೆ ಕಲಬುರಗಿಗೆ ಆಗಮಿಸಲಿದೆ. ಅದೇ ರೀತಿ ಕಲಬುರಗಿ–ಕೊಲ್ಹಾಪುರ ವಿಶೇಷ ರೈಲು (ರೈಲು ಸಂಖ್ಯೆ 01452) ಸೆಪ್ಟೆಂಬರ್ 24 ರಿಂದ ನವೆಂಬರ್ 30 ರವರೆಗೆ ಪ್ರತಿದಿನ (ಶುಕ್ರವಾರ ಹೊರತುಪಡಿಸಿ) 18.10 ಗಂಟೆಗೆ ಕಲಬುರಗಿಯಿಂದ ಹೊರಟು ಮರುದಿನ 05.40 ಗಂಟೆಗೆ ಕೊಲ್ಹಾಪುರ ತಲುಪಲಿದೆ.

ಹೆಚ್ಚಿನ ಮಾಹಿತಿಗಾಗಿ ತಿww. irctc.co.in ವೆಬ್‌ಸೈಟ್‌ನ್ನು, ಯು.ಟಿ.ಎಸ್. (ಗಖಿಖ) ಅಪ್ಲಿಕೇಶನ್‌ದಿಂದ ಹಾಗೂ ಈ ವಿಶೇಷ ರೈಲುಗಳ ನಿಲುಗಡೆಗಳ ಕುರಿತು ಹೆಚ್ಚಿನ ಮಾಹಿತಿಗಾಗಿ www. enquiry.indianrail.gov.in ಗೆ ವೆಬ್‌ಸೈಟ್‌ದಿಂದ ಅಥವಾ ಎನ್.ಟಿ.ಇ.ಎಸ್. (NTES)

ಅಪ್ಲಿಕೇಶನ್ ಡೌನ್ಲೋಡ್ ಮಾಡಿಕೊಂಡು

ಪ ಡೆ ಂ ು ಬ ಹ ು ದಾ ಗಿ ದೆ . ಪ್ರಯಾಣಿಕರು ತಪ್ಪದೇ ಟಿಕೇಟ್ ಪಡೆದು ಪ್ರಯಾಣಿಸಬೇಕೆಂದು ರೈಲ್ವೆ ಇಲಾಖೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ಸಕಾಲಕ್ಕೆ ಸಾಲ ಮರುಪಾವತಿಸಿ: ಅಧ್ಯಕ್ಷ ಮಡಿವಾಳಪ್ಪ ಮಂಗಲಗಿ




ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಸೆ.16: ರೈತರು ಪಡೆದ ಸಾಲವನ್ನು ಸಕಾಲಕ್ಕೆ ಮರುಪಾವತಿಸಿ ಬ್ಯಾಂಕ್‌ನ ಪ್ರಗತಿಗೆ ಕೈಜೋಡಿಸಬೇಕು ಎಂದು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ನ ಅಧ್ಯಕ್ಷ ಮಡಿವಾಳಪ್ಪ ಮಂಗಲಗಿ ಹೇಳಿದರು. ಪಟ್ಟಣದ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್(ಪಿಕಾರ್ಡ್) ಸಭಾಂಗಣದಲ್ಲಿ ಸೋಮವಾರ ಆಯೋಜಿಸಿದ್ದ 65ನೆಯ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆವಹಿಸಿ ಅವರು ಮಾತನಾಡಿದರು.2024–25ನೆಯ ಸಾಲಿನಲ್ಲಿ ಕೃಷಿಯಾಂತ್ರೀಕರಣ, ಭೂ ಅಭಿವೃದ್ಧಿ ಮತ್ತು ಬೇಲಿ, ಕುರಿ, ಹೈನುಗಾರಿಕೆ ಮತ್ತು ತೋಟಗಾರಿಕೆ ಯೋಜನೆಯಡಿ ಸುಮಾರು 2 ಕೋಟಿ ರೂ ಸಾಲ ನೀಡಿದ್ದು, ಶೇ.55.56ರಷ್ಟು ಸಾಲ ವಸೂಲಾತಿ ಆಗಿದೆ ಎಂದರು. ಸುಸ್ತಿ ಸಾಲವನ್ನು ಮರುಪಾವತಿಸಿದ ರೈತರು ಶೇ.3ರ ಬಡ್ಡಿ ದರದಲ್ಲಿ ಸಾಲ ಪಡೆಯಬಹುದು. ನಿಗದಿತ ಸಮಯದಲ್ಲಿ ಸಾಲ ಪಾವತಿಸಿದರೆ ಸರಕಾರದ ಬಡ್ಡಿ ರಿಯಾಯಿತಿ ಸೌಲಭ್ಯ ಪಡೆಯಲು ಸಾಧ್ಯವಿದೆ. ಮುಂದಿನ ದಿನಗಳಲ್ಲಿ ಶೇ.80–90 ರಷ್ಟು ಸಾಲ ವಸೂಲಾತಿ ಗುರಿ ಹಾಕಿಕೊಳ್ಳಲಾಗಿದ್ದು, ಸಾಲ ಪಡೆದ ರೈತರು ಸಕಾಲಕ್ಕೆ ಸಾಲ ಪಾವತಿಸಿ ಬ್ಯಾಂಕ್‌ನ ಪ್ರಗತಿಗೆ ಸಹಕರಿಸಬೇಕು ಎಂದು ತಿಳಿಸಿದರು. ವ್ಯವಸ್ಥಾಪಕ ರಾಮಯ್ಯ ಹಿರೇಮಠ ವಾರ್ಷಿಕ ವರದಿ ಮಂಡಿಸಿದರು. ಈ ಸಂದರ್ಭದಲ್ಲಿ ಬ್ಯಾಂಕ್‌ನ ಉಪಾಧ್ಯಕ್ಷ ಸೋಮನಾಥಪ್ಪ ಅಷ್ಟೂರೆ, ನಿರ್ದೇಶಕರಾದ ಚಂದ್ರಶೇಖರ ವಂಕೆ, ಕಾಶಿನಾಥ ಲದ್ದೆ, ಎಸ್.ಡಿ.ಬಗದೂರೆ, ರಾಜೇಂದ್ರ ಪಾಟೀಲ್, ಶಿವರಾಜ ಜೆಟರಾಮ, ರಾಜಶೇಖರ ಪಾಟೀಲ್, ವೈಜಿನಾಥ ವಡ್ಡೆ, ಪಾಶಾಮಿಯಾ ಮಸಕಸಾಬ್, ಯುವರಾಜ ಪಾಟೀಲ್, ಗಂಗಾಸಾಗರ ಆಣದೂರೆ, ಸುಮನಬಾಯಿ ನೆಲವಾಡೆ, ಬಬಿತಾ ರಾಜೇಂದ್ರ ಸೇರಿದಂತೆ ಸಿಬ್ಬಂದಿಗಳಾದ ಸುನಿತಾ ಬ್ರಹ್ಮಾಪುರೆ, ಪರಮಾನಂದ ಹಣಮಶೆಟ್ಟಿ, ಮಹೇಶ ಗೋಬರೆ, ಶೋಭಾ ಪಾಟೀಲ್ ಹಾಜರಿದ್ದರು.

# ಗುರುಕೃಪೆಯಿಂದ ಸಮಾಜದಲ್ಲಿ ಉನ್ನತ ಸ್ಥಾನ ಸಾಧ್ಯ:ಹೂಗಾರ



ಮಲ್ಲಮ್ಮ ನುಡಿ ವಾರ್ತೆ

ಕಮಲನಗರ:ಸೆ.16:ಜೀವನದಲ್ಲಿ ಗುರಿ, ಛಲ, ಗುರುವಿನ ಆಶೀರ್ವಾದ ಇದ್ದರೆ ಮಾತ್ರವೇ ವಿದ್ಯೆ ಕಲಿತು ಸಮಾಜದಲ್ಲಿ ಉನ್ನತ ಸ್ಥಾನಗಳಿಸಲು ಸಾಧ್ಯ ಎಂದು ನಿವೃತ್ತ ಶಿಕ್ಷಕ ಎಸ್. ಎಸ್.ಹೂಗಾರ ಹೇಳಿದರು.

ಪಟ್ಟಣದ ತೇಲಂಗ್ ಕಲ್ಯಾಣ ಮಂಟಪದಲ್ಲಿ ಶಾಂತಿ ವರ್ಧಕ ಪ್ರೌಢ ಶಾಲೆಯ ಹಳೆಯ ವಿದ್ಯಾರ್ಥಿಗಳ ವತಿಯಿಂದ ಶನಿವಾರ ಹಮ್ಮಿಕೊಂಡಿದ್ದ ಗುರುವಂದನೆ ಮತ್ತು ಸ್ನೇಹ ಸಮ್ಮಿಲನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 1980ನೇ ಸಾಲಿನ ವಿದ್ಯಾರ್ಥಿಗಳು ಒಟ್ಟಾಗಿ ಸೇರಿ ಅಂದಿನಿಂದ ಇಲ್ಲಿಯವರೆಗೂ ಸೇವೆ ಸಲ್ಲಿಸಿದ ಗುರುಗಳಿಗೆ ಅಭಿನಂದನೆ ಸಲ್ಲಿಸುವ ಮೂಲಕ ವಿದ್ಯಾರ್ಥಿ ಜೀವನದ ನೂರಾರು ನೆನಪುಗಳು ಕಣ್ಣು ಮುಂದೆ ಬರುವಂತೆ ಮಾಡಿದೆ ಎಂದರು.

ನಿವೃತ್ತ ದೈಹಿಕ ಶಿಕ್ಷಕ ಪ್ರಕಾಶ ಮಾನಕರಿ ಮಾತನಾಡಿ, ನಾವು ಇಂದು ಏನಾದರೂ ಗಳಿಸಿದ್ದರೆ ಅದೆಲ್ಲವೂ ಈ ಸಮಾಜದಿಂದ ಗಳಿಸಿದ್ದೇವೆ. ಹಾಗಾಗಿ ಈ ಸಮಾಜದಿಂದ ಪಡೆದದ್ದನ್ನು ನಾವು ಮತ್ತೆ ಸಮಾಜಕ್ಕೆ ವಾಪಸ್ ನೀಡಬೇಕಾಗುತ್ತದೆ. ಆ ಮೂಲಕ ಅಕ್ಷರ ಕಲಿಸಿದ ಗುರುಗಳು, ಜನ್ಮ ಕೊಟ್ಟ ಹೆತ್ತವರು, ಆಡಿ ಬೆಳೆದ ಭೂಮಿಯ ಋಣವನ್ನು ತೀರಿಸಲೇಬೇಕು. ಸುಮಾರು 45 ವರ್ಷ ನಂತರವೂ ವಿದ್ಯೆ ಕಲಿಸಿದ ಗುರುವಿನ ಮಹತ್ವ ಅರಿತು, ಅವರಿಗೆ ವಂದಿಸುವ ಕಾರ್ಯ ಮಾದರಿಯಾಗಿದೆ ಎಂದರು.

ಹಳೆಯ ವಿದ್ಯಾರ್ಥಿ ನಿಜಲಿಂಗಪ್ಪಾ ಮಹಾಜನ ಮಾತನಾಡಿ, ಉದ್ಯೋಗ ಇನ್ನಿತರೆ ಕಾರಣಗಳಿಗಾಗಿ ಹುಟ್ಟಿದ ಊರು ಬಿಟ್ಟು ಬೇರೆಲ್ಲೋ ನೆಲೆಸಿದವರು ತಮ್ಮ ದಿನನಿತ್ಯದ ಒತ್ತಡ ಜೀವನದಲ್ಲಿ ಹುಟ್ಟಿದ ಊರು, ಹೆತ್ತವರು, ಅಕ್ಷರ ಕಲಿಸಿದ ಗುರುಗಳನ್ನು ನೆನೆಸಿಕೊಳ್ಳಲಾಗದ ಸ್ಥಿತಿಗೆ ತಲುಪಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಹಿರಿಯ ವಿದ್ಯಾರ್ಥಿಗಳೆಲ್ಲರನ್ನೂ ಒಟ್ಟುಗೂಡಿಸುವ, ತಮ್ಮ ಹಳೆಯ ದಿನಗಳನ್ನು ಮೆಲಕು ಹಾಕುವಂತಹ ಸುಂದರ ಕ್ಷಣಗಳಿಗೆ ಈ ಕಾರ್ಯಕ್ರಮ ಸಾಕ್ಷಿಯಾಗಿದೆ ಎಂದರು.

ಈ ವೇಳೆ ಶಿಕ್ಷಕರಿಗೆ ಗೌರವಪೂರ್ವಕ ಸನ್ಮಾನ ಮಾಡಲಾಯಿತು. ಜತೆಗೆ ಅಗಲಿದ ಗುರುಗಳು ಹಾಗೂ ಗೆಳೆಯರ ಸ್ಮರಣಾರ್ಥ ಎರಡು ನಿಮಿಷ ಮೌನಾಚರಣೆ ಮಾಡಲಾಯಿತು.

ಬಸವರಾಜ್

ತೆಲಂಗ್, ಜ್ಞಾನೇಶ್ವರ ಕೊಣಗುತ್ತೆ, ರವಿ ಜೋಳೆ, ಪಂಡಿತ್ ಬಾಳೂರೆ, ನಾಗನಾಥ ಝುಲ್ಪೆ, ಮನೋಹರ ನವಾಡೆ, ಬಾಬುರಾವ್, ಎಸ್.ಎಸ್. ದ್ವಾಸೆ, ಭಾಡಸಿಂಗೆ, ಬಸವರಾಜ ಘಾಟೆ ಇತರರಿದ್ದರು.

# ಸಿಆರ್‌ಪಿ, ಬಿಆರ್‌ಪಿಗಳಿಗೆ ಹಿಮ್ಮುಖ ವರ್ಗಾವಣೆಗಾಗಿ ಮನವಿ



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಸೆ.16: 5 ವರ್ಷ ಪೂರೈಸಿದ ಸಿ.ಆರ್.ಪಿ ಮತ್ತು ಬಿ.ಆರ್.ಪಿಗಳಿಗೆ ಹಿಮ್ಮುಖ ವರ್ಗಾವಣೆಯಲ್ಲಿ ಅನುಕೂಲ ಮಾಡಿಕೊಡಬೇಕು ಎಂದು ಕರ್ನಾಟಕ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪದಾಧಿಕಾರಿಗಳು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆಯವರಿಗೆ ಮನವಿ ಸಲ್ಲಿಸಿದರು.

ಬೆಂಗಳೂರಿನ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಹಾಗು ಬೀದರ ಜಿಲ್ಲಾ ಉಸ್ತುವಾರಿ ಸಚಿವರ ನಿವಾಸದಲ್ಲಿ ಮಂಗಳವಾರ ಮನವಿ ನೀಡಿದ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪದಾಧಿಕಾರಿಗಳು, ಬೀದರ ಜಿಲ್ಲೆಯ ಸಿಆರ್‌ಪಿ ಮತ್ತು ಬಿಆರ್‌ಪಿಗಳು 5 ವರ್ಷಗಳ ಕಾಲ ಇಲಾಖೆಗೆ ಅವಿರತವಾಗಿ ಕರ್ತವ್ಯ ನಿರ್ವಹಿಸಿ ಇಲಾಖೆ ಶೈಕ್ಷಣಿಕ ಕಾರ್ಯಕ್ರಮಗಳನ್ನು ಕ್ಲಸ್ಟರ್ ಹಂತದಿಂದ ತಾಲೂಕು ಮತ್ತು ಜಿಲ್ಲಾ ಹಂತದವರೆಗೆ ಅನುಷ್ಠಾನಗೊಳಿಸುವಲ್ಲಿ ಇಲಾಖೆಗೆ ಪ್ರಾಮಣಿಕವಾಗಿ ಸೇವೆ ಸಲ್ಲಿಸಿ ಇಲಾಖೆಯ ಘನತೆ ಗೌರವವನ್ನು ಎತ್ತಿಹಿಡಿದ್ದಾರೆ. ಈಗಾಗಲೇ ಇಲಾಖೆಯಿಂದ ಸಿಆರ್‌ಪಿ ಮತ್ತು ಬಿಆರ್‌ಪಿ ಹುದ್ದಿಎಗಳಿಗಾಗಿ ಪರೀಕ್ಷೆ ನಡೆದಿದ್ದು, ನಮ್ಮ ಜಿಲ್ಲೆಯಲ್ಲಿ 32 ಹುದ್ದೆಗಳು ಹಿಮ್ಮುಖವಾಗುತ್ತಿವೆ. ಕಾರಣ ಬರುವ ಕೌನ್ಸಿಂಗನಲ್ಲಿ, 25 ಕ್ಕಿಂತ ದಾಖಲಾತಿ ಕಡಿಮೆ ಇರುವ ಕಿರಿಯ ಹಾಗು ಹಿರಿಯ ಪ್ರಾಥಮಿಕ ಶಾಲೆಯ್ಲಲಿ ಖಾಲಿ ಇರುವ ಹುದ್ದೆಗಳನ್ನು ಕೌನ್ಸಲಿಂಗ್‌ನಲ್ಲಿ ತೋರಿಸಬೇಕು. ಅಗಷ್ಟ ಮತ್ತು ಸೆಪ್ಟೆಂಬರ್ ತಿಂಗಳಲ್ಲಿ ನಿವೃತ್ತರಾದ ಶಿಕ್ಷಕರ ಖಾಲಿ ಹುದ್ದೆಗಳನ್ನು ಕೌನ್ಸಿಂಗ್‌ನಲ್ಲಿ ತೋರಿಸಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ

ಪ್ರಮುಖರಾದ ಮಲ್ಲಿಕಾರ್ಜುನ ಹಲಮಂಡಗೆ, ಪ್ರಾಥಮಿಕ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ

ರವೀಂದ್ರ ರೆಡ್ಡಿ, ಕಾರ್ಯದರ್ಶಿ ಪ್ರಭು ತೂಗಾಂಗೆ,

ಸಂತೋಷ ಸ್ವಾಮಿ, ಶರಣಪ್ಪ ಕಣಜೆ, ಬಾಬುರಾವ ಬಿರಾದಾರ ಸೇರಿದಂತೆ ಜಿಲ್ಲೆಯ ಎಲ್ಲಾ ಸಿಆರ್‌ಪಿ ಮತ್ತು ಬಿಆರ್‌ಪಿಗಳಿಗಳಿದ್ದರು.

# ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿದ ಎಜೆನ್ಸಿಯನ್ನು ಕಪ್ಪು ಪಟ್ಟಿಗೆ ಸೇರಿಸಿ: ದಯಾನಂದ ನೌಲೆ



ಬೀದರ. ಸೆ. 16 : ಸಮಾಜ ಕಲ್ಯಾಣ ಇಲಾಖೆಯಿಂದ ಹಾಸ್ಟೆಲ್‌ಗಳಿಗೆ ಆಹಾರ ಸರಬರಾಜು ಮಾಡುತ್ತಿದ್ದ ಮೇ:ಬಸವೇಶ್ವರ ಎಂಟರ್‌ಪ್ರೈಸೆಸ್‌ನ್ನು ಕಪ್ಪು ಪಟ್ಟಿಗೆ ಸೇರಿಸಬೇಕೆಂದು ದಲಿತ ಮುಖಂಡರಾದ ದಯಾನಂದ ನೌಲೆ ಒತ್ತಾಯಿಸಿದರು.

ಮಂಗಳವಾರ ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು, ಇತ್ತೀಚೆಗೆ ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಚಾಲಕ ಬಾಬುರಾವ ಪಾಸ್ವಾನ್ ಅವರು ಮೆ.ಬಸವೇಶ್ವರ್ ಎಂಟರ್ ಪ್ರೈಸೆಸ್ ಅವರ ಪರ ಸುದ್ದಿಗೋಷ್ಠಿ ನಡೆಸಿ, ಈ ಎಜೆನ್ಸಿ ಅವರು ಯಾವುದೇ ಭ್ರಷ್ಟಾಚಾರ ಮಾಡಿಲ್ಲ ಎಂದು ಹೇಳಿರುವುದು ನಾಚಿಕೆಗೇಡಿನ ಸಂಗತಿ ಎಂದರು.

ಮೆ.ಬಸವೇಶ್ವರ ಎಂಟರ್‌ಪ್ರೆಸೆಸ್‌ವು 2021–22 ನೇ ಸಾಲಿನಲ್ಲಿ ಟೆಂಡರ್ ಅನುಮೋದಿತ ದರಗಳಿಗಿಂತ, ಬಿಲ್ಲಿನಲ್ಲಿ ಹೆಚ್ಚಿನ ದರ ನಮೂದಿಸಿ ರೂ.13,81,383/–ರೂಗಳನ್ನು ಲೂಟಿ ಮಾಡಿ ಸರ್ಕಾರದ ಬೊಕ್ಕಸಕ್ಕೆ ನಷ್ಟವನ್ನುಂಟು ಮಾಡಿರುವುದು ಸಾಬಿತಾಗಿರುವುದು, ಅವರಿಂದ ಸರ್ಕಾರ ಹಣ ವಸೂಲಿ ಮಾಡದೇ, ಮತ್ತು ಆ ಸಂಸ್ಥೆಯನ್ನು ಕಪ್ಪು ಪಟ್ಟಿಗೆ ಸೇರಿಸದೆ ಇರುವುದು ವಿಪರ್ಯಾಸ ಎಂದರು.

ದಿ:27–02–2023 ರಂದು ಜಿಲ್ಲಾ ಅಧಿಕಾರಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಬೀದರ ರವರು, ಜಿಲ್ಲಾಧಿಕಾರಿಗಳು ಬೀದರ ರವರಿಗೆ ಬರೆದ ಪತ್ರದಲ್ಲಿ, ಟೆಂಡರ್‌ನಲ್ಲಿ ನಮೂದಿಸಿದ ದರಗಳಿಗಿಂತ ಹೆಚ್ಚಿನ ದರ ಹಾಕಿ ಬಿಲ್ಲು ಪಾವತಿಸಲಾಗಿರುತ್ತದೆ. ಪತ್ರಾಂಕಿತ ವ್ಯವಸ್ಥಾಪಕಿ ನಾಗಮಣಿ ಅವರು ದಿ:12–12–2022 ರಂದು ವರದಿ ಸಲ್ಲಿಸಿರುತ್ತಾರೆ. ದಿನಾಂಕ: 08–01–2024 ರಂದು ಜಿಲ್ಲಾ ಅಧಿಕಾರಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಬೀದರ ರವರು ತಾಲೂಕಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಬೀದರ ರವರಿಗೆ ಪತ್ರ ಬರೆದು ರೂ.13,81,383/–ಗಳನ್ನು ಸರ್ಕಾರಕ್ಕೆ ಜಮಾ ಮಾಡಿ ಬಿಲ್ಲನ್ನು ಸಲ್ಲಿಸಲು ಸೂಚಿಸಿರುತ್ತಾರೆ. ದಿನಾಂಕ: 09–01–2024 ರಂದು ಜಿಲ್ಲಾ ಅಧಿಕಾರಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಬೀದರ ರವರು ಆಯುಕ್ತರು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಬೆಂಗಳೂರು ರವರಿಗೆ ಪತ್ರ ಬರೆದು ಮೇ: ಬಸವೇಶ್ವರ ಎಂಟರ್ ಪ್ರೆಸಸ್ ಬೀದರ ಇವರಿಗೆ ಕಪ್ಪು ಪಟ್ಟಿಗೆ ಸೇರಿಸುವ ಕುರಿತು ಸೂಕ್ತ ಮಾರ್ಗದರ್ಶನ ನೀಡಲು ಕೋರಲಾಗಿದೆ. ದಿನಾಂಕ: 02–02–2024 ಮತ್ತು ದಿನಾಂಕ: 22–02–2024 ಪತ್ರಗಳಲ್ಲಿ ಆಯುಕ್ತರು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಬೆಂಗಳೂರು ರವರು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಕಲ್ಯಾಣಾಧಿಕಾರಿಗಳು ಬೀದರ ರವರಿಗೆ ಪತ್ರ ಬರೆದು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳೇ ಆಹಾರ ಸಾಮಗ್ರಿಗಳ ಸರಬರಾಜಿಗೆ ಟೆಂಡರ್ ಅನುಮೋದಿಸುವ ಪ್ರಾಧಿಕಾರಿಗಳಾಗಿರುವುದರಿಂದ ಮೇ: ಬಸವೇಶ್ವರ ಎಂಟರ್ ಪ್ರೈಸಸ್ ಬೀದರ ಈ ಸಂಸ್ಥೆಯನ್ನು ಕಪ್ಪು ಪಟ್ಟಿಗೆ ಸೇರಿಸಲು ಜಿಲ್ಲಾಧಿಕಾರಿಗಳು ಬೀದರ ಇವರ ಹಂತದಲ್ಲಿಯೇ ನಿಯಮಾನುಸಾರ ಕ್ರಮ ವಹಿಸಲು ಸೂಚಿಸಿರುತ್ತಾರೆ.

# 78ನೇ ಹೈದರಾಬಾದ ಕರ್ನಾಟಕ ವಿಮೋಚನಾ ಚಳುವಳಿ

# ಮರೆಯದಿರಿ ಹೋರಾಟಗಾರರ "ತ್ಯಾಗ ಬಲಿದಾನ"

ಭಾರತ ದೇಶವು ಹಲವು ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ ಬಲಿದಾನದ ಪರಿಣಾಮವಾಗಿ ಬ್ರಿಟಿಷರ ದಾಸ್ಯದಿಂದ ಅವರ ದಬ್ಬಾಳಿಕೆಯಿಂದ ಸುಮಾರು ಎರಡು ನೂರು ವರ್ಷಗಳಿಗಿಂತ ಹೆಚ್ಚು ಕಾಲ ಆಳ್ವಿಕೆ ನಡೆಸಿದವರಿಂದ ಮುಕ್ತಿ ಸ್ವಾತಂತ್ರ್ಯವನ್ನು 1947ರ ಅಗಸ್ಟ್ 15ರಂದು ಪಡೆದೆವು. ಇಂಗ್ಲೆಂಡ್ದ ಪ್ರಧಾನಿ ಲಾರ್ಡ ಅಟ್ಲೀ ಮತ್ತು ಭಾರತದ ವೈಸರಾಯ ಮೌಂಟ್ ಬ್ಯಾಟನ್ ಯೋಜನೆಯಂತೆ 1947ರ ಆಗಸ್ಟ್ 15ರಂದು ಭಾರತಕ್ಕೆ ಸ್ವತಂತ್ರ ಘೋಷಿಸಿದರು. ಅಂದು ಅಸ್ತಿತ್ವದಲ್ಲಿದ್ದ, 562 ಸಂಸ್ಥಾನಗಳಲ್ಲಿ ಕಾಶ್ಮೀರ ಜುನಾಗಡ ಮತ್ತು ಹೈದರಾಬಾದ್ ಹೊರತುಪಡಿಸಿ ಉಳಿದೆಲ್ಲ ಸಂಸ್ಥಾನಗಳು ಅತೀವ ಸಂತೋಷದಿಂದ ಮತ್ತು ಉಲ್ಲಾಸದಿಂದ ಸ್ವತಂತ್ರ ಭಾರತದ ಸಂಸ್ಥಾನದಲ್ಲಿ ಸೇರ್ಪಡೆಗೊಂಡವು. ಕಾಶ್ಮೀರ ಜುನಾಗಡವು ಕೂಡ ಹಲವು ಪ್ರಯತ್ನಗಳ ನಂತರ ಭಾರತದ ಒಕ್ಕೂಟಕ್ಕೆ ಸೇರಿಕೊಂಡವು ಆದರೆ ಹೈದರಾಬಾದ್ ಸಂಸ್ಥಾನದ ನಿಜಾಮನು ಮಾತ್ರ ಭಾರತದ ಒಕ್ಕೂಟಕ್ಕೆ ಸೇರಿದೆ ತನ್ನದೇ ಸ್ವತಂತ್ರ ರಾಷ್ಟ್ರ ಸ್ಥಾಪಿಸುವ ಬಯಕೆಯನ್ನು ಹೊಂದಿದ್ದನು.

ಇಂದಿನ ಕಲ್ಯಾಣ ಕರ್ನಾಟಕ ಪ್ರದೇಶದ ಬೀದರ್ ಕಲ್ಬುರ್ಗಿ ಯಾದಗಿರಿ ರಾಯಚೂರ್ ಕೊಪ್ಪಳ ಬಳ್ಳಾರಿ ವಿಜಯನಗರ ಜಿಲ್ಲಾ ಪ್ರದೇಶಗಳನ್ನು ಒಳಗೊಂಡ ಭಾಗವು ನಿಜಾಂ ರಾಜ್ಯದ ಹೈದರಾಬಾದ್ ಕರ್ನಾಟಕ ಪ್ರದೇಶವಾಗಿತ್ತು. ಈ ಹೈದರಾಬಾದ್ ನಿಜಾಮ ಸಂಸ್ಥಾನವನ್ನು ಭಾರತದ ಒಕ್ಕೂಟದಲ್ಲಿ ವಿಲೀನಗೊಳಿಸಲು ನಡೆದಿರುವ ಬಹುದೊಡ್ಡ ಹೋರಾಟವೇ ಹೈದರಾಬಾದ ಕರ್ನಾಟಕದ ವಿಮೋಚನಾ ಚಳುವಳಿಯಾಗಿದೆ. ಈ ಚಳುವಳಿಯ ಇತಿಹಾಸವನ್ನು ತಿಳಿದುಕೊಳ್ಳುವುದು ಪ್ರತಿಯೊಬ್ಬ ಕಲ್ಯಾಣ ಕರ್ನಾಟಕದ ಪ್ರಜೆಗೆ ಅತಿ ಅವಶ್ಯಕವಾಗಿದೆ ಈ ಹೋರಾಟದ ಹಾದಿಯನ್ನು ತಿಳಿಸುವ ಒಂದು ಸಣ್ಣ ಪ್ರಯತ್ನ ಅಷ್ಟೆ .

15ನೇ ಆಗಸ್ಟ್ 1947 ರಂದು ಇಡೀ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕರು ನಮ್ಮ ಭಾಗದ ಜನರಿಗೆ ಮಾತ್ರ ಸ್ವಾತಂತ್ರ್ಯದ ಸವಿಯನ್ನು ಸವಿಯಲು ಆಗಲಿಲ್ಲ .ಇದು ದುರಂತವೇ ಸರಿ ಆ ಸ್ವಾತಂತ್ರ್ಯದ ಸವಿಯನ್ನು ಸವಿಯಲು ಇನ್ನೊಂದು ವರ್ಷ ಕಾಯಬೇಕಾಯಿತು ಮೇಲಾಗಿ ಮತ್ತೆ ಸ್ವಾತಂತ್ರ್ಯದ ಹೋರಾಟವನ್ನು ಮಾಡಿ ಪಡೆಯಲೇ ಬೇಕಾಯಿತು.

ಸಂಕ್ಷಿಪ್ತ ಇತಿಹಾಸ: ನಿಜಾಮ ಉಲ್ ಮುಲ್ಕ್ ಆಸಿಫ ಜಹಾನ ಎಂಬುವವನು ಹೈದರಾಬಾದ್ ಸಂಸ್ಥಾನದ ಸ್ಥಾಪಕ 1724 ರಿಂದ 1948 ರವರೆಗೆ ಹೈದ್ರಾಬಾದ್ ಸಂಸ್ಥಾನವನ್ನು ಏಳು ಜನ ನಿಜಾಮರು ಆಳಿದರು. 7ನೇ ಹಾಗು ಕೊನೆಯ ನಿಜಾಮ್ ಮೀರ ಉಸ್ಮಾನ್ ಅಲಿಖಾನ್ ರಜಾಕಾರರ ಕೈಗೊಂಬೆಯಾಗಿ ಪ್ರಜೆಗಳ ಮೇಲೆ ಬ್ರಿಟಿಷರಂತೆ ದಬ್ಬಾಳಿಕೆ ಹಾಗು ದೌರ್ಜನ್ಯ ನಡೆಸತೊಡಗಿದನು.

ಹೈದರಾಬಾದ್ ನಿಜಾಂ ರಾಜ್ಯದಲ್ಲಿ ಮೂರು ಭಾಷೆಯ ಪ್ರದೇಶಗಳಿದ್ದವು ಕನ್ನಡ ತೆಲುಗು ಹಾಗೂ ಮರಾಠಿ ಅಂದರೆ ಈಗಿನ ಕರ್ನಾಟಕ ರಾಜ್ಯದ. ಹೈದರಾಬಾದ್ ಕರ್ನಾಟಕ (ಕಲ್ಯಾಣ ಕರ್ನಾಟಕ) ಪ್ರದೇಶ ಈಗಿನ ತೆಲಂಗಾಣ ಹಾಗೂ ಮಹಾರಾಷ್ಟ್ರದ ಮರಾಠವಾಡ ಈ ಪ್ರದೇಶದಲ್ಲಿ ಅತಿ ಹೆಚ್ಚು ಹಿಂದುಗಳೇ ಇದ್ದರೂ. ರಾಜ್ಯದಲ್ಲಿ ಎಲ್ಲಾ ಉನ್ನತ ಹುದ್ದೆಗಳು ಮುಸ್ಲಿಮರಿಗಾಗಿ ಮೀಸಲಿದ್ದವು ಉರ್ದು ಕಲಿಯುವುದು ಕಡ್ಡಾಯವಾಗಿತ್ತು ಅಷ್ಟೇ ಅಲ್ಲದೆ ಕನ್ನಡ ಕಲಿಯಲು ಅನುಮತಿ ಇರಲಿಲ್ಲ. ಸನಾತನ ಧರ್ಮ ಸಂಸ್ಕೃತಿ ಕಲೆ ಸಾಹಿತ್ಯ ಸಂಪೂರ್ಣವಾಗಿ ನಿರ್ಲಕ್ಷ-ಕ್ಕೆ ಒಳಪಟ್ಟಿತ್ತು ಜನರ ದೈನಂದಿನ ಜೀವನವು ತುಂಬಾ ಕಷ್ಟದಿಂದ ಕೂಡಿತ್ತು.

. ಆದರೆ ಅಡ್ಡ ಗೋಡೆಯ ಮೇಲೆ ದೀಪವಿತ್ತಂತೆ ಬ್ರಿಟಿಷರು ರೂಪಿಸಿದ 1947 ಜುಲೈ 18 ರ ಭಾರತದ ಸ್ವಾತ್ರತ್ಯ ಕಾಯಿದೆ ಪ್ರಕಾರ ಬ್ರಿಟಿಷ ಮನಸ್ಥಿತಿಯ ನಿಜಾಮ್ ನು ಸ್ವತ್ರಔತ್ರ ಭಾರತದಲ್ಲಿ ವಿಲೀನಗೊಳ್ಳಲು ಒಪ್ಪದೇ ಸ್ವತ್ರಔತ್ರವಾಗಿರಲು ನಿರ್ಧರಿಸಿ , ನಿಜಾಮ್ ರಾಜ್ಯದಲ್ಲಿ ಸ್ವಾತ್ರಔತ್ರ ಹೋರಾಟಗಾರರಿಗೆ ಸ್ವತ್ರಔತ್ರ ಭಾರತದ ತ್ರಿವರ್ಣ ಧ್ವಜ ಹಾರಿಸಲು ,ವಂದೇ ಮಾತರಂ ಗೀತೆ ಹಾಡಲು ಮತ್ತು ಭಾರತ ಮಾತಾ ಕಿ ಜೈ ಘೋಷಣೆ ಕೂಗಲು ನಿಷೇದಿಸಿದನು .

ಹೈದರಾಬಾದ್ ನಿಜಾಮರ ಸಂಸ್ಥಾನದಲ್ಲಿ ರಜಾಕಾರರ ನಾಯಕ ಖಾಸಿಂ ರಜ್ವಿಯ ನೇತೃತ್ವದ ಪಡೆ-ಯು ದಿನದಿಂದ ದಿನಕ್ಕೆ ರಜಾ-ಕಾರರ ಮೂಲಕ ಕ್ರೌರ್ಯಗಳು ಹೆಚ್ಚಾದಂತೆ ಹೋದವು ಅದರಲ್ಲಿ ಬಹು ಮುಖ್ಯವಾಗಿ ಮಹಿಳೆಯರ ಮಾನಭಂಗ, ಲೂಟಿ ಮುಗ್ಧರ ಕೊಲೆ ,ಸ್ವತಂತ್ರ ಹೋರಾಟಗಾರರನ್ನು ಹಿಂಸಿಸುವುದು, ಅಲ್ಲದೆ ಹಿಂದುಗಳು ಬಳಸುವ ನೀರಿನ ಬಾವಿಗಳಲ್ಲಿ ಸಗಣಿ ಮತ್ತು ಮೂಳೆಗಳನ್ನು ಹಾಕುವುದು ಹಿಂದುಗಳ ಬೆಳೆಗಳನ್ನು ಲೂಟಿ ಮಾಡುವುದು ಸಂಪತ್ತನ್ನು ಕೊಳ್ಳೆ ಹೊಡೆಯುವುದು ಚಿಕ್ಕಮಕ್ಕಳ ಶಿರವನ್ನು ಖಡ್ಗಗಳ ತುದಿಗೆ ಸಿಕ್ಕಿಸಿಕೊಂಡು ರಾಕ್ಷಸರಂತೆ ಮೆರೆದಾಡುತ್ತ ಗಾಳಿಯಲ್ಲಿ ಗುಂಡು ಹಾರಿಸುತ್ತಾ ಜನರಲ್ಲಿ ಭಯ ಹುಟ್ಟಿಸಿದರು. ಅದಲ್ಲದೆ ದೇವಾಲಯಗಳನೆಲ್ಲ ನೆಲೆಸಮಗೊಳಿಸುವ ಪ್ರಯತ್ನವನ್ನು ಮಾಡಿದರು ಅದರಲ್ಲೂ ಬಹು ಮುಖ್ಯವಾಗಿ ಬೀದರನಲ್ಲಿ ಒಂದು ಗಂಜಿಗೆ ಬೆಂಕಿಯನ್ನು ಹಚ್ಚಿದರು, ವಿಷ ಕೊಟ್ಟು ಜೈಲಿನಲ್ಲಿ ಬಾಯಿ ಶಾಮಲಾಲ್ ಅವರ ಕೊಲೆಯನ್ನು ಕೂಡ ಮಾಡಲಾಯಿತು ,ಅದರ ಜೊತೆಗೆ ಬಸವಕಲ್ಯಾಣ ಮತ್ತು ಹುಮನಾಬಾದಗಳಲ್ಲಿ ಅನೇಕ ಬಲಿಯನ್ನು ಪಡೆದರು

ಖಾಸಿಂ ರಜ್ವಿಯ ಭಾಷಣ: ಖಬರದಾರ್ ಭಾರತದ ಪರವಾಗಿ ಮಾತನಾಡುವವರು ಹಿಂದುಗಳಿರಲಿ ಮುಸ್ಲಿಮರಲ್ಲಿ ಅವರೆಲ್ಲದೇಶದ್ರೋಹಿಗಳು ಅವರ ಕತ್ತು ಕಡಿರಿ, ಮನೆಗಳನ್ನು ಲೂಟಿ ಮಾಡಿ ಬೆಂಕಿಯಿಡಿ, ಇದನ್ನೆಲ್ಲಾ ಎಷ್ಟು ಕ್ರೂರವಾಗಿ ಮಾಡಬೇಕೆಂದರೆ ಇಲ್ಲಿ ನೂರಾರು ವರ್ಷಗಳ ನಂತರ ಹುಟ್ಟುವ ಮಗು ಕೂಡ ಭಾರತದ ಹೆಸರೆತ್ತಲು ಹೆದರಬೇಕು, ಇದು ರಜಾಕಾರರ ಸರ್ವೋಚ್ಛ ನಾಯಕ ಖಾಸಿಂ ರಜ್ವಿ ಹೇಳುತ್ತಿದ್ದ ಮಾತು .ಏಳು ದಶಕಗಳ ಹಿಂದೆ ಹೈದರಾಬಾದ್ ನಿಜಾಂ ಸಂಸ್ಥಾನದ ಹಳ್ಳಿ ಹಳ್ಳಿಗಳಲ್ಲಿ ರಜಾಕಾರರು ನಡೆಸಿದ ಲೂಟಿ ಹಿಂಸಾಚಾರ ಕೊಲೆ ಅತ್ಯಾಚಾರಗಳಿಂದ ಕಂಗೆಟ್ಟ ಜನರಿಗೆ ಸಾಂತ್ವನ ಹೇಳಲು ಏರ್ಪಡಿಸಲಾದ ಶಾಂತಿ ಸಭೆಗಳಲ್ಲಿಯೇ ಭಾಷಣ ಮಾಡುತ್ತಿದ್ದ ರೀತಿ ಇದು ಅವನ ದರ್ಪಿಷ್ಟ ಆಳ್ವಿಕೆಗೆ ಸಾಕ್ಷಿಯಾಗಿತ್ತು.

ಗೋರ್ಟಾ ಹತ್ಯಾಕಾಂಡ: ಕರ್ನಾಟಕದ ಜಲಿಯನ್ ವಾಲಾಬಾಗ್. ಗೋರ್ಟಾದ ಮೇಲೆ ರಜಾಕಾರರು 9ನೇ ಮೇ 1948 ರಂದು ದಾಳಿಯನ್ನು ಮಾಡಿದರು ಆ ಊರಿನಲ್ಲಿ ಮಹದೇವಪ್ಪ ಡುಮಣೆ ಅವರ ಮನೆಯಲ್ಲಿ ಸುಮಾರು 800 ಜನ ವಿಮೋಚನಾ ಚಳುವಳಿಯ ಜನರು ಆಶ್ರಯವನ್ನು ಪಡೆದಿದ್ದರು ಎಂದು ತಿಳಿದು ಬರುತ್ತದೆ. ಆ ದಿನ ಮುಂಜಾನೆ ಎಂಟು ಗಂಟೆಗೆ ಸುಮಾರು ಎರಡು ನೂರು ಜನ ರಜಾಕಾರರು ಗೋರ್ಟಾದ ಮೇಲೆ ದಾಳಿಯನ್ನು ಮಾಡಿದರು. ರಜಾ-ಕಾರರು ಒಂದೊಂದು ಮನೆಗೆ ನುಗ್ಗಿ ಕೈಗೆ ಸಿಕ್ಕಿದನೆಲ್ಲವನ್ನ ಲೂಟಿಯನ್ನು ಮಾಡುವುದು ಗಂಡಸರನ್ನು ಎಳೆದು ಹೊರಗೆ ತರುವುದು ಹೆಂಗಸರೇನಾದರೂ ಅಡ್ಡಿಪಡಿಸಿದರೆ ಅವರನ್ನು ಎಳೆದು ತರುವುದು ಆಮೇಲೆ ಬೀದಿಯಲ್ಲಿ ಹೆಣ ಹಾಕುವುದು ಅವರ ಕೆಲಸವಾಗಿತ್ತು .ಈ ಘಟನೆ ಇಡೀ ಹೈದರಾಬಾದ್ ಕರ್ನಾಟಕದಲ್ಲಿ ನಡೆದ ಒಂದು ಭಯಾನಕ ಘಟನೆಯಾಗಿದೆ.

ಇಂತಹ ಹಲವು ಘಟನೆಗಳು ಹೆಚ್ಚುತ್ತಲೇ ಹೋದಾಗ ತಕ್ಷಣವೇ ಹಿಂಸೆಯನ್ನು ನಿಲ್ಲಿಸಿ ಸಂಸ್ಥಾನವನ್ನು ಭಾರತದಲ್ಲಿ ವಿಲೀನಗೊಳಿಸುವಂತೆ ಭಾರತ ಸರ್ಕಾರ 7ನೇ ಮೀರ ಉಸ್ಮಾನ್ ಅಲಿ ಖಾನ್ ಗೆ ಎಚ್ಚರಿಕೆ ನೀಡಿತು. 1947ರ ಕಾಯ್ದೆ ಅನ್ವಯ ಭಾರತದ ಉಕ್ಕಿನ ಮನುಷ್ಯ ದೇಶದ ಗೃಹ ಸಚಿವರಾದ ಸರ್ದಾರ್ ವಲ್ಲಭಾಯಿ ಪಟೇಲರು ಜನಾಭಿಪ್ರಾಯ ಪಡೆದು ಹೈದರಾಬಾದ್ ಸಂಸ್ಥಾನವನ್ನು ಭಾರತದ ಒಕ್ಕೂಟಕ್ಕೆ ಸೇರಿಸಬೇಕೆಂದು ಸೂಚಿಸಿದರು ಆದರೆ ನಿಜಾಮ್ ನು ಒಪ್ಪಲಿಲ್ಲ. ಒಪ್ಪದೇ ಇದ್ದಾಗ ಸ್ವತಂತ್ರ ಭಾರತದ ಮೊದಲ ಗ್ರಹ ಮಂತ್ರಿ ಉಕ್ಕಿನ ಮನುಷ್ಯ ಸರದಾರ್ ವಲ್ಲಬಾಯ್ ಪಟೇಲರು ಇದನ್ನು ಗಂಭೀರವಾಗಿ ಪರಿಗಣಿಸಿ ಪೊಲೀಸ್ ಕಾರ್ಯಾಚರಣೆಗೆ ಆದೇಶವನ್ನು ಕೊಟ್ಟರು.

ಪೊಲೀಸ್ ಕಾರ್ಯಾಚರಣೆ: ಹೈದರಾಬಾದ್ ನಿಜಾಮ್ ಸಂಸ್ಥಾನದಲ್ಲಿದ್ದ ಗಂಭೀರ ಪರಿಸ್ಥಿತಿಯನ್ನು ಪರಿಗಣಿಸಿ ಅನಿವಾರ್ಯವಾಗಿ 1948 ಸೆಪ್ಟೆಂಬರ್ 13ರಂದು ಪೊಲೀಸ್ ಕಾರ್ಯಾಚರಣೆಗೆ ಆದೇಶ ನೀಡಿದರು. ಮೇಜರ್ ಜನರಲ್ ಜೆ ಎನ್ ಚೌದರಿ ಹಾಗೂ ದಕ್ಷಿಣ ವಿಭಾಗದ ಸೇನಾ ಮುಖ್ಯಸ್ಥ ಲೆಫ್ಟಿನೆಂಟ್ ಜನರಲ್ ಮಹಾರಾಜ ಶ್ರೀ ರಾಜೇಂದ್ರ ಸಿನ್ಹಾಜಿ ಅವರುಗಳು ಭಾರತದ ಪಡೆಗಳ ನೇತೃತ್ವವನ್ನು ವಹಿಸಿದರು.

ಭಾರತೀಯ ಪಡೆಗಳು 12 ದಿಕ್ಕಿನಿಂದ ದಾಳಿಯನ್ನು ನಡೆಸಿದವು ,ಭಾರತ ಸೇನೆ ಐದು ದಿನ ಕಾರ್ಯಾಚರಣೆ ನಡೆಸಿತು. ಭಾರತೀಯ ಸೈನ್ಯ ಹೈದರಾಬಾದ್ ಮೇಲೆ ದಾಳಿ ಮಾಡಿದಾಗ ರಜಾಕಾರರು ದಿಕ್ಕು ಪಾಲಾಗಿ ಓಡಿ ಹೋದರು .ಭಾರತೀಯ ಸೈನ್ಯ ನಿಜಾಮನ ಎಲ್ಲಾ ಸೈನ್ಯಾಧಿಕಾರಿಗಳನ್ನು ಬಂಧಿಸಿತು ಪರಿಣಾಮ ,1948ರ ಸೆಪ್ಟೆಂಬರ್ 17ರಂದು ಸಂಜೆ 4:00ಗೆ ನಿಜಾಮ್ ಮೀರ ಉಸ್ಮಾನ್ ಅಲಿಖಾನ್ ಹೈದರಾಬಾದ್ ನಿಜಾಮ್ ಸಂಸ್ಥಾನವನ್ನು ಭಾರತದ ಒಕ್ಕೂಟಕ್ಕೆ ಸೇರ್ಪಡೆ ಒಪ್ಪಂದಕ್ಕೆ ಅಧಿಕೃತವಾಗಿ ಒಪ್ಪಿಗೆ ಸೂಚಿಸಿ ಶರಣಾದ ಅಂದಿನಿಂದಲೇ ಅಸಫಿಯ ಧ್ವಜ ಕೆಳಗಿಳಿದು ಭಾರತದ ತ್ರಿವರ್ಣ ಧ್ವಜ ಹಾರಾಡಲಾರಂಭಿಸಿತು. ಆ ಹೋರಾಟದ ಪ್ರತಿಫಲಕ್ಕಾಗಿ ಸ್ವಾತ್ರತ್ಯ ನಮಗೆ ಸಿಕ್ಕಿತ್ತು ಆ ಕಾರಣಕ್ಕೆ ನಾವುಗಳು ಈ ಆಚರಣೆಯನ್ನು ಪ್ರತಿ ವರ್ಷ ಸೆಪ್ಟೆಂಬರ್ 17 ರಂದು ಆಚರಣೆ ಮಾಡುತ್ತಲಿದ್ದೇವೆ. ಈ ದಿನಾಚರಣೆಯನ್ನು ಕಲ್ಯಾಣ್ ಕರ್ನಾಟಕ ಜಿಲ್ಲೆಗಳಲ್ಲಿ ಮಾತ್ರ ಆಚರಣೆ ಮಾಡುವ ಬದಲು ಇಡೀ ರಾಜ್ಯಾದ್ಯಂತ ಆಚರಿಸಲು ಕರ್ನಾಟಕ ಸರಕಾರ ಮುಂದಾಗಬೇಕಿದೆ.

ಕಲ್ಯಾಣ ಕರ್ನಾಟಕ ಹೆಸರು ಬದಲಾವಣೆ ಆದರೆ ಸಾಲದು ಜನತೆಯ ಕಲ್ಯಾಣ ಆಗಬೇಕೆಂದು ಉದ್ಯೋಗಗಳ ಸೃಷ್ಟಿ ಕೈಗಾರಿಕೆಗಳ ಸೃಷ್ಟಿ, ಕೃಷಿ ,ಶಿಕ್ಷಣ ಆರೋಗ್ಯ ಮುಂತಾದ ವಿಷಯಗಳಲ್ಲಿ ಅಭಿವೃದ್ಧಿ ಕಾಣಬೇಕಿದೆ ಆ ಮೂಲಕ ಹೋರಾಟಗಾರರ ತ್ಯಾಗ ಬಲಿದಾನ ಮಾಡಿ ಪಡೆದ ಸ್ವಾತಂತ್ರ್ಯಕ್ಕೆ ಅರ್ಥ ಸಿಗುತ್ತದೆ.

ನಮ್ಮ ಹೋರಾಟಗಾರರು ಸ್ವತಂತ್ರಕ್ಕಾಗಿ ಹೋರಾಡಿದರು ಇಂದು ಹೋರಾಟಗಳು ಸ್ವಾರ್ಥಕ್ಕಾಗಿ ನಡೆಯುತ್ತಲಿವೆ ಈ ವಿಮೋಚನಾ ಹೋರಾಟವನ್ನು ಪಠ್ಯಕ್ರಮದಲ್ಲಿ ಅಳವಡಿಸುವುದರ ಮೂಲಕ ನಮ್ಮ ಮುಂದಿನ ಪೀಳಿಗೆಗೆ ಆ ಹೋರಾಟಗಾರರ ಹಾದಿಯನ್ನು ತಿಳಿಸುವ ಪ್ರಯತ್ನ ಮಾಡಬೇಕಾಗಿದೆ ಈ ಸ್ವತಂತ್ರ ಹೋರಾಟ ಚಿರಾಯುವಾಗಲಿ.



ಬಸವರಾಜ ಎಸ್ ಸೇರಿ
ಉಪನ್ಯಾಸಕರು
ದೊಡ್ಡಪ್ಪ ಅಪ್ಪ ಶಿಕ್ಷಣ ಮಹಾವಿದ್ಯಾಲಯ
ಬಸವಕಲ್ಯಾಣ.

**ಗುರುಮಠಕಲ್: ತಿಪಡಂಪಲ್ಲಿ ವ್ಯಾಪ್ತಿಯಲ್ಲಿ ಚಿರತೆ ಪ್ರತ್ಯಕ್ಷ, ಹೊಲದಲ್ಲಿ ಮೇಯುತ್ತಿದ್ದ ಎತ್ತಿನ ಮೇಲೆ ದಾಳಿ, ಸ್ಥಳಿಯರಲ್ಲಿ ಆತಂಕ**

## ಜೀವ ಭಯದಲ್ಲಿ ಎಮ್.ಟಿ.ಪಲ್ಲಿ ಗ್ರಾಮಸ್ಥರು



(ಜಗದೀಶಕುಮಾರ ಭೂಮಾ)

**ಮಲ್ಲಮ್ಮ ನುಡಿ ವಾರ್ತೆ**

ಗುರುಮಠಕಲ್: ಸೆ.16: ತಾಲೂಕಿನ ತಿಪಡಂಪಲ್ಲಿ (ಎಮ್.ಟಿ.ಪಲ್ಲಿ) ವ್ಯಾಪ್ತಿಯ ಗಾಜರಕೋಟ್ ರಸ್ತೆಯ ಹನಮಂತು ಬಾಲಪೊಳ್ ಹೊಲದಲ್ಲಿ ಇಂದು ಮತ್ತೋಮ್ಮೆ ಚಿರತೆಯೊಂದು ಕಾಣಿಸಿಕೊಂಡ ಘಟನೆಯಿಂದಾಗಿ ಗ್ರಾಮಸ್ಥರಲ್ಲಿ ಭಯದ ವಾತಾವರಣ ಮೂಡಿಸಿದೆ. ಚಿರತೆಯು ನಿನ್ನೆ ಹೊಲದಲ್ಲಿ ಬಾಲಪ್ಪ ಬುರನೊಳ ಅವರ ಎತ್ತುಗಳ ಮೇಲೆ ದಾಳಿ ಮಾಡಿದ್ದು, ಅದೃಷ್ಟವಶಾತ್ ಯಾವುದೇ ಪ್ರಾಣ ಹಾನಿ ಅಥವಾ ಗಾಯಗಳು ಆಗಿಲ್ಲ. ಹೊಲದಲ್ಲಿದ್ದ ನಾಗೇಂದ್ರಪ್ಪ ಕೊಲ್ಲೂರು ಚಿರತೆ ದಾಳಿ ನೋಡಿ ತೀವ್ರವಾಗಿ ಕಿರುಚಿದ್ದರು.

**ರವಿ ಬುರನೊಳ ಸ್ಥಳೀಯರು ಹಾಗೂ ಎಮ್.ಅರ್.ಪಿ.ಎಸ್ ಗುರುಮಠಕಲ್ ತಾಲೂಕ ಅಧ್ಯಕ್ಷರ ಹೇಳಿಕೆ**



ಈಗಾಗಲೇ ಕಳೆದ ಎಂಟು ಹತ್ತು ದಿನಗಳಿಂದ ಎರಡಕ್ಕಿಂತ ಹೆಚ್ಚು ಚಿರತೆಗಳ ಓಡಾಟ ಗ್ರಾಮದ ಸಾರ್ವಜನಿಕರಿಗೆ ಭಯದ ನೆರಳಲ್ಲಿ ಇರುವ ಹಾಗಾಗಿದೆ ಅರಣ್ಯ ಇಲಾಖೆ ಶೀಘ್ರವಾಗಿ ಚಿರತೆಗಳನ್ನು ಪತ್ತೆಹಚ್ಚಿ ಸೆರೆಹಿಡಿಯಬೇಕೆಂದು ರವಿ ಬುರನೊಳ ಎಮ್.ಅರ್.ಪಿ.ಎಸ್ ಗುರುಮಠಕಲ್ ತಾಲೂಕ ಅಧ್ಯಕ್ಷರು ಒತ್ತಾಯಿಸಿದ್ದಾರೆ.

ಅವರ ಕಿರುಚಾಟದ ಶಬ್ದ ಕೇಳಿ ಭಯಗೊಂಡ ಚಿರತೆ ಸ್ಥಳದಿಂದ ಪರಾರಿಯಾಗಿದೆ.

'ಕಳೆದ ಭಾನುವಾರ (ಸೆಪ್ಟೆಂಬರ್ 7)ರಿಂದ ಚಿರತೆ ಕಾಣಿಸಿಕೊಳ್ಳುತ್ತಿದ್ದು, ಎರಡು ಅಥವಾ ಹೆಚ್ಚು ಚಿರತೆ ಇರುವ ಅನುಮಾನ ಇದೆ ಹಾಗೂ ನಿನ್ನೆ ಎತ್ತುಗಳ ಮೇಲಿನ ದಾಳಿ ಮತ್ತು ಇಂದು ಹೊಲದಲ್ಲಿ ಕಂಡ ಹೆಜ್ಜೆ ಗುರಿತುಗಳು ನಮ್ಮಲ್ಲಿನ ಭಯವನ್ನು ಇನ್ನಷ್ಟು ಹೆಚ್ಚಿಸಿವೆ. ಇನ್ನೂ ಅರಣ್ಯ ಇಲಾಖೆಯವರಿಗೆ ಮಾಹಿತಿ ನೀಡಿಲ್ಲ. ಇಂದು ನೀಡುತ್ತೇವೆ' ಎಂದು ಚಿರತೆ ಹೆಜ್ಜೆಗುರಿತಿರುವ ಜಮೀನಿನ ಹನಮಂತ ಬಾಲಪೊಳ್ ಮತ್ತು ಪಕ್ಕದ ಜಮೀನಿನ ಕೃಷಿಕ ದೇವಿಂದ್ರಪ್ಪ ಬಾಲಪೋಳ ಅಳಲು ತೋಡಿಕೊಂಡರು.

ಸ್ಥಳಿಯರು ಚಿರತೆ ಭೀತಿಯಿಂದಾಗಿ ಆತಂಕದಲ್ಲಿ ಜೀವನ ಸಾಗಿಸುತ್ತಿದ್ದು, ಹೊಲದಲ್ಲಿ ಕೆಲಸಕ್ಕೆ ಹೋಗಲು ಭಯಭೀತರಾಗಿ ಮನೆಯಲ್ಲಿ ಉಳಿದಿದ್ದಾರೆ. ರಾತ್ರಿಯ ವೇಳೆ ನೆಮ್ಮದಿಯಾಗಿ ನಿದ್ದೆ ಮಾಡಲು ಸಾಧ್ಯವಾಗುತ್ತಿಲ್ಲ ಎಂದು ಗ್ರಾಮಸ್ಥರಾದ ಕಾಶಪ್ಪ ಬುರನೊಳ, ಲಕ್ಷ್ಮೀ ಬಾಲಪೊಳ್, ಮಂಜುನಾಥ ಕೊಲ್ಲೂರು ತಮ್ಮ ಅಳಲು ತೋಡಿಕೊಂಡಿದ್ದಾರೆ.

ಚಿರತೆಯು ಕಾಣಿಸಿಕೊಂಡಿದೆ ಎನ್ನುವ ಸ್ಥಳಕ್ಕೆ ಭೇಟಿ ನೀಡಿ, ಹೆಜ್ಜೆ ಗುರುತು ಪರಿಶೀಲನೆ ಮಾಡಿದ ನಂತರ ಹೆಜ್ಜೆಗಳು ಚಿರತೆಯದ್ದೇ ಅಥವಾ ಅಲ್ಲವೇ ಎನ್ನುವುದು ಖಚಿತ ಪಡಿಸಿಕೊಳ್ಳುತ್ತೇವೆ. ಚಿರತೆ ಇರುವುದು ಖಚಿತವಾದ ನಂತರ ಅದನ್ನು ಸೆರೆಹಿಡಿಯುವ, ಬೋನ್ ಅಳವಡಿಸುವ ಮತ್ತು ಅಗತ್ಯ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳುವದಾಗಿ ವಲಯ ಅರಣ್ಯಾಧಿಕಾರಿ ಬುರನೋದ್ದಿನ ಅವರು 'ಮಲ್ಲಮ್ಮ ನುಡಿ' ಪ್ರತಿನಿಧಿಗೆ ಫೋನ್ ಮೂಲಕ ಪ್ರತಿಕ್ರಿಯಿಸಿದರು.

**ಕೆಆರ್‌ಎಸ್ ಪಕ್ಷದಿಂದ ಕಲ್ಯಾಣ ಕರ್ನಾಟಕ ವಿಮೋಚನಾ ದಿನಾಚರಣೆ:**

## ರಾಜ್ಯಾಧ್ಯಕ್ಷ ರವಿಕೃಷ್ಣಾರೆಡ್ಡಿ ಆಗಮನ : ದೀಪಾ ಮುನ್ನೂರ




**ಮಲ್ಲಮ್ಮ ನುಡಿ ವಾರ್ತೆ**

ಯಾದಗಿರಿ: ಕೆಆರ್‌ಎಸ್ ಪಕ್ಷದ ವತಿಯಿಂದ ನಗರದ ವಿದ್ಯಾಮಂಗಲ ಕಚೇರಿಯಲ್ಲಿ ಸೆಪ್ಟೆಂಬರ್ 17ರಂದು ಕಲ್ಯಾಣ ಕರ್ನಾಟಕ ವಿಮೋಚನಾ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಪಕ್ಷದ ಸಂಘಟನಾ ಕಾರ್ಯದರ್ಶಿ ದೀಪಾ ಮುನ್ನೂರ ತಿಳಿಸಿದ್ದಾರೆ.

ಸೋಮವಾರ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಕಾರ್ಯಕ್ರಮದ ಅಂಗವಾಗಿ ಹೊಸಳ್ಳಿ ಕ್ರಾಸ್‌ನಿಂದ ಕಾರ್ಯಕ್ರಮದ ವೇದಿಕೆವರೆಗೆ ಭವ್ಯ ಕಾಲ್ನಡಿಗೆ ಜಾಥಾ ನಡೆಯಲಿದೆ ಎಂದು ತಿಳಿಸಿದರು. ಕಾರ್ಯಕ್ರಮಕ್ಕೆ ಪಕ್ಷದ ರಾಜ್ಯಾಧ್ಯಕ್ಷ ರವಿಕೃಷ್ಣಾರೆಡ್ಡಿ ಸೇರಿದಂತೆ ಹಲವು ರಾಜ್ಯ ಮಟ್ಟದ ನಾಯಕರು ಆಗಮಿಸಲಿದ್ದಾರೆ.

ಜಿಲ್ಲೆಯಲ್ಲಿ ಪಕ್ಷದ 1200 ಸಕ್ರಿಯ ಸದಸ್ಯರಿದ್ದು, ಅವರನ್ನು "ಭ್ರಷ್ಟಾಚಾರ ವಿರುದ್ಧ ಹೋರಾಡುವ ಸೈನಿಕರು" ಎಂದು ಕರೆಯಲಾಗುತ್ತದೆ ಎಂದು ಅವರು ವಿವರಿಸಿದರು. ಜಿಲ್ಲೆಯಾದ್ಯಂತ ನಡೆಯುತ್ತಿರುವ ಅನ್ಯಾಯ ಹಾಗೂ ಅಕ್ರಮಗಳ ವಿರುದ್ಧ ಪಕ್ಷವು ಸತತ ಹೋರಾಟ ನಡೆಸುತ್ತಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪಕ್ಷದ ಮುಖಂಡ ದೀಪಕ್ ಸಿ.ಎನ್. ಸೇರಿದಂತೆ ರಾಜ್ಯ ನಾಯಕರು ಭಾಗವಹಿಸಲಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾಧ್ಯಕ್ಷ ಜಗನ್ನಾಥ ಎಸ್., ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಸ್. ನಿಜಲಿಂಗಪ್ಪ ಪೂಜಾರಿ, ಜಿಲ್ಲಾ ಕಾರ್ಯದರ್ಶಿ ಬಸವರಾಜ ಠಾಣಾಗುಂದಿ, ನಗರ ಅಧ್ಯಕ್ಷ ಚಾಂದ್ ಹಾಗೂ ಇತರರು ಉಪಸ್ಥಿತರಿದ್ದರು.

## ಚರಂಡಿ ನೀರು ರಸ್ತೆ ಮೇಲೆ, ಮನವಿಗೂ ಸ್ಪಂದಿಸದ ಅಧಿಕಾರಿಗಳ ವಿರುದ್ಧ ಆಕ್ರೋಶ



**ಮಲ್ಲಮ್ಮ ನುಡಿ ವಾರ್ತೆ**

ಯಾದಗಿರಿ: ನಗರದ ಲ್ಯಾಂಡ್ ಆರ್ಮಿ ಆಫೀಸ್ ಮುಂದುಗಡೆಯಿಂದ ವಿಶ್ವಕರ್ಮ ವೃತ್ತದವರೆಗೆ ಚರಂಡಿ ನೀರು ರಸ್ತೆ ಮೇಲೆ ಹರಿದು ಸಾರ್ವಜನಿಕರಿಗೆ ತೊಂದರೆ-ಯಾಗುತ್ತಿದೆ. ನಾಳೆ ಬೆಳಗಾಗಲಿರುವ ವಿಶ್ವಕರ್ಮ ಜಯಂತಿ ಆಚರಣೆಗೆ ಇದು ಅಡಚಣೆಯಾಗಬಹುದು ಎಂದು ವಿಶ್ವಕರ್ಮ ಸಮಾಜದ ಮುಖಂಡರು ಆತಂಕ ವ್ಯಕ್ತಪಡಿಸಿದ್ದಾರೆ.

ಹಲವು ಬಾರಿ ದೂರವಾಣಿ ಕರೆ ಮೂಲಕ ನಗರಸಭೆ ಅಧಿಕಾರಿಗಳಿಗೆ ಮನವಿ ಮಾಡಿದರೂ ಯಾವುದೇ ಕ್ರಮ ಕೈಗೊಳ್ಳದೇ ಕಾಲಹರಣ ಮಾಡುತ್ತಿದ್ದಾರೆ ಎಂದು ಆರೋಪ ವ್ಯಕ್ತವಾಗಿದೆ. ಇದರಿಂದ ಅಸಮಾಧಾನಗೊಂಡ ವಿಶ್ವಕರ್ಮ ಮುಖಂಡರು ನಗರಸಭೆಯ ನಿರ್ಲಕ್ಷ್ಯವನ್ನು ಖಂಡಿಸಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

## ವಿಭಾಗಮಟ್ಟದ ದಸರಾ ಕ್ರೀಡಾಕೂಟ ಚೈತನ್ಯ ಸಮೂಹದ ಸ್ವಾಮಿ ವಿವೇಕಾನಂದ ಕಾಲೇಜಿಗೆ ಪ್ರಶಸ್ತಿ




**ಮಲ್ಲಮ್ಮ ನುಡಿ ವಾರ್ತೆ**

ಕೊಪ್ಪಳ: ಇಲ್ಲಿನ ಶ್ರೀ ಚೈತನ್ಯ ಸಮೂಹದ ಸ್ವಾಮಿ ವಿವೇಕಾನಂದ ಪ. ಪೂ. ಕಾಲೇಜಿನ ವಿದ್ಯಾರ್ಥಿಗಳು ಹಲವು ಕ್ರೀಡೆಗಳಲ್ಲಿ ಸಾಧನೆ ಮಾಡಿದ್ದು ದಸರಾ ವಿಭಾಗಮಟ್ಟದ ನೆಟ್ ಬಾಲ್ ಕ್ರೀಡಾಕೂಟದಲ್ಲಿ ಪ್ರಥಮ ಸ್ಥಾನ ಪಡೆದು ಸತತ ಎರಡನೇ ಬಾರಿಗೆ ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ವಿದ್ಯಾರ್ಥಿನಿ ಸಾಹಿತ್ಯ ಎಂ. ಗೊಂಡಬಾಳ ನಾಯಕತ್ವದಲ್ಲಿ ತಂಡ ದಸರಾ ವಿಭಾಗಮಟ್ಟದಲ್ಲಿ ಗೆಲುವು ಸಾಧಿಸಿ ಕಾಲೇಜಿಗೆ ಕೀರ್ತಿ ತಂದಿದ್ದಾರೆ.

ಅದೇ ರೀತಿ ದಸರಾ ತಾಲೂಕ ಮತ್ತು ಜಿಲ್ಲಾದಲ್ಲಿ ಸಹ ಪ್ರಥಮ ಸ್ಥಾನ ಪಡೆದಿದ್ದಾರೆ. ಇನ್ನು ಇದೇ ತಂಡ ಪದವಿಪೂರ್ವ ಕಾಲೇಜು ಕ್ರೀಡಾಕೂಟದಲ್ಲಿ ಸಹ ತಾಲೂಕ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟದ ಆಯ್ಕೆಯಲ್ಲಿ ಐದು ವಿದ್ಯಾರ್ಥಿನಿಯರು ರಾಜ್ಯಮಟ್ಟಕ್ಕೆ ಆಯ್ಕೆಯಾದರು. ಅಲ್ಲದೇ ಆರು ಜನ ವಿದ್ಯಾರ್ಥಿನಿಯರು ಏರ್ ರೈಫಲ್ ಶೂಟಿಂಗ್ ಓಪನ್ ಮತ್ತು ಪೀಪ್ ಕ್ರಮವಾಗಿ ಮೊದಲ ಮೂರು ಸ್ಥಾನ ಹಾಗೂ ಸಾಹಿತ್ಯ ಎಂ. ಗೊಂಡಬಾಳ ಅವರು ಜಂಪ್ ರೋಪ್ (ಟೀಮ್) ಹಾಗೂ ಕರಾಟೆ 64+ ಕೆ.ಜಿ. ವಿಭಾದಲ್ಲಿ ಪ್ರಥಮ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾಳೆ. ತಂಡದಲ್ಲಿ ಕಾಲೇಜಿನ ಸಾಹಿತ್ಯ ಎಂ. ಗೊಂಡಬಾಳ, ಗ್ರೀಷ್ಮಾ ಮಧುಸೂದನ್ ರಡ್ಡಿ, ಸಂಜನಾ ಶ್ರೀನಿವಾಸ ಹೋಟಕರ್, ಬೀಬಿ ಬತುರ್ ಆಫ್ರೀನ್, ಮೊನಿಷಾ ಗಂಗಾಧರ್, ರಂಜಿತಾ ವೀರಭದ್ರಪ್ಪ, ಅಕ್ಷಯ ಯಾದವ್, ವೀಣಾ ವೆಂಕಟೇಶ, ಅಕ್ಷರ ಎಂ. ಗೊಂಡಬಾಳ, ಶಮಾ ಎಸ್. ಬಿಸರಳ್ಳಿ ಇದ್ದರು. ಸಾಧನೆ ಮಾಡಿದ ತಂಡಕ್ಕೆ ಕಾಲೇಜಿನ ಪ್ರಾಚಾರ್ಯ ಸತೀಶ, ನೆಟ್ ಬಾಲ್ ಅಸೋಸಿಯೇಷನ್ ಜಿಲ್ಲಾ ಕಾರ್ಯಾಧ್ಯಕ್ಷ ಮಂಜುನಾಥ ಜಿ. ಗೊಂಡಬಾಳ ಅಭಿನಂದಿಸಿದ್ದಾರೆ. ವಿಜೇತರಿಗೆ ಯುವ ಸಬಲೀಕರಣ ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ವಿಠ್ಠಲ್ ಜಾಬಗೌಡರ್, ತರಬೇತು ದಾರರಾದ ಯತಿರಾಜ ಇತರರು ಬಹುಮಾನ ನೀಡಿದರು.

## ಅತಿವೃಷ್ಟಿಯಿಂದಾದ ಬೆಳೆ ಹಾನಿ ಕುರಿತ ಜಂಟಿ ಸಮೀಕ್ಷೆಯಲ್ಲಿ ಅರ್ಹ ರೈತರ ಜಮೀನು ಬಿಟ್ಟು ಹೋಗದಂತೆ ನಿಗಾವಹಿಸಿ ಜಿಲ್ಲಾ ಉಸ್ತುವಾರಿ ಸಚಿವ ಶ್ರೀ ಶರಣಬಸಪ್ಪ ದರ್ಶನಾಪುರ

**ಮಲ್ಲಮ್ಮ ನುಡಿ ವಾರ್ತೆ**



ಯಾದಗಿರಿ: ಸೆ :16-ಜಿಲ್ಲೆಯಲ್ಲಿ ಅತಿವೃಷ್ಟಿಯಿಂದಾದ ಬೆಳೆ ಹಾನಿಗೆ ಸಂಬಂಧಿಸಿದಂತೆ ಯಾವೊಬ್ಬ ಅರ್ಹರೈತರ ಜಮೀನು ಬಿಟ್ಟು ಹೋಗದಂತೆ,

ಸಮೀಕ್ಷೆ ವರದಿ ಶೀಘ್ರ ಹಾಗೂ ಸಮಗ್ರವಾಗಿ ಸಲ್ಲಿಸಲು ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಖಾತೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಶರಣಬಸಪ್ಪ ದರ್ಶನಾಪುರ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಇಂದು ತ್ರೈಮಾಸಿಕ ಕೆ.ಡಿ.ಪಿ ಸಭೆಯ ಅಧ್ಯಕ್ಷತೆವಹಿಸಿದ್ದ ಅವರು, ಅತಿವೃಷ್ಟಿಯಿಂದ ನಷ್ಟಕ್ಕೆ ಒಳಗಾದ ರೈತರಿಗೆ ನ್ಯಾಯಯುತವಾಗಿ ಪರಿಹಾರ ದೊರೆಯಲು ಮಾನವೀಯ ನೆಲೆಯ ಮೇಲೆ, ಸಮಗ್ರವಾಗಿ ಜಂಟಿ ಸಮೀಕ್ಷೆ ನಡೆಸಬೇಕು. ಈ ವರದಿ ಸಲ್ಲಿಸಿದ ನಂತರ ಪುನರ್ ಪರಿಶೀಲಿಸಿ ಸರ್ಕಾರಕ್ಕೆ ವರದಿ ಸಲ್ಲಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ರೈತರಿಗೆ ಬೀಜ, ರಸಗೊಬ್ಬರದ ಕೊರತೆಯಾಗದಂತೆ ನಿಗಾವಹಿಸಬೇಕು. ಡೀಲರ್ ಗಳಿಂದ ರಸಗೊಬ್ಬರ ಅಕ್ರಮವಾಗಿ ಮಾರಾಟವಾಗದಂತೆ ನಿಗಾವಹಿಸಬೇಕು. ವಿಮೆ ಹಣ ಸಕಾಲಕ್ಕೆ ದೊರೆಯುವಂತೆ ನೋಡಿಕೊಳ್ಳಬೇಕು.ಬಡವರಿಗೆ

ಕುರಿ ಸಾಕಾಣಿಕೆ,ಇತರೆ ಸಾಲ, ಸೌಲಭ್ಯ ಆದ್ಯತೆ ಮೇಲೆ ದೊರಕಿಸುವ ಸರ್ಕಾರದ ಉದ್ದೇಶಗಳನ್ನು ಈಡೇರಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಜಲಜೀವನ ಮಿಷನ್ ಯೋಜನೆ ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳಬೇಕು. ಪೈಪ್ಲೈನ್ ಅಳವಡಿಕೆ ಕ್ರಮ

ನೀರಿನ ಸಂಪನ್ಮೂಲ ಲಭ್ಯತೆ ಆಧಾರದ ಮೇಲೆ ಕೈಗೊಳ್ಳಬೇಕು. ಜಲಧಾರೆ ಯೋಜನೆಯಡಿ

ಬಾಕಿ ಉಳಿದಿರುವ

ಓಹೆಚ್ಚಿ ಗಳಿಗೆ ತಕ್ಷಣ ಸ್ಥಳ ಗುರುತಿಸಿ ಕಾಮಗಾರಿಗಳ ವೇಗ ಹೆಚ್ಚಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿ ತಾ.ಪಂ ಕಾರ್ಯನಿರ್ವಾಹಕಅಧಿಕಾರಿ,ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆ ಸಹಾಯಕ ಅಭಿಯಂತರರು ಪರಸ್ಪರ ಸಮನ್ವಯತೆಯಿಂದ ಕಾರ್ಯ ನಿರ್ವಹಿಸುವಂತೆ ಅವರು ಸೂಚಿಸಿದರು.

ಜಿಲ್ಲೆಯಲ್ಲಿ ಅಕ್ರಮ ಅಕ್ಕಿ ಸರಬರಾಜು ಬಗ್ಗೆ ತೀವ್ರ ನಿಗಾ ಇಡಬೇಕು.ಆಹಾರ ಇಲಾಖೆ ನಿರೀಕ್ಷಕರು ಆಯಾ ಮಿಲ್ ಗಳು, ಡೀಲರ್ಸ್ ಗಳ ಮೇಲೆ ತೀವ್ರ ನಿಗಾ ಇಡಬೇಕು. ತಪ್ಪಿತಸ್ಥರ ವಿರುದ್ಧ ಪ್ರಕರಣ ದಾಖಲಿಸುವಂತೆ ಸೂಚನೆ ನೀಡಿದರು.

ಅತಿವೃಷ್ಟಿಯಿಂದ ಹಾನಿಗೊಳಗಾದ ವಿದ್ಯುತ್ ಕಂಬಗಳು ತಕ್ಷಣ ಸ್ಥಳಾಂತರಿಸುವ ಜೊತೆಗೆ ಟಿ.ಸಿ ಸುಟ್ಟ ತಕ್ಷಣ ದುರಸ್ತಿ ಅಥವಾ ಬದಲಾಯಿಸಬೇಕು. ಸ್ವಂತ ಅಂಗನವಾಡಿ ಕಟ್ಟಡಗಳು ಇಲ್ಲದ ಕಡೆ ಸ್ಥಳಗಳನ್ನು ಗುರುತಿಸಿಟ್ಟುಕೊಳ್ಳಬೇಕು. ಹಾಳಾದ ರಸ್ತೆಗಳ ಬಗ್ಗೆ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕು. ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗದ ವ್ಯಾಪ್ತಿಯಲ್ಲಿ ಟೆಂಡರ್ ಪ್ರಕ್ರಿಯೆ ತಕ್ಷಣ ಪೂರ್ಣಗೊಳಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿ, ಶಿಥಿಲಾವಸ್ಥೆಯಲ್ಲಿರುವ ಶಾಲಾ ಕೊಠಡಿಗಳ ಸುಧಾರಣೆಗೆ, ಅವಶ್ಯಕ ಕ್ರಮ ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ರಾಜ್ಯ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕರಾದ ಛಲವಾದಿ ಟಿ.ನಾರಾಯಣಸ್ವಾಮಿ,

ಸಂಸದರಾದ ಶ್ರೀ ಜಿ . ಕುಮಾರ್ ನಾಯಕ, ಮಾಜಿ ಸಚಿವರು ಹಾಗೂ ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಶ್ರೀ ಬಾಬುರಾವ್ ಚಿಂಚನಸೂರ್, ಶಾಸಕರಾದ ಚೆನ್ನಾರೆಡ್ಡಿ ಪಾಟೀಲ್ ತುನ್ನೂರ, ಶರಣಗೌಡ ಕಂದಕೂರ, ರಾಜಾ ವೇಣುಗೋಪಾಲ್ ನಾಯಕ, ಜಿಲ್ಲಾಧಿಕಾರಿ ಹರ್ಷಲ್ ಭೋಯರ್, ಜಿ.ಪಂ.ಮುಖ್ಯಕಾರ್ಯನಿರ್ವಹಣಾಧಿಕಾರಿ ಲವೀಶ್ ಒರಡಿಯಾ, ಎಸ್ಪಿ ಪೃಥ್ವಿಕ್ ಶಂಕರ್ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

## ಬಳ್ಳಾರಿಯಲ್ಲಿ ಹಿರಿಯ ನಾಗರಿಕರಿಗೆ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆ

# ಹಿರಿಯ ನಾಗರಿಕರನ್ನು ಪ್ರತಿಯೊಬ್ಬರು ಗೌರವಿಸಬೇಕು: ನ್ಯಾ.ರಾಜೇಶ್ ಎನ್.ಹೊಸಮನೆ

**ಮಲ್ಲಮ್ಮ ನುಡಿ ವಾರ್ತೆ**

ಬಳ್ಳಾರಿ,ಸೆ.16–ಪ್ರತಿಯೊಬ್ಬರು ಹಿರಿಯ ನಾಗರಿಕರನ್ನು ಗೌರವಿಸಬೇಕು. ಆದರೆ, ಇತ್ತೀಚಿನ ದಿನಗಳಲ್ಲಿ ಅವರನ್ನು ತಿರಸ್ಕಾರ ಮಾಡುತ್ತಿರುವುದು ಸರಿಯಲ್ಲ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯಾದ ರಾಜೇಶ್ ಎನ್.ಹೊಸಮನೆ ಅವರು ಅಸಮಾಧಾನ ವ್ಯಕ್ತಪಡಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಯುವಜನ ಸೇವಾ ಕ್ರೀಡಾ ಇಲಾಖೆ ಹಾಗೂ ಹಿರಿಯ ನಾಗರಿಕರಿಗಾಗಿ ಶ್ರಮಿಸುತ್ತಿರುವ ಸ್ವಯಂಸೇವಾ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ನಗರದ ಕಂಟೋನ್ ಮೆಂಟ್‌ನ ಬಳ್ಳಾರಿ ವೈದ್ಯಕೀಯ ವಿಜ್ಞಾನ ಸಂಸ್ಥೆ ಕ್ರೀಡಾಂಗಣ(ಬಿ ಎಂ ಸಿ ಆರ್ ಸಿ) ಮೈದಾನದಲ್ಲಿ ಮಂಗಳವಾರ ಆಯೋಜಿಸಿದ್ದ ವಿಶ್ವ ಹಿರಿಯ ನಾಗರಿಕರ ದಿನಾಚರಣೆ 2025 ರ ಅಂಗವಾಗಿ ಹಿರಿಯ ನಾಗರಿಕರಿಗಾಗಿ ಕ್ರೀಡಾ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.



ಪ್ರತಿಯೊಬ್ಬರು ಜೀವನದ ಮೂರು ಹಂತಗಳಾದ ಬಾಲ್ಯ, ಯೌವ್ವನ, ಮುಪ್ಪು ದಾಟಬೇಕು. ಮಕ್ಕಳಿಗೆ ತಪ್ಪು ಸರಿ ಕುರಿತು ಅರಿವಿರುವುದಿಲ್ಲ. ಇದೇ ರೀತಿ ಹಿರಿಯ ನಾಗರಿಕರು ವಯಸ್ಸಾದಂತೆ ಮಕ್ಕಳಂತಾಗುತ್ತಾರೆ ಎಂದರು.

ಹಿರಿಯ ನಾಗರಿಕರು ಕಿರಿಯರಿಗೆ ಮಾರ್ಗದರ್ಶನ ನೀಡಬೇಕು. ಆದರೆ, ಇತ್ತೀಚಿನ ದಿನಗಳಲ್ಲಿ ಅವರನ್ನು ತಿರಸ್ಕಾರ ಮನೋಭಾವದಿಂದ ಕಾಣುತ್ತಿರುವುದು ವಿಪರ್ಯಾಸ. ಹಿರಿಯರ ಮಾತಿಗೆ ಉತ್ತೇಜನ ನೀಡಬೇಕು. ಹಿರಿಯರ ಮಾರ್ಗದರ್ಶನದಲ್ಲಿ ಕುಟುಂಬ ಚೆನ್ನಾಗಿರುತ್ತದೆ ಎಂದು ತಿಳಿಸಿದರು.

ವಯಸ್ಸಾಗುತ್ತಿದ್ದಂತೆ ಅರಳು ಮರಳು ಎನ್ನುವ ಮಾತಿದೆ. ಆದರೆ ಅವರಲ್ಲಿನ ಕಲೆ ಪ್ರತಿಭೆ ನೋಡಿದರೆ ಆಶ್ಚರ್ಯವಾಗುತ್ತದೆ. ಈ ರೀತಿಯ ಸ್ಪರ್ಧೆಗಳನ್ನು ಆಯೋಜಿಸುವ ಮೂಲಕ ಇಳಿವಯಸ್ಸಿನಲ್ಲಿ ಜೀವಗಳಿಗೆ ಉಲ್ಲಾಸ ತುಂಬಬೇಕಿದೆ. ವೃತ್ತಿ ನಿವೃತ್ತಿಯೊಂದಿಗೆ ಪ್ರವೃತ್ತಿ ನಿವೃತ್ತಿಯಾಗದಂತೆ ನೋಡಿಕೊಳ್ಳಬೇಕಿದೆ. ನಮ್ಮಲ್ಲಿ ಪ್ರತಿಭೆ ಇದೆ ಕಲೆ ಇದೆ ಅದನ್ನು ಗುರುತಿಸುವ ಕೆಲಸವಾಗಬೇಕಿದೆ ಎನ್ನುವ ಸಂದೇಶವನ್ನು ಈ ಕ್ರೀಡಾಕೂಟದಲ್ಲಿ ಹಿರಿಯರು ಸಾರಬೇಕು ಎಂದು ಹಿರಿಯ ನಾಗರಿಕರಿಗೆ ಹೇಳಿದರು.

ಯುವಕರನ್ನು ನಾಚಿಸುವಂತೆ ತಮ್ಮ ವಯಸ್ಸು ಮೀರಿ ಸ್ಪರ್ಧೆಯಲ್ಲಿ ಭಾಗವಹಿಸುತ್ತಿರುವುದಕ್ಕೆ ಸಂತಸ ವ್ಯಕ್ತಪಡಿಸಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ರಾಮಕೃಷ್ಣ ನಾಯ್ಕ್ ಅವರು ಮಾತನಾಡಿ, ಹಿರಿಯ ನಾಗರಿಕರ ಕ್ರೀಡೆಗಳನ್ನು ಆಯೋಜಿಸುವ ಮೂಲಕ ಜಿಲ್ಲಾಡಳಿತ ನಮ್ಮನ್ನೆಲ್ಲಾ ವರ್ಷಕ್ಕೊಮ್ಮೆ ಬೆಸೆಯುತ್ತದೆ. ವರ್ಷಪೂರ್ತಿ ನಡೆದ ದು–ಃಖ ದುಮ್ಮಾನಗಳನ್ನು ನಾವು ಹಂಚಿಕೊಳ್ಳುತ್ತೇವೆ. ಕ್ರೀಡೆಗಳಲ್ಲಿ ಗೆಲುವು ಸೋಲು ಮುಖ್ಯವಲ್ಲ, ಭಾಗವಹಿಸುವುದು ಮುಖ್ಯ. ಆರೋಗ್ಯವಾಗಿರಬೇಕು ಎಂದರೆ ಕ್ರೀಡೆಯಲ್ಲಿ ಪಾಲ್ಗೊಳ್ಳಬೇಕು ಉತ್ಸಾಹದಿಂದ ಇರಬೇಕು ಎಂದರು. ಹಿರಿಯ ನಾಗರಿಕರು ದೈಹಿಕವಾಗಿ ಕೆಲಸ ಮಾಡದೆ ಮಾನಸಿಕವಾಗಿ ಕೆಲಸ ಮಾಡುತ್ತಿದ್ದಾರೆ. ಅವರ ಆಚಾರ ವಿಚಾರ ಸಾಧನೆಗಳು ಈಗಿನ ಯುವ ಪೀಳಿಗೆಗಳಿಗೆ ಸ್ಫೂರ್ತಿಯಾಗಿದ್ದು, ಹಿರಿಯರನ್ನು ಕಡೆಗಣಿಸದೆ ಗೌರವದಿಂದ ನೋಡಿಕೊಳ್ಳಬೇಕು ಎಂದು ತಿಳಿಸಿದರು.

ಜಿಲ್ಲಾ ಮಟ್ಟದ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಅಂದಾಜು 200 ಕ್ಕೂ ಹೆಚ್ಚು ಮಂದಿ ಭಾಗಿಯಾಗುವ ಮೂಲಕ ತಮ್ಮ ಕ್ರೀಡೆ ಹಾಗೂ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಭಾಗವಹಿಸಿ ಉತ್ಸಾಹವನ್ನು ತೋರಿಸಿದರು.

ಪುರುಷರಿಗೆ ಮತ್ತು ಮಹಿಳೆಯರಿಗೆ ಪ್ರತ್ಯೇಕವಾಗಿ ಮ್ಯೂಸಿಕಲ್ ಚೇರ್, ಬಿರುಸಿನ ನಡಿಗೆ ಹಾಗೂ ಬಕೆಟ್‌ನಲ್ಲಿ ಬಾಲ್ ಎಸೆಯುವ ಕ್ರೀಡೆಗಳನ್ನು ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಾದ ಗಾಯನ ಸ್ಪರ್ಧೆ ಹಾಗೂ ಏಕ ಪಾತ್ರ ಅಭಿನಯವನ್ನು ಏರ್ಪಡಿಸಲಾಗಿತ್ತು.

ಈ ಸಂದರ್ಭದಲ್ಲಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಗೋವಿಂದಪ್ಪ.ಹೆಚ್., ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ನಿರೂಪಣಾಧಿಕಾರಿ ಸವಿತಾ, ಸಂಡೂರು ಶಿಶು ಅಭಿವೃದ್ಧಿ ಅಧಿಕಾರಿ ನಾಗರಾಜ, ಅಂತರಾಷ್ಟ್ರೀಯ ಕ್ರೀಡಾಪಟು ಸತ್ಯನಾರಾಯಣ, ಚೆಂಗಾರೆಡ್ಡಿ ವೃದ್ಧಾಶ್ರಮದ ಆಡಳಿತಾಧಿಕಾರಿ ಗುರುಮೂರ್ತಿ, ಸಂಗನಕಲ್ಲು ಆದರ್ಶ ವೃದ್ಧಾಶ್ರಮದ ಅಧ್ಯಕ್ಷ ವೆಂಕೋಬಪ್ಪ, ಸಿರುಗುಪ್ಪ ಭೀಮಾ ವಿದ್ಯಾ ಸಂಸ್ಥೆಯ ಮಹೇಶ್ ಕುಮಾರ್, ಬಳ್ಳಾರಿ ಅನುಗ್ರಹ ವಿದ್ಯಾಸಂಸ್ಥೆಯ ಸಿಸ್ಟರ್ ಪ್ರಜ್ಞ ಸೇರಿದಂತೆ ದೈಹಿಕ ಶಿಕ್ಷಕರು, ಹಿರಿಯ ನಾಗರಿಕರು ಹಾಗೂ ಇಲಾಖೆಯ ಸಿಬ್ಬಂದಿಗಳು ಸಾರ್ವಜನಿಕರು ಇತರರು ಉಪಸ್ಥಿತರಿದ್ದರು.

# ಅಡ್ಕರ್: ವಿವಿಧ ಸೌಲಭ್ಯಗಳಿಗಾಗಿ ಅರ್ಜಿ ಆಹ್ವಾನ

**ಮಲ್ಲಮ್ಮ ನುಡಿ ವಾರ್ತೆ**

ಬಳ್ಳಾರಿ,ಸೆ.16–ಡಾ.ಬಾಬು ಜಗಜೀವನ್ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ವತಿಯಿಂದ 2025–26ನೇ ಸಾಲಿಗೆ ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳಡಿ ಸಾಲ ಸೌಲಭ್ಯ ಪಡೆಯಲು ಅರ್ಹರಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

*ಯೋಜನೆಗಳ ವಿವರ:*

ನೇರ ಸಾಲ ಯೋಜನೆ, ಡಾ.ಬಾಬು ಜಗಜೀವನ್ ರಾಂ ಚರ್ಮಕಾರರ ವಸತಿ ಯೋಜನೆ, ಚರ್ಮ ಕುಶಲಕರ್ಮಿ ಕುಟುಂಬಗಳ ಯುವಜನರಿಗೆ ಹೊಸ ತಂತ್ರಜ್ಞಾನ ವಿನ್ಯಾಸಗಳು ಹಾಗೂ ಮಾರುಕಟ್ಟೆ ಬೇಡಿಕೆಗಳ ಬಗ್ಗೆ ದೆಹಲಿ, ತಮಿಳುನಾಡು, ಮಹಾರಾಷ್ಟ್ರ, ಉತ್ತರಪ್ರದೇಶ ಮತ್ತು ಪಶ್ಚಿಮ ಬಂಗಾಳದಲ್ಲಿ ತರಬೇತಿ ಪಡೆಯಲು ಅಧ್ಯಯನ ಪ್ರವಾಸ ಯೋಜನೆಗಳಡಿ ಸೌಲಭ್ಯ ಪಡೆಯಲು ಅರ್ಹರು ಅರ್ಜಿ ಸಲ್ಲಿಸಬಹುದಾಗಿದೆ.

ಆಸಕ್ತರು ಅಕ್ಟೋಬರ್ 08 ರೊಳಗಾಗಿ ನಿಗಮದ ವೆಬ್‌ಸೈಟ್ ್ಞಣಣಠಿ://ಜತಿಭಿಟಿಜ್ಞಣ.ಞಚಿಡಿ–ಟಿಚಿಣಚಿಞಚಿ.ರಠತ.ಟಿ ಗೆ ಭೇಟಿ ನೀಡಿ ಅರ್ಜಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ದೂ.08392–271741, 9844667691 ಅಥವಾ ನಗರದ ಹೆಚ್.ಆರ್ ಗವಿಯಪ್ಪ ವೃತ್ತದ ಬಳಿಯ ಬುಡಾ ಸಂಕೀರ್ಣದ ಕಟ್ಟದಲ್ಲಿನ ಲಿಡ್‌ಕರ್‌ನ ಜಿಲ್ಲಾ ಕಚೇರಿಗೆ ಸಂಪರ್ಕಿಸಬಹುದು ಎಂದು ಲಿಡ್‌ಕರ್ ನಿಗಮದ ಜಿಲ್ಲಾ ಸಂಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿಎಸ್‌ಕೆ ವಿವಿ: ಸೆ.17 ರಂದು ಕಲ್ಯಾಣ ಕರ್ನಾಟಕ ಉತ್ಸವ ಮತ್ತು ಶಿಕ್ಷಕರ ದಿನಾಚರಣೆ ಕಾರ್ಯಕ್ರಮ

**ಮಲ್ಲಮ್ಮ ನುಡಿ ವಾರ್ತೆ**

ಬಳ್ಳಾರಿ,ಸೆ.16–ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ವತಿಯಿಂದ ಸೆ.17 ರಂದು ಬೆಳಿಗ್ಗೆ 8 ಗಂಟೆಗೆ ನಗರದ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಡಾ.ಬಿ.ಆರ್ ಅಬೇಡ್ಕರ್ ಸಭಾಂಗಣದಲ್ಲಿ ಕಲ್ಯಾಣ ಕರ್ನಾಟಕ ಉತ್ಸವ ಮತ್ತು ಶಿಕ್ಷಕರ ದಿನಾಚರಣೆ ಕಾರ್ಯಕ್ರಮ ಏರ್ಪಡಿಸಲಾಗಿದೆ. ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಂ ಮುನಿರಾಜು ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಮಲ್ಲಿಕಾ ಎಸ್. ಘಂಟಿ ಅವರು ಮುಖ್ಯ ಅಥಿತಿಗಳಾಗಿ ಭಾಗವಹಿಸುವರು. ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಕುಲಸಚಿವ(ಆಡಳಿತ) ನಾಗರಾಜು.ಸಿ., ಕುಲಸಚಿವ(ವೌಲ್ಯಮಾಪನ) ಡಾ.ಸಾಲಿ ಎನ್.ಎಂ., ಹಣಕಾಸು ಅಧಿಕಾರಿ ನಾಗರಾಜ, ಕಲಬುರಗಿಯ ಕ.ಕ.ಅ.ಮಂಡಳಿ ಸದಸ್ಯರು ಮತ್ತು ಸಹಾಯಕ ಪ್ರಾಧ್ಯಾಪಕ ರಾಜೇಂದ್ರ ಪ್ರಸಾದ್ ಎನ್.ಎಲ್ ಸೇರಿದಂತೆ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಎಲ್ಲಾ ಸಿಂಡಿಕೇಟ್ ಹಾಗೂ ವಿದ್ಯಾವಿಷಯಕ್ ಪರಿಷತ್ ಸದಸ್ಯರು ವಿಶೇಷ ಆಹ್ವಾನಿತರಾಗಿ ಭಾಗವಹಿಸುವರು. ಕಾರ್ಯಕ್ರಮ ಸಂಯೋಜಕ ಡಾ.ತಿಪ್ಪೇಸ್ವಾಮಿ ಸೇರಿದಂತೆ ವಿವಿಧ ವಿಭಾಗಗಳ ಮುಖ್ಯಸ್ಥರು, ಬೋಧಕ–ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

# ಸ್ನೇಹಾ ಸುಮಾ ಹೆಗಡೆ ಅವರಿಗೆ ಪಿಹೆಚ್.ಡಿ ಪದವಿ

**ಮಲ್ಲಮ್ಮ ನುಡಿ ವಾರ್ತೆ**

ಬಳ್ಳಾರಿ,ಸೆ.16–ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗದ ಸಂಶೋಧನಾ ವಿದ್ಯಾರ್ಥಿನಿ ಸ್ನೇಹಾ ಸುಮಾ ಹೆಗಡೆ ಅವರಿಗೆ ಪಿಹೆಚ್.ಡಿ ಪದವಿ ಲಭಿಸಿದೆ.

ವಿಶ್ವವಿದ್ಯಾಲಯದ ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ. ವಿಜಯಕುಮಾರ್ ಬಿ. ಮಲಶೆಟ್ಟಿ ಅವರ ಮಾರ್ಗದರ್ಶನದಲ್ಲಿ "ಎಫೆಕ್ಟ್ ಆಫ್ ಎ– ಟರ್ಪಿನಾಲ್ ಆನ್ ರಿಪ್ರೊಡಕ್ಟಿವ್, ಡೆವಲಪ್‌ಮೆಂಟ್ ಆಂಡ್ ನ್ಯೂರೋಟಾಕ್ಸಿಸಿಟಿ ಇನ್ ವಿಸ್ಟಾರ್ ರ‍್ಯಾಟ್ಸ್" ಎಂಬ ಮಹಾಪ್ರಬಂಧ ಮಂಡಿಸಿದ್ದಕ್ಕಾಗಿ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯವು ಪಿಹೆಚ್.ಡಿ ಪದವಿ ಪ್ರದಾನ ಮಾಡಿದೆ ಎಂದು ವಿವಿ ಪ್ರಕಟಣೆ ತಿಳಿಸಿದೆ.

# ಬಳ್ಳಾರಿ ಜಿಲ್ಲಾಡಳಿತದಿಂದ ಸೆ.17 ರಂದು ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆ

**ಮಲ್ಲಮ್ಮ ನುಡಿ ವಾರ್ತೆ**

ಬಳ್ಳಾರಿ,ಸೆ.16–ಜಿಲ್ಲಾಡಳಿತ ವತಿಯಿಂದ ಸೆ.17 ರಂದು ಬೆಳಿಗ್ಗೆ 9 ಗಂಟೆಗೆ ನಗರದ ಸರ್ಕಾರಿ ಪದವಿ ಪೂರ್ವ(ಮಾ.ಪು) ಕಾಲೇಜು ಮೈದಾನದಲ್ಲಿ ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಪೌರಾಡಳಿತ ಮತ್ತು ಹಜ್ ಸಚಿವರಾದ ರಹೀಂ ಖಾನ್ ಅವರು ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆ ಅಂಗವಾಗಿ ಧ್ವಜಾರೋಹಣ ನೆರವೇರಿಸುವರು.

ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಬಳ್ಳಾರಿ ಉಸ್ತುವಾರಿ ಸಚಿವರಾದ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಅವರು ಘನ ಉಪಸ್ಥಿತರಿರುವರು.

ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಅಧ್ಯಕ್ಷತೆ ವಹಿಸುವರು.

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಹಾಗೂ ಶಾಸಕ ಜೆ.ಎನ್.ಗಣೇಶ್, ಸಂಸದರಾದ ಈ.ತುಕಾರಾಮ್, ಕೆ.ರಾಜಶೇಖರ ಬಸವರಾಜ ಹಿಟ್ನಾಳ್, ಡಾ.ಸೈಯದ್ ನಾಸೀರ್ ಹುಸೇನ್, ಶಾಸಕ ಬಿ.ನಾಗೇಂದ್ರ, ವಿಧಾನಪರಿಷತ್ ಶಾಸಕ ಡಾ.ಚಂದ್ರಶೇಖರ್ ಬಿ.ಪಾಟೀಲ, ಶಾಸಕರಾದ ಬಿ.ಎಂ.ನಾಗರಾಜ, ಈ.ಅನ್ನಪೂರ್ಣ, ವಿಧಾನಪರಿಷತ್ ಶಾಸಕರಾದ ಶಶೀಲ್ ನಮೋಶಿ, ವೈ.ಎಂ.ಸತೀಶ್, ಡಾ.ಬಾಬು ಜಗಜೀವನ್‌ರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ, ಮಹಾನಗರಪಾಲಿಕೆಯ ಮಹಾಪೌರರಾದ ಮುಲ್ಲಂಗಿ ನಂದೀಶ್, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜೆ.ಎಸ್.ಆಂಜನೇಯಲು, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ ಸೇರಿದಂತೆ ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಕಲ್ಯಾಣ ಕರ್ನಾಟಕ ಹೋರಾಟ ಸಮಿತಿಯ ಜಿಲ್ಲಾಧ್ಯಕ್ಷ ಸಿರಿಗೇರಿ ಪನ್ನರಾಜ್ ಅವರು ಕಾರ್ಯಕ್ರಮ ಕುರಿತು ವಿಶೇಷ ಉಪನ್ಯಾಸ ನೀಡುವರು.

ಬಳ್ಳಾರಿ ವಲಯ ಪೊಲೀಸ್ ಮಹಾ ನಿರೀಕ್ಷಕರಾದ ವರ್ತಿಕ ಕಟಿಯಾರ್, ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ.ವಿ.ಜೆ., ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್.ಎನ್ ಸೇರಿದಂತೆ ಇತರರು ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

## ಉತ್ತಮ ಕಾರ್ಯಕ್ರಮ ಆಯೋಜಿಸುವ ಗ್ರಾಪಂ ಗಳಿಗೆ ಪ್ರಶಸ್ತಿ

# 'ಸ್ವಚ್ಛತೆಯೇ ಸೇವೆ ಪಾಕ್ಷಿಕ ಆಂದೋಲನ' ಜಾಗೃತಿ ಅಭಿಯಾನ: ಜಿಪಂ ಸಿಇಒ ಮಹಮ್ಮದ್ ಹಾರಿಸ್ ಸುಮೇರ್

**ಮಲ್ಲಮ್ಮ ನುಡಿ ವಾರ್ತೆ**

ಬಳ್ಳಾರಿ,ಸೆ.16–ಜಿಲ್ಲೆಯ ಎಲ್ಲಾ ಗ್ರಾಮಗಳಲ್ಲಿ ಇದೇ ಸೆ.17 ರಿಂದ ಅ.02 ರವರೆಗೆ 'ಸ್ವಚ್ಛತಾ ಹೀ ಸೇವಾ–ಸ್ವಚ್ಛತೆಯೇ ಸೇವೆ ಪಾಕ್ಷಿಕ–2025' ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್ ಅವರು ತಿಳಿಸಿದ್ದಾರೆ.

ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಸ್ವಚ್ಛತೆ ಮತ್ತು ಶುಚಿತ್ವ ಕುರಿತು ಜನರಲ್ಲಿ ಜಾಗೃತಿ ಮೂಡಿಸಲು ವಿವಿಧ ಕಾರ್ಯಕ್ರಮ ಮತ್ತು ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ ಎಂದಿದ್ದಾರೆ.

ಕೇಂದ್ರ ಜಲಶಕ್ತಿ ಮಂತ್ರಾಲಯ, ಕೇಂದ್ರ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಬೆಂಗಳೂರು ಇವರ



ನಿರ್ದೇಶನದಂತೆ ಪ್ರತಿ ವರ್ಷದಂತೆ ಈ ವರ್ಷವು ಸಹ 'ಸ್ವಚ್ಛೋತ್ಸವ' ಧ್ಯೇಯವಾಕ್ಯದೊಂದಿಗೆ ಸ್ವಚ್ಛತೆ–ಯೇ ಸೇವೆ ಪಾಕ್ಷಿಕ ಅಭಿಯಾನವು ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಆಯೋಜಿಸಲಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ.

ಪ್ರತಿಯೊಬ್ಬರಿಗೂ ಸ್ವಚ್ಛತೆಯ ಅಭ್ಯಾಸಗಳನ್ನು ರೂಢಿಸಿಕೊಳ್ಳುವಂತೆ ಮತ್ತು ವೈಯಕ್ತಿಕ ಸ್ವಚ್ಛತೆ, ಗ್ರಾಮದ ಸ್ವಚ್ಛತೆ, ತ್ಯಾಜ್ಯ ನಿರ್ವಹಣೆ, ಜಲ–ಮೂಲಗಳ ಸುತ್ತ–ಮುತ್ತ ಸ್ವಚ್ಛತೆ ಕಾಯ್ದುಕೊಳ್ಳಲು ವಿವಿಧ ಚಟುವಟಿಕೆಗಳನ್ನು ಹಮ್ಮಿಕೊಂಡು ಜಾಗೃತಿ ಮೂಡಿಸುವುದೇ ಈ ಅಭಿಯಾನದ ಉದ್ದೇಶವಾಗಿದೆ ಎಂದರು.

ತಾಲ್ಲೂಕು ಪಂಚಾಯತಿಯ ಕಚೇರಿ, ಶಾಲೆ, ಅಂಗನವಾಡಿ, ಆರೋಗ್ಯ ಕೇಂದ್ರ ಮುಂತಾದ ಸರ್ಕಾರಿ ಕಚೇರಿಗಳಲ್ಲಿ ಸ್ವಚ್ಛತೆ ಕಾಪಾಡುವುದು ಹಾಗೂ ಸಾರ್ವಜನಿಕ ಸ್ಥಳ, ಕಸದಿಂದ ಕೂಡಿರುವ ಸ್ಥಳವನ್ನು ಸ್ವಚ್ಛತೆಗೊಳಿಸಿ, ಕಸ ಎಸೆಯದಂತೆ ರಂಗೋಲಿ ಹಾಕಿ ಸುಂದರ ಸ್ಥಳವನ್ನಾಗಿ ಬದಲಾಯಿಸಲಾಗುತ್ತದೆ. ಉತ್ತಮ ಕಾರ್ಯಕ್ರಮ ಆಯೋಜಿಸುವ ಗ್ರಾಮ ಪಂಚಾಯತ್ ಗಳಿಗೆ ಪ್ರಶಸ್ತಿ ನೀಡಲಾಗುವುದು ಎಂದು ಜಿಪಂ ಸಿಇಒ ಅವರು ತಿಳಿಸಿದ್ದಾರೆ.

ಕಸ ಹೊಂದಿರುವ ಸ್ಥಳ ಗುರುತಿಸಿ ಸ್ವಚ್ಛಗೊಳಿಸುವುದು. ಸಾರ್ವಜನಿಕ ಸ್ಥಳಗಳಲ್ಲಿ ಶಾಲೆ, ಅಂಗನವಾಡಿ ಸರ್ಕಾರಿ ಕಚೇರಿಗಳಲ್ಲಿ ಶ್ರಮದಾನದ ಮೂಲಕ ಸ್ವಚ್ಛಗೊಳಿಸುವುದು. ಗ್ರಾಮದ ಸ್ವಚ್ಛತೆಯಲ್ಲಿ ತೊಡಗುವ ಸ್ವಚ್ಛತಾ ಸಿಬ್ಬಂದಿಯವರಿಗೆ ಆರೋಗ್ಯ ಶಿಬಿರಗಳನ್ನು ಏರ್ಪಡಿಸಿ, ಆರೋಗ್ಯ ತಪಾಸಣೆ ಮಾಡಿಸುವುದು. ಅವರಿಗೆ ಆತ್ಮಗೌರವ ಕಾರ್ಡ್‌ಗಳನ್ನು ನೀಡಿ ಪ್ರೋತ್ಸಾಹ ನೀಡುವುದು, ಏಕಬಳಕೆಯ ಪ್ಲಾಸ್ಟಿಕ್ ತ್ಯಜಿಸಿ, ಮರುಬಳಕೆ ವಸ್ತುಗಳನ್ನು ಬಳಸುವುದು ಮತ್ತು ಬಟ್ಟೆ ಚೀಲಗಳನ್ನು ಉಪಯೋಗಿಸುವಂತೆ ಪ್ರೇರಣೆ ನೀಡುವುದಾಗಿದೆ.

ಪರಿಸರ ಸ್ನೇಹಿ ಹಬ್ಬಗಳನ್ನು ಆಚರಣೆಗೆ ಉತ್ತೇಜಿಸುವಂತೆ ವಿವಿಧ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದು, ವಿಶೇಷವಾಗಿ ಸೆ.25 ರಂದು ಏಕ್ ದಿನ್, ಏಕ್ ಘಂಟಾ, ಏಕ್ ಸಾಥ್ ಎನ್ನುವ ಪ್ರೇರಣೆಯೊಂದಿಗೆ ಎಲ್ಲರೂ ಒಂದುಗೂಡಿ ಕುಡಿಯುವ ನೀರಿನ ಮೂಲಗಳ ಸುತ್ತ–ಮುತ್ತ, ಸಾರ್ವಜನಿಕ ಸ್ಥಳ ಸೇರಿದಂತೆ ಮುಂತಾದ ಸ್ಥಳಗಳಲ್ಲಿ ಶ್ರಮದಾನ ಮಾಡುವುದು. ಸ್ವಚ್ಛತಾ ಹೀ ಸೇವಾ ಪಾಕ್ಷಿಕ ಅಭಿಯಾನದ ಮಾಹಿತಿಯನ್ನು ಐಟಿ ಪೋರ್ಟಲ್‌ನಲ್ಲಿ ಅಪ್ ಲೋಡ್ ಮಾಡಬೇಕು ಎಂದು ಅವರು ತಿಳಿಸಿದ್ದಾರೆ.

ಈ ಅಭಿಯಾನದಲ್ಲಿ ಗ್ರಾಮ ಪಂಚಾಯತಿ ಮಟ್ಟದ ವಿವಿಧ ಇಲಾಖೆಯ ಅಧಿಕಾರಿ, ಸಿಬ್ಬಂದಿ ವರ್ಗದವರು, ಗ್ರಾಮ ಪಂಚಾಯತಿ ಅಧ್ಯಕ್ಷರು, ಸದಸ್ಯರು, ಯುವಕರು, ಸಂಜೀವಿನಿ ಯೋಜನೆಯ ಸಿಬ್ಬಂದಿ, ಸ್ವಸಹಾಯ ಸಂಘದ ಸದಸ್ಯರು, ನರೇಗಾ ಕೂಲಿ ಕಾರ್ಮಿಕರ ಸಹಯೋಗದೊಂದಿಗೆ ಕಾರ್ಯಕ್ರಮಗಳನ್ನು ಆಯೋಜಿಸಲು ಗ್ರಾಮ ಪಂಚಾಯತಿಗಳಿಗೆ ನಿರ್ದೇಶನ ನೀಡಲಾಗಿದ್ದು, ಪ್ರತಿಯೊಬ್ಬರೂ ಆಂದೋಲನದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಜಿಪಂ ಸಿಇಒ ಮಹಮ್ಮದ್ ಹಾರೀಸ್ ಸುಮೇರ್ ಅವರು ಮನವಿ ಮಾಡಿದ್ದಾರೆ.

# ಪ್ರಗತಿ ಬಂಧು ಸ್ವ–ಸಹಾಯ ಸಂಘದ ಸದಸ್ಯರಿಗೆ..! ಕೃಷಿ ಅಧ್ಯಯನ ಪ್ರವಾಸ



**ಮಲ್ಲಮ್ಮ ನುಡಿ ವಾರ್ತೆ**

ಕೊಪ್ಪಳ : ತಾಲೂಕಿನ ಕಿನ್ನಾಳ ವಲಯದ ಮಾದಿನೂರು ಕಾರ್ಯ ಕ್ಷೇತ್ರದ ಪ್ರಗತಿ ಬಂಧು ಸ್ವ–ಸಹಾಯ ಸಂಘದ ಸದಸ್ಯರಿಗೆ ಕೃಷಿ ವಿಸ್ತರಣಾ ಕಾರ್ಯಕ್ರಮದಡಿಯಲ್ಲಿ ಕೃಷಿ ಅಧ್ಯಯನ ಪ್ರವಾಸವನ್ನು ಹಮ್ಮಿಕೊಳ್ಳಲಾಯಿತು.

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕೃಷಿ ಮೇಲ್ವಿಚಾರಕರಾದ ಅಶೋಕ ಅವರು ಯೋಜನೆಯ ಕಾರ್ಯಕ್ರಮಗಳು ಹಾಗೂ ರೈತರಿಗೆ ಉಪಯುಕ್ತ ಮಾಹಿತಿಗಳನ್ನು ಒದಗಿಸಲು ಗಿಣಗೇರ ಕೃಷಿ ಇಲಾಖೆಗೆ ಭೇಟಿ ಮಾಡಿಸಿದರು.

ಗಿಣಗೇರ ಕೃಷಿ ಇಲಾಖೆಯ ಅಧಿಕಾರಿ ವೆಂಕಟೇಶ್ ಆವರು ಮಣ್ಣು ಪರೀಕ್ಷೆ, ಹಸಿರೆಲೆ ಗೊಬ್ಬರ, ಕಂಪೋಸ್ಟ್, ಎರೆಹುಳು ಗೊಬ್ಬರಗಳ ಬಳಕೆ ತೋಟಗಾರಿಕೆ ಬೆಳಗಳ ಬಗ್ಗೆ ಮಾಹಿತಿ ನೀಡಿದರು.

ಅಧ್ಯಯನ ಪ್ರವಾಸದಲ್ಲಿ ನಾಗಪ್ಪ, ಕಂಟೆಪ್ಪ, ಹನುಮಪ್ಪ, ಪ್ರಶಾಂತ್, ಶಾಂತಮೂರ್ತಿ, ಮಂಜುಳಾ, ಪುಷ್ಪವತಿ, ದ್ರಾಕ್ಷಿಯಿಣಿ, ಸೇವಾಪ್ರತಿನಿಧಿ ನಾಗರತ್ನ ಸೇರಿದಂತೆ ಒಟ್ಟು 22 ಜನ ಪ್ರಗತಿ ಬಂಧು ಸ್ವ– ಸಹಾಯ ಸಂಘದ ಸದಸ್ಯರು ಭಾಗವಹಿಸಿದ್ದರು.

# ಸಣ್ಣ ಹಿಡುವಳಿ ರೈತರ ತಾಕುಗಳಿಗೆ ಶಾಸಕ ಸಿಬಿಎಸ್ ಭೇಟಿ

**ಮಲ್ಲಮ್ಮ ನುಡಿ ವಾರ್ತೆ**

ಚಿಕ್ಕನಾಯಕನಹಳ್ಳಿ, ಸೆ. 16– ತಾಲ್ಲೂಕಿನಲ್ಲಿ ಸರ್ಕಾರಿ ಭೂ ಮಂಜೂರಾತಿಗಾಗಿ ನಮೂನೆ 53 ಹಾಗೂ 57ರಲ್ಲಿ ಅರ್ಜಿ ಸಲ್ಲಿಸಿದ ರೈತರ ಹಿಡುವಳಿ ಜಾಗಗಳಿಗೆ ಅಧಿಕಾರಿಗಳು ಹಾಗೂ ಬಗರ್ ಹುಕುಂ ಸಮಿತಿಯ ಸದಸ್ಯರೊಂದಿಗೆ ಶಾಸಕ ಸಿ.ಬಿ. ಸುರೇಶ್ ಬಾಬು ನಮ್ಮ ನಡೆ ರೈತರ ಜಮೀನುಗಳ ಕಡೆ ಎಂಬ ಶೀರ್ಷಿಕೆಯಡಿ ಸ್ಥಳಗಳಿಗೆ ಭೇಟಿ ನೀಡಿ ನೈಜ ಫಲಾನುಭವಿಗಳ ಮಾಹಿತಿ ಪಡೆದರು.

# ಅನಾಮಧೇಯ ಮೃತ ವ್ಯಕ್ತಿ: ವಾರಸುದಾರರ ಪತ್ತೆಗೆ ಮನವಿ

**ಮಲ್ಲಮ್ಮ ನುಡಿ ವಾರ್ತೆ**

ಬಳ್ಳಾರಿ,ಸೆ.16–ನಗರದ ಎಪಿಎಂಸಿ ಯಾರ್ಡ್ ಪೊಲೀಸ್ ಠಾಣೆ ವ್ಯಾಪ್ತಿಯ ಕೆ.ಎಸ್.ಆರ್.ಟಿ.ಸಿ ಹೊಸ ಬಸ್ ನಿಲ್ದಾಣದಲ್ಲಿ ಅಂದಾಜು 35–40 ವರ್ಷದ ಅನಾಮಧೇಯ ವ್ಯಕ್ತಿಯು ಸೆ.12 ರಂದು ಮೃತಪಟ್ಟಿದ್ದು, ಈ ಕುರಿತು ಪ್ರಕರಣ ದಾಖಲಾಗಿದ್ದು, ಮೃತನ ವಾರಸುದಾರರ ಪತ್ತೆಗೆ ಸಹಕರಿಸಬೇಕು ಎಂದು ಪೊಲೀಸ್ ಠಾಣಾಧಿಕಾರಿ ಮನವಿ ಮಾಡಿದ್ದಾರೆ.

ಮೃತನ ಚಹರೆ: ಎತ್ತರ ಅಂ–ದಾಜು 5.5 ಅಡಿ, ದುಂಡು ಮುಖ, ಎಣ್ಣೆಗೆಂಪು ಮೈ ಬಣ್ಣ, ತಲೆಯಲ್ಲಿ ಅಂದಾಜು 2–1/2 ಇಂಚು ಉದ್ದದ ಕಪ್ಪು ಬಣ್ಣದ ಕೂದಲು, 1 ಇಂಚು ಉದ್ದದ ಕಪ್ಪು ಮೀಸೆ ಮತ್ತು 1/4 ಇಂಚು ಉದ್ದದ ಕಪ್ಪು ಗಡ್ಡ ಇರುತ್ತದೆ. ಮೃತನ ಮೈಮೇಲೆ ಬಿಳಿ ಬಣ್ಣದ ಕಪ್ಪು ಬಣ್ಣದ ಚುಕ್ಕೆಗಳಿರುವ ಅರ್ಧ ತೋಳಿನ ಅಂಗಿ ಮತ್ತು ಕಪ್ಪು ಬಣ್ಣದ ಜೀನ್ಸ್ ಪ್ಯಾಂಟ್ ಹೊಂದಿರುತ್ತಾನೆ.

ಈ ಮೇಲ್ಕಂಡ ಚಹರೆ ಗುರುತುಗಳುಳ್ಳ ವ್ಯಕ್ತಿಯ ವಾರಸುದಾರರ ಬಗ್ಗೆ ಮಾಹಿತಿ ಸಿಕ್ಕಲ್ಲಿ ಬಳ್ಳಾರಿ ಎಪಿಎಂಸಿ ಯಾರ್ಡ್ ಪೊಲೀಸ್ ಠಾಣೆ–ಯ ದೂ.08392–250033, ಮೊ.9480803096 ಅಥವಾ ಬಳ್ಳಾರಿ ಪೊಲೀಸ್ ಕಂಟ್ರೋಲ್ ರೂಂ ದೂ:08392–258100 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

# ವಾರಸುದಾರರ ಪತ್ತೆಗೆ ಮನವಿ

**ಮಲ್ಲಮ್ಮ ನುಡಿ ವಾರ್ತೆ**

ಬಳ್ಳಾರಿ,ಸೆ.16–ನಗರದ ಎಪಿಎಂಸಿ ಯಾರ್ಡ್ ಪೊಲೀಸ್ ಠಾಣೆ ವ್ಯಾಪ್ತಿಯ ಅಂದಾಜು 35–40 ವರ್ಷದ ಅನಾಮಧೇಯ ವ್ಯಕ್ತಿಯನ್ನು ಅಪರಿಚಿತ ವ್ಯಕ್ತಿಗಳಿಂದ ಯಾವುದೋ ಉದ್ದೇಶಕ್ಕಾಗಿ ಕಲ್ಲುಗಳಿಂದ ಹೊಡೆದು ಸೆ.04 ರಂದು ಕೊಲೆ ಮಾಡಿದ್ದು, ಈ ಕುರಿತು ಪ್ರಕರಣ ದಾಖಲಾಗಿದ್ದು, ಮೃತನ ವಾರಸುದಾರರ ಪತ್ತೆಗೆ ಸಹಕರಿಸಬೇಕು ಎಂದು ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಮನವಿ ಮಾಡಿದ್ದಾರೆ.

ಮೃತನ ಚಹರೆ: ಎತ್ತರ ಅಂದಾಜು 5.7 ಅಡಿ, ದುಂಡು ಮುಖ, ಗೋಧಿ ಮೈ ಬಣ್ಣ, ತಲೆಯಲ್ಲಿ ಅಂದಾಜು 3–1/2 ಇಂಚು ಉದ್ದದ ಬಿಳಿ ಮಿಶ್ರಿತ ಕಪ್ಪು ಬಣ್ಣದ ಕೂದಲು, ಅರ್ಧ ಇಂಚು ಉದ್ದದ ಕಪ್ಪು ಮೀಸೆ ಮತ್ತು 1 ಇಂಚು ಉದ್ದದ ಕಪ್ಪು ಮಿಶ್ರಿತ ಬಿಳಿ ಗಡ್ಡ ಇರುತ್ತದೆ. ಮೃತನ ಬಲಗಡೆ ಕಣ್ಣಿನ ಮೇಲೆ ಮತ್ತು ಹಣೆಯ ಎಡಭಾಗದ ಮೇಲೆ ಭಾರಿಗಾಯ ಇರುತ್ತದೆ. ಮೃತನ ಮೈಮೇಲೆ ಮಾಸಿದ ಕೆಂಪು ಮತ್ತು ಕಪ್ಪು ಬಣ್ಣದ ಬಿಳಿ ಗೆರೆಗಳುಳ್ಳ ಪಟ್ಟಿ ಅಂಗಿ ಹಾಗೂ ನೀಲಿ ಬಣ್ಣದ ಜೀನ್ಸ್ ಪ್ಯಾಂಟ್ ಹೊಂದಿರುತ್ತಾನೆ. ಈ ಮೇಲ್ಕಂಡ ಚಹರೆ ಗುರುತುಗಳುಳ್ಳ ವ್ಯಕ್ತಿಯ ವಾರಸುದಾರರ ಬಗ್ಗೆ ಮಾಹಿತಿ ಸಿಕ್ಕಲ್ಲಿ ಬಳ್ಳಾರಿ ಎಪಿಎಂಸಿ ಯಾರ್ಡ್ ಪೊಲೀಸ್ ಠಾಣೆಯ ದೂ.08392–250033, ಮೊ.9480803096 ಅಥವಾ ಬಳ್ಳಾರಿ ಪೊಲೀಸ್ ಕಂಟ್ರೋಲ್ ರೂಂ ದೂ:08392–258100 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

# ಕರ್ನಾಟಕ ಮುಸ್ಲಿಂ ಯೂನಿಯನ್ ಸಂಘಟನೆಗೆ ಒತ್ತು



**ಮಲ್ಲಮ್ಮ ನುಡಿ ವಾರ್ತೆ**

ಕೊಪ್ಪಳ : ನಗರದ ಪ್ರವಾಸಿ ಮಂದಿರದಲ್ಲಿಂದು ಕರ್ನಾಟಕ ಮುಸ್ಲಿಂ ಯುನಿಟಿಯ ಕೊಪ್ಪಳ ಜಿಲ್ಲಾ ಅಧ್ಯಕ್ಷರಾದ ಮೊಹಮ್ಮದ್ ಜಿಲಾನ್ ಕಿಲ್ಲೇದಾರರವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಸಮಿತಿಯ ಸಭೆ ಕರೆಯಲಾಗಿತ್ತು, ಸಭೆಯಲ್ಲಿ ಜಿಲ್ಲಾ ಸಮಿತಿಗೆ ವಕ್ತಾರರನ್ನಾಗಿ ನಜೀರ್ ಅಹ್ಮದ್ ಮುದಗಲ್ ರವರನ್ನು ಆಯ್ಕೆ ಮಾಡಲಾಯಿತು. ಜಿಲ್ಲೆಯ ಎಲ್ಲಾ ತಾಲೂಕ ಸಮಿತಿಗಳನ್ನು ತ್ವರಿತವಾಗಿ ರಚನೆ ಮಾಡುವಂತೆ ಹಾಗೂ ಜಿಲ್ಲಾ ಮತ್ತು ತಾಲೂಕುಗಳ ಮಹಿಳಾ ಘಟಕ ಹಾಗೂ ಜಿಲ್ಲಾ ಮತ್ತು ಎಲ್ಲ ತಾಲೂಕುಗಳ ಯುವ ಘಟಕದ ಪದಾಧಿಕಾರಿಗಳನ್ನು ನೇಮಕ ಮಾಡುವಂತೆ ಸಭೆಯಲ್ಲಿ ತಿರ್ಮಾನಿಸಲಾಯಿತು, ಈ ಸಂದರ್ಭದಲ್ಲಿ ಜಿಲ್ಲಾ ಉಪಾಧ್ಯಕ್ಷರಾದ ಸೀರಾಜುದ್ದೀನ ಮನಿಯಾರ್, ಜಿಲ್ಲಾ ಕಾರ್ಯದರ್ಶಿಗಳಾದ ಮುಸ್ತಫಾ ಕುದರಿಮೋತಿ, ಸದಸ್ಯರಾದ ಆಶಿಫ್ ಕರ್ಕಿಹಳ್ಳಿ. ಗಫಾರ್ ದಿಡ್ಡಿ ಮತ್ತು ಅಜೀಜ್ ಮಾನ್ವಿಕರ್, ಸೈಯದ್ ನಾಸೀರ್ ಹುಸೇನಿ, ಕೊಪ್ಪಳ ತಾಲೂಕಾ ಅಧ್ಯಕರಾದ ಫಕ್ರುಸಾಬ್ ನದಾಫ್, ತಾಲೂಕಾ ಕಾರ್ಯದರ್ಶಿ ಹಜರತ್‌ಅಲಿ ಮುಜಾವರ್, ಸಂಘಟನಾ ಕಾರ್ಯದರ್ಶಿ ಖಾಸಿಂಸಾಬ ಹಲಗೇರಿ ಹಾಗೂ ಕಾರಟಗಿ ತಾಲೂಕ ಅಧ್ಯಕ್ಷರಾದ ಅಮರುಲ್ ಸಾಬ, ಮುಸ್ತಫಾ, ಚಾಂದಪಾಷಾ ಬಸಾಪುರ, ಮುಸ್ತಫಾ ಬಸಾಪುರ, ಸೀರಾಜ್ ಸಾಬ ತಳಕಲ್ಲ, ಲೇಬಗೇರಿ ಜಿಲ್ಲಾ ಪಂಚಾಯತ್ ಘಟಕದ ಅಧ್ಯಕ್ಷರಾದ ಬಾಷಾ ಹಿರೇಮನಿ, ಸಲೀಂ ಕೊತ್ವಾಲ್ ಇತರರು ಉಪಸ್ಥಿತರಿದ್ದರು.

# ಮುದ್ನಾಳ ಪುಣ್ಯಸ್ಮರಣೆ; ಭರದಿಂದ ಸಾಗಿದ ಸಿದ್ಧತೆ
# 15 ಸಾವಿರ ಜನ ಪಾಲ್ಗೊಳ್ಳುವ ನಿರೀಕ್ಷೆ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ:ಸೆ.16: ಮಾಜಿ ಶಾಸಕ ದಿ.ವೆಂಕಟರಡ್ಡಿ ಮುದ್ನಾಳ್ ಅವರ ಪ್ರಥಮ ಪುಣ್ಯಸ್ಮರಣೆ ಕಾರ್ಯಕ್ರಮ ಬುಧವಾರ ಇಲ್ಲಿನ ಮುದ್ನಾಳ್ ಲೇಔಟ್ ನಲ್ಲಿ ನಡೆಯಲಿದ್ದು ಸಮಾರಂಭದ ಸಿದ್ಧತೆ ಭರದಿಂದ ನಡೆಯುತ್ತಿದೆ.

ಕಾರ್ಯಕ್ರಮದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಸೇರಿದಂತೆ ಹಲವು ರಾಜಕೀಯ ಗಣ್ಯರು ಹಾಗೂ ನಾಡಿನ ಹರ,ಗುರು, ಚರಮೂರ್ತಿಗಳು ಆಗಮಿಸಲಿದ್ದಾರೆ. ಇನ್ನೂ ಯಾದಗಿರಿ ಮತಕ್ಷೇತ್ರ ಸೇರಿದಂತೆ ನೆರೆಯ ರಾಯಚೂರು, ಬೀದರ್ ಕಲಬುರಗಿ ನಗರಗಳಿಂದಲೂ ಸಹ ವೆಂಕಟರಡ್ಡಿ ಅಭಿಮಾನಿಗಳು ಆಗಮಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಸುಮಾರು 15 ಸಾವಿರಕ್ಕೂ ಹೆಚ್ಚು ಜನ ಆಗಮಿಸುವ ನಿರೀಕ್ಷೆ ಇದೆ ಎಂದು ಬಿಜೆಪಿ ಯುವ ನಾಯಕ ಮಹೇಶರಡ್ಡಿ ಮುದ್ನಾಳ್ ಮಾಹಿತಿ ನೀಡಿದರು.

ಸಮಾರಂಭಕ್ಕೆ ಆಗಮಿಸುವ ಜನತೆಗೆ ಹುಗ್ಗಿ, ಅನ್ನ, ಸಾಂಬಾರ್ ಮತ್ತು ಬದನೆಕಾಯಿ ಪಲ್ಯದ ವ್ಯವಸ್ಥೆ ಮಾಡಲಾಗಿದೆ. ಅಲ್ಲದೆ, ಸೂಕ್ತ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ ಎಂದರು.

ಈ ಸಂದರ್ಭದಲ್ಲಿ ಹಣಮಂತರಡ್ಡಿಗೌಡ ಮುದ್ನಾಳ,ರಾಚನಗೌಡ ಮುದ್ನಾಳ, ಮಲ್ಲಣ್ಣಗೌಡ ಪಾಟೀಲ್ ಹತ್ತಿಕುಣಿ, ಖಂಡಪ್ಪ ದಾಸನ,ಸಿದ್ದಣ್ಣ ಗೌಡ ಕಾಡನೂರ,ಶರಣುಗೌಡ ಬಾಡಿಯಾಳ, ರುದ್ರುಗೌಡ ಪಾಟೀಲ್,ಪರುಶುರಾಮ ಕುರಕುಂದಿ,ನಗರಸಭೆ ಮಾಜಿ ಅಧ್ಯಕ್ಷ ವಿಲಾಸ ಪಾಟೀಲ್,ನಗರ ಮಂಡಲ ಅಧ್ಯಕ್ಷ ಲಿಂಗಪ್ಪ ಹತ್ತಿಮನಿ, ರಾಮರೆಡ್ಡಿ ಅಣಬಿ ಹೆಡಗಿಮದ್ರಾ, ಸುರೇಶ್ ರಾಠೋಡ,ಶರಣುಗೌಡ ಕಾಳೇಬೆಳಗುಂದಿ, ಚಂದ್ರಶೇಖರ ಕಡೆಸೂರ್,ಮಹಾದೇವಪ್ಪ ಗಣಪುರ, ಶಂಕರ್ ಪಾಂಚಾಳ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ನಿಖಿಲ್ ಕುಮಾರಸ್ವಾಮಿ ಬೀದರ್ ಜಿಲ್ಲಾ ಸಂಚಾರ: ಬೆಳೆ, ಮನೆ ಹಾನಿ ವೀಕ್ಷಣೆ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಸೆ. 16 : ಜೆಡಿಎಸ್ ಯುವ ಘಟಕದ ರಾಜ್ಯ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ಮಂಗಳವಾರ ಬೀದರ್ ಜಿಲ್ಲಾ ಪ್ರವಾಸ ಕೈಗೊಂಡು, ಜಿಲ್ಲೆಯಲ್ಲಿ ಭಾರಿ ಮಳೆ ಮತ್ತು ಪ್ರವಾಹದಿಂದ ಹಾನಿಗೊಳಗಾದ ಪ್ರದೇಶಗಳಿಗೆ ಭೇಟಿ ನೀಡಿದರು. ರೈತರನ್ನು ಭೇಟಿ ಮಾಡಿ ಸಾಂತ್ವನ ಹೇಳಿದರು. ಸರ್ಕಾರ ಕೈಗೊಂಡಿರುವ ನೆರೆ ಪರಿಹಾರ ಕಾರ್ಯಗಳ ಬಗ್ಗೆ ಪರಿಶೀಲನೆ ನಡೆಸಿ, ಮಾಹಿತಿ ಪಡೆದರು. ಜೆಡಿಎಸ್ ಪಕ್ಷದ ಮುಖಂಡರು, ಕಾರ್ಯಕರ್ತರೊಂದಿಗೆ ಬೀದರ್ ಉತ್ತರ ವಿಧಾನಸಭಾ ಕ್ಷೇತ್ರದ ಮರಕಲ್, ಅಲಿಯಂಬರ್, ಇಸ್ಲಾಂಪೂರ, ಜಾಂಪಾಡ್ ಗ್ರಾಮಗಳ ರೈತರ ಜಮೀನುಗಳಿಗೆ ಭೇಟಿ ನೀಡಿದರು. ಮರಕಲ್ ಹಾಗೂ ಇತರೆ ಗ್ರಾಮಗಳಲ್ಲಿ ಹಾನಿಗೊಳಗಾದ ಮನೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ನಿಖಿಲ್ ಕುಮಾರಸ್ವಾಮಿರವರು, ಮನೆ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿದ ಸಂತ್ರಸ್ತರಿಗೆ ಪಕ್ಷದಿಂದ ಧನ ಸಹಾಯ ಮಾಡಿದರು. ಈ ವೇಳೆ ಮಾತನಾಡಿದ ಅವರು,ನಾನು ಈಗಾಗಲೇ ಕಲ್ಯಾಣ ಕರ್ನಾಟಕ ಭಾಗದ ಕಲಬುರಗಿ ಮತ್ತು ಬೀದರ್ ಜಿಲ್ಲೆಯ ಪ್ರವಾಸ ಮಾಡ್ತಿದ್ದೇನೆ. ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ರೈತರು, ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಅಪಾರ ಪ್ರಮಾಣದ ಬೆಳೆ ಹಾನಿ ಉಂಟಾಗಿದೆ. ಸಾಕಷ್ಟು ಜನರು ಮನೆ ಕಳೆದುಕೊಂಡು ಸಮಸ್ಯೆಗೆ ಸಿಲುಕಿದ್ದಾರೆ. ರಾಜ್ಯ ಸರ್ಕಾರ ಕೂಡಲೇ ಬೆಳೆ ಕಳೆದುಕೊಂಡ ರೈತರ ಮತ್ತು ಮನೆ ಸಂತ್ರಸ್ತರ ನೆರವಿಗೆ ಧಾವಿಸಬೇಕು. ಮಳೆಯಿಂದಾಗಿ ಉಂಟಾಗಿರುವ ಹಾನಿಯ ಬಗ್ಗೆ ನಾನು ಕೇಂದ್ರ ಸರ್ಕಾರಕ್ಕೆ ಮಾಹಿತಿ ನೀಡಿ ಕೇಂದ್ರದಿಂದಲೂ ಪರಿಹಾರ ನೀಡುವಂತೆ ಮನವಿ ಮಾಡುತ್ತೇನೆ ಎಂದರು. ಜೆಡಿಎಸ್ ಪಕ್ಷದ ಮುಖಂಡ ಬಂಡೆಪ್ಪ ಕಾಶೆಂಪುರ್, ಜೆಡಿಎಸ್ ಜಿಲ್ಲಾಧ್ಯಕ್ಷ ರಮೇಶ್ ಪಾಟೀಲ್ ಸೋಲಪೂರ್, ರಾಜ್ಯ ಪ್ರಧಾನ ಕಾರ್ಯದರ್ಶಿ ಶಿವಕುಮಾರ್ ನಾಟೇಕರ್, ಪ್ರಮುಖರಾದ ಸೂರ್ಯಕಾಂತ್ ನಾಗಮಾರಪಳ್ಳಿ, ಐಲಿನ್ ಜಾನ್ ಮಠಪತಿ,ಅಶೋಕ್ ಕೊಡಗೆ, ಶಾಂತಲಿಂಗ ಸಾಳಗಿ, ರಾಜಶೇಖರ ಜವಳೆ, ದೇವೇಂದ್ರ ಸೋನಿ, ಲಲಿತಾ ಕರಂಜೆ,ಶಿವಪುತ್ರ ಮಾಳಗೆ, ಬಸವರಾಜ್ ಪಾಟೀಲ್ ಹಾರೂರಗೇರಿ,ರಾಜು ಚಿಂತಾಮಣಿ, ಸುದರ್ಶನ್ ಸುಂದರರಾಜ್, ಅಭಿ ಕಾಳೆ,ಬೊಮಗೊಂಡ ಚಿಟ್ಟಾವಾಡಿ, ರೇವಣಸಿದ್ದಪ್ಪಪಾಟೀಲ್,ಬಸವರಾಜ್ ಶಹಾಪೂರೆ,ಮಲ್ಲಿಕಾರ್ಜುನ ನೇಳಗೆ, ಪ್ರಶಾಂತ್ ವಿಶ್ವಕರ್ಮ,ಸಂಗು ಚಿದ್ರಿ, ಜಾಪೇಡ್ ಕಡ್ಯಾಳ, ತಾನಾಜಿ ತೋರಣೇಕರ್, ಮನೋಹರ್ ದಂಡೆ,ಅರುಣಕುಮಾರ್,ತರುಣ್ ನಾಗಮಾರಪಳ್ಳಿ ಸೇರಿದಂತೆ ಮತ್ತಿತರರು ಇದ್ದರು.

# ವಿದ್ಯಾರ್ಥಿಗಳು ಆತ್ಮಹತ್ಯೆಗೆ ಬಲಿಯಾಗಿ ಅಮೂಲ್ಯ ಜೀವನ ಕಳೆದುಕೊಳ್ಳಬಾರದು:ನ್ಯಾ.ಪ್ರಕಾಶ ಬನಸೋಡೆ



ಮಲ್ಲಮ್ಮ ನುಡಿ ವಾರ್ತೆ

ಬೀದರ, ಸೆ.16 : ವಿದ್ಯಾರ್ಥಿಗಳು ಜೀವನದಲ್ಲಿ ಗುರಿ ಇರಬೇಕು ಅದಕ್ಕೆ ಪ್ರಾಮಾಣಿಕವಾಗಿ ಪ್ರಯತ್ನ ಮಾಡಬೇಕು ಸಮಾಜದಲ್ಲಿ ಒಳ್ಳೆಯ ನಾಗರಿಕರಾಗಿ ಬದುಕಬೇಕು ಸಮಸ್ಯಗಳಿಗೆ ಹೆದರದೆ ಎದುರಿಸಿ ಬದುಕಬೇಕು ಯಾರು ಸಹ ಆತ್ಮಹತ್ಯಗೆ ಬಲಿಯಾಗಿ ತಮ್ಮ ಅಮೂಲ್ಯವಾದ ಜೀವನವನ್ನು ಕಳೆದುಕೊಳ್ಳಬಾರದೆಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಪ್ರಕಾಶ ಅರ್ಜುನ ಬನಸೋಡೆ ತಿಳಿಸಿದರು.

ಅವರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಬೀದರ,ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಮಾನಸಿಕ ಆರೋಗ್ಯ ಘಟಕ ಬೀದರ ಹಾಗೂ ಸಿದ್ಧಾರ್ಥ ಪದವಿ ಪೂರ್ವ ಕಾಲೇಜು ಬೀದರ ರವರ ಸಂಯುಕ್ತಾಶ್ರಯದಲ್ಲಿ ವಿಶ್ವ ಆತ್ಮಹತ್ಯ ತಡೆಗಟ್ಟುವ ದಿನಾಚರಣೆ ಕಾರ್ಯಕ್ರಮದಲ್ಲಿ ಸಸಿಗೆ ನೀರು ಹಾಕುವು ಮೂಲಕ ಉದ್ಘಾಟಿಸಿ ಮಾತನಾಡಿದರು.

ಆತ್ಮಹತ್ಯವು ಪ್ರಯತ್ನ ಮಾಡುವುದು ಸೆಕ್ಷನ್ 306ರ ಅಡಿಯಲ್ಲಿ ಅಪರಾಧವಾಗಿರುತ್ತದೆ ನಮ್ಮ ಕಾನೂನಿನಲ್ಲಿ ಬದುಕುವ ಹಕ್ಕು ನೀಡಿದೆ ಆದರೆ ಸಾಯುವ ಹಕ್ಕು ಯಾರಿಗೂ ನೀಡಿರುವುದಿಲ್ಲ ಒಂದು ವೇಳೆ ತಮ್ಮ ಜೀವನದಲ್ಲಿ ಆತಂಕ, ಖಿನ್ನತೆ, ಭಯ, ಜಿಗುಪ್ಸೆ, ಒತ್ತಡ ಇತರೆ ಮಾನಸಿಕ ಕಾಯಿಲೆಗಳು ಕಂಡು ಬಂದಲ್ಲಿ ಮಾನಸಿಕ ವಿಭಾಗಕ್ಕೆ ಭೇಟಿ ನೀಡಿ ಆಪ್ತಸಮಾಲೋಚನೆ ಮಾಡುಕೊಳ್ಳುವ ಮೂಲಕ ಪರಿಹಾರ ಪಡೆಯಬಹುದು. ಹಾಗೂ ಹೆಣ್ಣು ಮಕ್ಕಳಿಗೆ ಕಿರುಕುಳ ಮತ್ತು ಅಪ್ರಾಪ್ತ ಬಾಲಕಿಯರ ಮೇಲೆ ಲೈಂಗಿಕ ಕಿರುಕುಳ ನೀಡಿದಲ್ಲಿ ಪೋಕ್ಸೋ ಕಾಯ್ದೆಡಿಯಲ್ಲಿ ಪ್ರಕರಣ ದಾಖಲಿಸ ಬಹುದು ಎಂದು ತಿಳಿಸಿದರು.

ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ಅಧಿಕಾರಿ ಡಾ.ಕಿರಣ ಎಮ್ ಪಾಟೀಲ ಮಾತನಾಡಿ,2025ರ ಘೋಷಣೆ "ಆತ್ಮಹತ್ಯೆಯ ಕುರಿತಾದ ನಿರೂಪಣೆಯನ್ನು ಬದಲಾಯಿಸುವುದು" ಯಾಗಿದು ದೇಶದಲ್ಲಿ ಪ್ರತಿ ಒಂದು ನಿಮಿಷಕ್ಕೆ ಒಬ್ಬರು ಆತ್ಮ ಹತ್ಯಗೆ ಒಳಗಾಗುತ್ತಿದ್ದಾರೆ ಆದರಿಂದ ಮನಸ್ಸಿನಲ್ಲಿ ಯಾವಾಗಲೂ ಧನಾತ್ಮಕ ಯೋಚನೆಗಳನ್ನು ಮಾಡಬೇಕೆಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು. ಮಹಾತ್ಮ ಪುರುಷರ ಧರ್ಮಗುರುಗಳ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕು. ವಿದ್ಯಾರ್ಥಿಗಳು ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು ಯೋಗ ಧ್ಯಾನವನ್ನು ರೂಢಿಸಿಕೊಳ್ಳಬೇಕು ಹಾಗೂ ಟೋಲ್ ಫ್ರೀ ನಂ 14416 ಗೆ ಕರೆಯನ್ನು ಮಾಡಿ ಸಲಹೆ ಪಡೆದುಕೊಳ್ಳಬಹುದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ಮನೋವೈದ್ಯರಾದ ಡಾ. ಅಮಲ್ ಶರಿಫ್ ಅವರು ವಿಶೇಷ ಉಪನ್ಯಾಸ ನೀಡಿದರು ಈ ಕಾರ್ಯಕ್ರಮದಲ್ಲಿ ಸಿದ್ಧಾರ್ಥ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ಪ್ರಭು,ಜಿಲ್ಲಾ ಆನೆಕಾಲು ರೋಗ ನಿಯಂತ್ರಣಾ ಘಟಕದ ಹಿರಿಯ ಆರೋಗ್ಯ

ನಿರೀಕ್ಷಣಾಧಿಕಾರಿ ವೀರಶೆಟ್ಟಿ ಚನ್ನಶೆಟ್ಟಿ, ಪರಶುರಾಮ ಸಿಂದೆ, ಶಿವರಾಜ, ಅನೀಲಕುಮಾರ ಸೇರಿದಂತೆ ಸಿಬ್ಬಂದಿಗಳಾದ ಬ್ರಮಾರಂಬಾದೇವಿ, ಕಾಲೇಜಿನ ಎಲ್ಲಾ ಸಿಬ್ಬಂದಿವರ್ಗದವರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಎರಡು ಬಾರಿ ಕಚ್ಚಿದ್ರೆ ಬೀದಿ ನಾಯಿಗೆ ಜೀವಾವಧಿ ಶಿಕ್ಷೆ

ಮಲ್ಲಮ್ಮ ನುಡಿ ವಾರ್ತೆ

ಲಕ್ನೋ:ಸೆ.16: ಉತ್ತರ ಪ್ರದೇಶ ಸರ್ಕಾರ ಬೀದಿ ನಾಯಿಗಳ ದಾಳಿಯನ್ನು ತಡೆಯಲು ದಿಟ್ಟ ಕ್ರಮ ಕೈಗೊಂಡಿದೆ. ಪ್ರಚೋದನೆ ಇಲ್ಲದೆ ಮನುಷ್ಯರನ್ನು ಮೊದಲ ಸಲ ಕಚ್ಚಿದ್ರೆ ಅದನ್ನು 10 ದಿನಗಳವರೆಗೆ ಪ್ರಾಣಿ ಕೇಂದ್ರದಲ್ಲಿ ಇರಿಸಲಾಗುತ್ತದೆ. ಮತ್ತೆ ಅದೇ ತಪ್ಪನ್ನು ಅದು ಮುಂದುವರಿಸಿದರೆ ಅದಕ್ಕೆ ಜೀವಾವಧಿ ಶಿಕ್ಷೆ ವಿಧಿಸಲು ಸರ್ಕಾರ ನಿರ್ಧರಿಸಿದೆ.ಶಿಕ್ಷೆಗೆ ಗುರಿಯಾದ ನಾಯಿಗಳಿಗೆ ಬಚಾವ್ ಆಗಲು ಇರುವ ಏಕೈಕ ಮಾರ್ಗವೆಂದರೆ ಯಾರಾದರೂ ಅವುಗಳನ್ನು ದತ್ತು ತೆಗೆದುಕೊಳ್ಳಬೇಕು. ದತ್ತು ತೆಗೆದುಕೊಳ್ಳಬೇಕಾದರೆ ಮತ್ತೆ ಅವುಗಳನ್ನು ಬೀದಿಗಳಲ್ಲಿ ಬಿಡುವುದಿಲ್ಲ ಎಂದು ಅಫಿಡವಿಟ್ ಸಲ್ಲಿಸಬೇಕು. ಈ ಬಗ್ಗೆ ಗ್ರಾಮೀಣ ಮತ್ತು ನಗರ ನಾಗರಿಕ ಸಂಸ್ಥೆಗಳಿಗೆ ಪ್ರಧಾನ ಕಾರ್ಯದರ್ಶಿ ಅಮೃತ್ ಅಭಿಜತ್ ಹೊರಡಿಸಿದ ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಬೀದಿ ನಾಯಿ ಕಚ್ಚಿದ ನಂತರ ಯಾರಾದರೂ ರೇಬೀಸ್ ತಡೆಗೆ ಲಸಿಕೆಯನ್ನು ತೆಗೆದುಕೊಂಡರೆ, ತನಿಖೆ ಮಾಡಲಾಗುತ್ತದೆ.








ಕಲಬುರಗಿ: ಬಸವಪಟ್ಟಣ, ಜೋಗೂರ, ಹೇರೂರು ಬಿ, ಅವರಾದ ಕವಲಗಾ ಕೆ ಹಾಗೂ ವಿವಿಧ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಮುಖ್ಯ ಸೇತುವೆ ಕವಲಗಾ ಬಿ ಗ್ರಾಮದ ಹಳ್ಳದ ಸೇತುವೆಯ ಮೇಲೆ ಅತಿಯಾದ ಮಳೆಯಿಂದ ನೀರು ಆವರಿಸಿದ್ದು ಎಲ್ಲ ಗ್ರಾಮಗಳಿಗೆ ಹೋಗಲು ಬರಲು ಜನರಿಗೆ ತೀವ್ರ ತೊಂದರೆಯಾಗಿದ್ದು ಜನರ ಪರದಾಡುವ ಸ್ಥಿತಿ ಕಂಡು ಬಂದಿತ್ತು ಪ್ರತಿ ವರ್ಷವೂ ಈ ರೀತಿಯ ತೊಂದರೆಯಾಗುತ್ತಿದ್ದು ಸೇತುವೆಯನ್ನು ಎತ್ತರಿಸಿ ನಿರ್ಮಿಸಬೇಕೆಂದು ಜನರು ಅಳಲು ತೋಡಿಕೊಂಡರು ಸಂಬಂಧಿಸಿದ ಅಧಿಕಾರಿಗಳು ಈ ಕಡೆ ಗಮನ ಹರಿಸಲು ಗ್ರಾಮಸ್ಥರು ಮನವಿ ಮಾಡಿದ್ದಾರೆ.

# ಜಾತಿ ವ್ಯವಸ್ಥೆ ವಿರುದ್ಧ ಹೋರಾಡಿದ ಮಹಾನ್ ಪುರುಷರಲ್ಲಿ ಬ್ರಹ್ಮಶ್ರೀ ನಾರಾಯಣ ಗುರುಗಳು ಒಬ್ಬರು



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಸೆ.16: ಜಾತಿ ರಹಿತ ಸಮಾಜ ನಿರ್ಮಾಣ ಮಾಡುವ ನಿಟ್ಟಿನಲ್ಲಿ 19 ಮತ್ತು 20ನೇ ಶತಮಾನದಲ್ಲಿ ಜಾತಿ ವ್ಯವಸ್ಥೆ ವಿರುದ್ಧ ಹೋರಾಡಿದ ಮಹಾನ್ ಪುರುಷರಲ್ಲಿ ಒಬ್ಬರಾಗಿದ್ದಾರೆ ಎಂದು ವಿಧಾನ ಪರಿಷತ್‌ನ ಸದಸ್ಯ ಬಿ.ಕೆ. ಹರಿಪ್ರಸಾದ್ ಹೇಳಿದರು.

ಬುಧವಾರ ಜಿಲ್ಲಾಡಳಿತ,ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರುಗಳ ಸಂಯುಕ್ತಾಶ್ರಯದಲ್ಲಿ ಇಲ್ಲಿನ ಡಾ.ಎಸ್. ಎಂ.ಪಂಡಿತ್ ರಂಗಮಂದಿರದಲ್ಲಿ ಆಯೋಜಿಸಿದ್ದ ಬ್ರಹ್ಮಶ್ರೀ ನಾರಾಯಣ ಗುರುಗಳ 171ನೇ ಜಯಂತ್ಯೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕಲಬುರಗಿಯಲ್ಲಿ ನಾರಾಯಣ ಗುರುಗಳ ಜಯಂತಿಯನ್ನು ಇಷ್ಟೊಂದು ಅದ್ದೂರಿಯಾಗಿ ಆಚರಣೆ ಮಾಡುತ್ತಾರೆ ಎಂದು ನಾನು ಅಂದುಕೊಂಡಿರಲ್ಲಿಲ್ಲ. ನಿಜವಾಗಿಯೂ ತುಂಬಾ ಸಂತೋಷವಾಗುತ್ತಿದೆ. ಒಂದೇ ಜಾತಿ ಒಂದೇ ಮತ, ಒಬ್ಬನೇ ದೇವರೆಂದು, ಗುರುಗಳು ಸಾರಿದ ತತ್ವವನ್ನು ನಾವೆಲ್ಲರೂ ಪಾಲಿಸಬೇಕು ಎಂದು ಕರೆ ನೀಡಿದರು.

ಅರವಿಪುರಂನಲ್ಲಿ ದೇವಾಲಯವನ್ನು ನಿರ್ಮಿಸಿ ಶೂದ್ರರಿಗೆ ಹಾಗೂ ದಲಿತರಿಗೆ ಹಾಗೂ ಶೋಷಣೆಗೆ ಒಳಗಾದ ಜಾನಾಂಗಕ್ಕೆ ದೇವಾಲಯವನ್ನು ಪ್ರವೇಶಿಸಿ ಪೂಜೆ ಮಾಡುವ ವ್ಯವಸ್ಥೆಯನ್ನು ಕಲ್ಪಿಸಿ ಕೊಟ್ಟ ಮಹಾನ ವ್ಯಕ್ತಿ ಬ್ರಹ್ಮಶ್ರೀ ನಾರಾಯಣ ಗುರುಗಳು ಎಂದ ಅವರು, ಬ್ರಹ್ಮಶ್ರೀ ಗುರುಗಳು ಒಂದು ಜನಾಂಗ, ಜಾತಿಗೆ ಸೇರಿದವರಲ್ಲ, ಸಕಲ ಮಾನವರ ಏಳಿಗೆಗೆ ದುಡಿದ ಸಾಮಾಜಿಕ ಕ್ರಾಂತಿಯ ಹರಿಕಾರರಾಗಿದ್ದಾರೆ ಎಂದರು. ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದ ಪೂಜ್ಯ ಡಾ. ಪ್ರಣವಾನಂದ ಮಹಾಸ್ವಾಮಿಗಳು ಮಾತನಾಡಿ, ಕಲ್ಯಾಣ ಕರ್ನಾಟಕ ಭಾಗದಲ್ಲಿ ಈಡಿಗ ಸಮಾಜವನ್ನು ಬಹಳಷ್ಟು ನೋವು ಪೆಟ್ಟನ್ನು ತಿಂದಿದೆ. ಕಳೆದ ನಾಲ ವರ್ಷಗಳಿಂದ ನಿರಂತರ ಹೋರಾಟ ಮಾಡುತ್ತಾ ಬಂದಿದ್ದೆವೆ. ಈಡಿಗ ಸಮಾಜದ 16 ಬೇಡಿಕೆಗಳನ್ನು ಸರ್ಕಾರದ ಮುಂದಿಡಲು ಮುಂದಿನ ಜನೇವರಿ ಮಾಹೆಯಲ್ಲಿ ಕರದಾಳ ಶಕ್ತಿಪೀಠದಿಂದ ಬೆಂಗಳೂರು ಫ್ರೀಡಂ ಪಾರ್ಕ್ ವರೆಗೆ ಪಾದಯಾತ್ರೆ ಹಮ್ಮಿಕೊಂಡಿದ್ದು,ಸಮಾಜ ಬಾಂಧವರು ಇದಕ್ಕೆ ಸಹಕಾರ ನೀಡಬೇಕೆಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ಅಲ್ಲಮಪ್ರಭು ಪಾಟೀಲ ಮಾತನಾಡಿ, 12ನೇ ಶತಮಾನದಲ್ಲಿ ಬಸವಣ್ಣನವರು ಸಾರಿದಂತೆ ಜಾತಿ ರಹಿತ ಸಮಾಜ ನಿರ್ಮಿಸುವಲ್ಲಿ ಬ್ರಹ್ಮಶ್ರೀ ಕೊಡುಗೆ ಅಪಾರವಾಗಿದೆ. ಗುರುಗಳ ಮಾರ್ಗದರ್ಶನದಲ್ಲಿ ನಾವೆಲ್ಲರು ಸಾಗಬೇಕಾಗಿದೆ ಎಂದರು. ವಿಧಾನ ಪರಿಷತ್ ಶಾಸಕ ತಿಪ್ಪಣ್ಣಪ್ಪ ಕಮಕನೂರ ಅವರು ಸಹ ಮಾತನಾಡಿದರು.

ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಮಾಜದ 23 ಜನ ಸಾಧಕರಿಗೆ ಜಿಲ್ಲಾ ಮಟ್ಟದ ಬ್ರಹ್ಮ ಶ್ರೀ ನಾರಾಯಣ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕಾರ್ಯಕ್ರಮದಲ್ಲಿ ಪಾಳಾದ ಮೂಕ ಕಟ್ಟಿಮನಿ ಹಿರೇಮಠದ ಪೂಜ್ಯರಾದ ಗುರುಮೂರ್ತಿ ಶಿವಾಚಾರ್ಯರು, ಚಿತ್ರದುರ್ಗದ ಕುಂಬಾರ ಗುರುಪೀಠದ ಬಸವಮೂರ್ತಿ ಕುಂಬಾರ ಗುಂಡಯ್ಯ ಸ್ವಾಮೀಜಿ, ವಿಧಾನ ಪರಿಷತ್ ಶಾಸಕ ಜಗದೇವ ಗುತ್ತೇದಾರ, ಕಲಬುರಗಿ ಮಹಾನಗರ ಪಾಲಿಕೆ ಮೇಯರ್ ವರ್ಷಾ ರಾಜೀವ್ ಜಾನೆ, ನಟ ವಿಜಯ ರಾಘವೇಂದ್ರ, ಮುಖಂಡರಾದ ರಾಜು ಬಿ.ಗುತ್ತೇದಾರ, ಹರ್ಷಾನಂದ ಎಸ್. ಗುತ್ತೆದಾರ, ರಾಜೇಶ ಡಿ.ಗುತ್ತೇದಾರ,ವಿನಯ್ ಬಿ. ಗಯತ್ತೇದಾರ ಸೇರಿದಂತೆ ಸಮಾಜದ ಅನೇಕ ಮುಖಂಡರು ಉಪಸ್ಥಿತರಿದ್ದರು.ಕ.ರಾ.ಪ್ರಾ.ಶಾ.ಶಿ.ಸಂಘದ ಅಧ್ಯಕ್ಷ ಮಲ್ಲಯ್ಯ ಬಿ.ಗುತ್ತೇದಾರ ನಿರೂಪಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕಿ ಜಗದೀಶ್ವರಿ ನಾಶಿ ಸ್ವಾಗತಿಸಿದರು. ಬಸಯ್ಯ ಬಿ.ಗುತ್ತೇದಾರ ತೆಲ್ಲೂರ ಮತ್ತು ತಂಡ ಗೀತ ಗಾಯನ ನಡೆಸಿಕೊಟ್ಟರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.
Editor: Ramesh Reddy, Office Ph. No: +91 9449732000.